ಚಿಂತನ ಬಯಲು

ತ್ರೈಮಾಸಿಕ

ISSN 2278-2192

ಸಂಪುಟ : 8, ಸಂಚಿಕೆ : 1 ಜುಲಾಯಿ – ಸಪ್ಟೆಂಬರ್ 2019

Volume : 8, Issue : 1 July - September 2019

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 8, Issue 1, July - September 2019

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Size : Dy 1/8

Paper Used : 70 GSM

Pages : 64

Price : Rs. 50

ಮುಖಪುಟ ಚಿತ್ರ : **ಸಾರಾನಾಥದಲ್ಲಿ ಬುದ್ಧೋಪದೇಶದ ಶಿಲ್ಪ (ಕ್ರಿ.ಶ. 200–300)**

Cover Photo by : **Girisha Bhat**

Cover Design : **Kallur Nagesh**

Designed & Printed at :
Aakrithi Prints
Maximus Complex
Light House Hill Road
Mangaluru - 575 001
Tel. : 0824 2443002

ಸೂಚನೆ : ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. ಸಂಸ್ಕೃತಿಯ ವಾಹಕವಾಗಿ ಕನ್ನಡ ಪಠ್ಯ ಪುಸ್ತಕ
❖ ಎನ್. ಶಿವಪ್ರಕಾಶ್ / 5

2. ಹಳಗನ್ನಡ ಸಾಂಸ್ಕೃತಿಕ ಪದಕೋಶ : ಒಂದು ವಿಮರ್ಶೆ
❖ ಡಾ. ಮಾಧವ ಪೆರಾಜೆ / 15

3. ನವ ಚಾರಿತ್ರಿಕತೆ : ಈಗಿನ ಸಾಹಿತ್ಯ ಚಳುವಳಿ
❖ ಡಾ. ಬಿ. ಜನಾರ್ದನ ಭಟ್ / 33

4. ಕನ್ನಡ ಭಾಷಾಂತರ ಸಾಹಿತ್ಯ: ಅಧ್ಯಯನ ವಿಧಾನಗಳು
❖ ಡಾ. ಮೋಹನ ಕುಂಟಾರ್ / 46

5. ಅಕಟಕಟ ಸಂಸಾರವನು ನೆಚ್ಚಿಕೆಡಬ್ಯಾಡ
❖ ಡಾ. ಶ್ರೀಪಾದ ಭಟ್ / 60

ಸಂಪಾದಕೀಯ

ಭಾಷಾ ಪಠ್ಯಪುಸ್ತಕಗಳಿಗೆ ಶಿಕ್ಷಣ ವ್ಯವಸ್ಥೆಯಲ್ಲಿ ಬಹಳ ಮುಖ್ಯಸ್ಥಾನವಿದೆ. ಸಾಮಾನ್ಯವಾಗಿ ಮೌಲ್ಯಗಳನ್ನು ಮತ್ತು ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ದಾಟಿಸುವ ಮಾಧ್ಯಮಗಳೆಂದು ಭಾಷಾ ಪಠ್ಯಪುಸ್ತಕಗಳನ್ನು ಪರಿಗಣಿಸ ಲಾಗುತ್ತದೆ. ಇಂಥ ಪಠ್ಯಪುಸ್ತಕಗಳನ್ನು ಅಧ್ಯಯನ ನಡೆಸಿ ಬರೆದ ಲೇಖನವೊಂದು ಈ ಸಂಚಿಕೆಯಲ್ಲಿದೆ. ಅದೇ ರೀತಿ ಹಳೆಗನ್ನಡ ಸಾಂಸ್ಕೃತಿಕ ಪದಕೋಶದ ವಿಮರ್ಶೆಯಿದೆ. ಈಚಿನ ಸಾಹಿತ್ಯದ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಯತ್ನವನ್ನು ಡಾ. ಬಿ. ಜನಾರ್ದನ ಭಟ್ ಅವರ ಲೇಖನ ಮಾಡುತ್ತದೆ. ಭಾಷಾಂತರ ಸಾಹಿತ್ಯದ ಬಗ್ಗೆ ಒಂದು ಲೇಖನ ಇದೆ. ಶ್ರೀಪಾದರಾಜರ ಕಿರ್ತನೆಯ ಬಗ್ಗೆ ಚರ್ಚೆ ಇದೆ. ಓದುಗರ ಅಭಿಪ್ರಾಯಗಳಿಗೆ ಸ್ವಾಗತ.

ಸಂಪಾದಕ

ಸಂಸ್ಕೃತಿಯ ವಾಹಕವಾಗಿ ಕನ್ನಡ ಪಠ್ಯ ಪುಸ್ತಕ

ಎನ್. ಶಿವಪ್ರಕಾಶ್
ಉಪನ್ಯಾಸಕರು
ಸರಕಾರಿ ಶಿಕ್ಷಕ ಶಿಕ್ಷಣ ಮಹಾವಿದ್ಯಾಲಯ, ಮಂಗಳೂರು

ಒಂದು ಸಮಾಜದ ಸಂಸ್ಕೃತಿ ಮತ್ತು ಅದರ ಬೆಳವಣಿಗೆಯು ಆ ಸಮಾಜದ ಜನರ ಭಾಷೆಯ ಮೂಲಕ ಅಭಿವ್ಯಕ್ತಗೊಳ್ಳುತ್ತದೆ. ಒಂದು ಜನಾಂಗದ ಪ್ರಾರಂಭದ/ ಇತಿಹಾಸಿಕ ಜೀವನ ಸಾಂಸ್ಕೃತಿಕ ಸ್ವರೂಪ ಮುಂತಾದವುಗಳನ್ನು ತಿಳಿಯಲು ಭಾಷೆ ಸಹಾಯಕವಾಗುತ್ತದೆ.

ಸಂಸ್ಕೃತಿ ಮಾನವನನ್ನು ದೈಹಿಕವಾಗಿ, ಬೌದ್ಧಿಕವಾಗಿ, ನೈತಿಕವಾಗಿ, ನಿರ್ಧರಿಸುತ್ತದೆ. ಅವನು ಆಡುವ ಭಾಷೆಯನ್ನು ನಿರ್ಣಯಿಸುತ್ತದೆ. ಸಂಸ್ಕೃತಿ ಸಂವಹನ ಮಾಧ್ಯಮವಾಗುವುದು ಭಾಷೆಯ ಮೂಲಕವೇ. ಭಾಷೆ ಮತ್ತು ಸಂಸ್ಕೃತಿಗೆ ಇರುವ ಸಂಬಂಧ ಅತಿ ನಿಕಟವಾದ್ದು. ಇವೆರಡು ಪರಸ್ಪರ ಪೂರಕವಾಗಿವೆ. ಭಾಷೆಯ ನೆರವಿಲ್ಲದೆ ಸಂಸ್ಕೃತಿ ಸಿದ್ಧಿಸುವುದಿಲ್ಲ, ನಾಗರೀಕತೆ ಬೆಳೆಯುವುದಿಲ್ಲ, ಸಮಾಜ ಬದಲಾಗುವುದಿಲ್ಲ.,

ಭಾಷೆ ಮತ್ತು ಸಂಸ್ಕೃತಿಗಳಿಗೆ ನಿಕಟವಾದ ಸಂಬಂಧವಿದೆ. ಸಂಸ್ಕೃತಿಯಿಂದ ಭಾಷೆಯೂ, ಭಾಷೆಯಿಂದ ಸಂಸ್ಕೃತಿಯೂ ಒಂದನ್ನೊಂದು ಅನುಸರಿಸಿ ಬೆಳೆದು ಬಂದಿದೆ. ಇವುಗಳನ್ನು ಬೇರ್ಪಡಿಸಲು ಅಷ್ಟು ಸುಲಭವಲ್ಲ. ಒಂದು ಜನಾಂಗದ/ಸಮಾಜದ ಸಂಸ್ಕೃತಿಯ ಆಚರಣೆಗಳಾದ, ನಂಬಿಕೆಗಳು, ಹೊಂದಾಣಿಕೆ ಆಚಾರಗಳು, ಪದ್ಧತಿಗಳು, ರೀತಿ ನೀತಿಗಳು, ಜ್ಞಾನ, ಕಲೆ, ಕಾನೂನು, ನಡೆನುಡಿ, ತ್ಯಾಗ, ಧರ್ಮ, ಪ್ರೀತಿ, ಪ್ರೇಮ, ಸಹಬಾಳ್ವೆ, ನೀತಿ ನ್ಯಾಯಪರತೆ, ಆಹಾರ–ವಿಹಾರ, ಉಡುಗೆ–ತೊಡುಗೆ, ಇವು ಪರಸ್ಪರ ಪೂರಕವಾಗಿವೆ. ಮಾನವನ ಎಲ್ಲಾ ಚಟುವಟಿಕೆಗಳಿಗೂ ಸಂಸ್ಕೃತಿಗಳೇ ಮೂಲ. ಮಾನವನ ಎಲ್ಲಾ ಭಾವನೆಗಳು, ಕಾರ್ಯಕಲಾಪಗಳು ಆತನ ಸಮಾಜ ಸಂಸ್ಕೃತಿಗಳಿಗೆ ಅನುಗುಣವಾಗಿಯೇ ಬೆಳೆದು ಬಂದಿರುತ್ತವೆ. ಇವೆಲ್ಲವನ್ನು ಒಂದು ಸಮಾಜದಲ್ಲಿ ವಾಹಕವಾಗಿ ಕಾರ್ಯನಿರ್ವಹಿಸುವ ಪರಿಣಾಮಕಾರಿಯಾದ ಮಾಧ್ಯಮ ಭಾಷೆ.

ಭಾಷೆ ಮತ್ತು ಸಂಸ್ಕೃತಿಗಳು ಪರಸ್ಪರ ಎಷ್ಟರ ಮಟ್ಟಿಗೆ ಒಂದನ್ನೊಂದು ಬೆಸೆದುಕೊಂಡಿವೆ. ಎಂದರೆ ಭಾಷೆಯಿಲ್ಲದೆ ಸಂಸ್ಕೃತಿಯೂ, ಸಂಸ್ಕೃತಿ ಇಲ್ಲದೆ ಭಾಷೆಯೂ ತಮ್ಮ ಅಸ್ತಿತ್ವವನ್ನು ಪಡೆಯಲಾರದು ಬೇರೆಬೇರೆ ಜನಾಂಗದ ಭಿನ್ನ ಭಿನ್ನ ಸಂಸ್ಕೃತಿಯನ್ನು ಪರಿಶೀಲಿಸಲು ಹೋದಾಗ ಈ ವಿಚಾರವು ಸ್ಪಷ್ಟವಾಗಿ ಗೋಚರವಾಗುವುದಷ್ಟೇ ಅಲ್ಲ, ಭಾಷೆ ಮತ್ತು ಸಂಸ್ಕೃತಿ ಪರಸ್ಪರ ಹೇಗೆ ನಿಯಂತ್ರಿಸುತ್ತದೆಂಬ ಸಂಗತಿಯು ವ್ಯಕ್ತವಾಗುವುದು. ಒಂದು ಜನಾಂಗದ ಸಂಸ್ಕೃತಿ ಇನ್ನೊಂದು ಸಂಸ್ಕೃತಿಯ ಮೇಲೆ ಪ್ರಭಾವ ಬೀರಲು ಅಥವಾ ವರ್ಗಾವಣೆಯಾಗಲು/ ಪ್ರಸಾರವಾಗಲು ಆ ಜನಾಂಗ/ಸಮಾಜದ ಜನರು ಆಡುವ ಭಾಷೆಯು ಒಂದು ಮಾಧ್ಯಮವಾಗಿ/ಸಂವಹನ ಕ್ರಿಯೆಯಾಗಿ ಕಾರ್ಯನಿರ್ವಹಿಸುತ್ತದೆ. ಉದಾ: ಒಂದು ಸಮಾಜದ ಜನರು ಆಡುವ ಭಾಷೆಯ ಶಬ್ದ ಭಂಡಾರವು, ವಿಶಿಷ್ಟ ಅನುಭವಗಳು,

ಘಟನೆಗಳು, ವಿಶೇಷತೆಗಳು, ಅವರು ಬಳಸುವ ವಸ್ತುಗಳು, ಉಡುಗೆ, ತೊಡಿಗೆಗಳು, ಕಲೆ–ಕಾನೂನುಗಳು, ನಡೆ–ನುಡಿಗಳು, ಇತ್ಯಾದಿ ಇತ್ಯಾದಿ.

ಒಟ್ಟಿನಲ್ಲಿ ಭಾಷೆಯು ಆಯಾ ಸಮಾಜದ, ಆಯಾ ಜನಾಂಗದ ಸಂಸ್ಕೃತಿ ಮತ್ತು ಸಮಾಜಿಕ ವ್ಯವಸ್ಥೆಯಲ್ಲಿ ಬಹುಮುಖ್ಯ ಪಾತ್ರವಹಿಸಿ ವ್ಯಕ್ತಿಯನ್ನು ಸಾಮಾಜಿಕರಣಗೊಳಿಸಲು ಮತ್ತು ಸಂಸ್ಕೃತೀಕರಣಗೊಳಿಸುವಲ್ಲಿ ಪರಿಣಾಮಕಾರಿಯಾದ ಮಾಧ್ಯಮವಾಗಿ ಕಾರ್ಯ ನಿರ್ವಹಿಸುತ್ತದೆ.

ಮಾನವ ಸಮಾಜದಲ್ಲಿ ಸಂಸ್ಕೃತಿ ಮತ್ತು ಭಾಷೆ ಇವು ಪರಸ್ಪರ ಅವಿಭಾಜ್ಯ ಅಂಗಗಳಾಗಿವೆ.

ಮಕ್ಕಳ ಸಾಂಸ್ಕೃತಿಕ ವಿಕಾಸಕ್ಕೆ ಹಾಗೂ ಸಮಾಜದಲ್ಲಿ ಸಾಂಸ್ಕೃತಿಕ ಸಾಮರಸ್ಯ ಮೂಡಿಸಲು ಪಠ್ಯ ಪುಸ್ತಕಗಳು ಕಿರುಕಾಣಿಕೆ ನೀಡಬೇಕು. ಪಠ್ಯಪುಸ್ತಕಗಳಲ್ಲಿ ನಮ್ಮ ರಾಜ್ಯದ, ದೇಶದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಪಠ್ಯಗಳಿರಬೇಕು. ಕೃಷಿ, ಕಲೆ, ನೃತ್ಯ, ಸಂಗೀತ ಜನಪದ ಸಂಸ್ಕೃತಿಯ ಅಂಶಗಳು ಇರಬೇಕು. ಅಂತೆಯೇ ನಮ್ಮ ದೇಶದ ಹಿರಿಮೆ–ಗರಿಮೆ, ಸಂಸ್ಕೃತಿ, ಸಂಪ್ರದಾಯ, ಆಚಾರ ವಿಚಾರ, ನಡೆನುಡಿ, ಕಲೆ, ವಾಸ್ತುಶಿಲ್ಪ, ಹಬ್ಬ ಹರಿದಿನಗಳ ಆಚರಣೆ, ಜಾತ್ರೆ, ಉತ್ಸವ, ಬಯಲಾಟ, ಯಕ್ಷಗಾನ, ವೀರಗಾಸೆ ಕುಣಿತ ಇತ್ಯಾದಿ ವಿಷಯಗಳನ್ನು ಪಠ್ಯ ಪುಸ್ತಕದಲ್ಲಿ ಸೇರಿಸುವುದರಿಂದ ದೇಶದ ಸಾಂಸ್ಕೃತಿಕ ವೈವಿಧ್ಯತೆಯ ಬಗ್ಗೆ ತಿಳಿಸಿದಂತಾಗುವುದು. ಇದು ಮಕ್ಕಳಲ್ಲಿ ಸಹಜವಾಗಿ ನಮ್ಮ ದೇಶದ ಶ್ರೀಮಂತ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಅರಿಯಲು ನೆರವಾಗುವುದು.

1918ರಿಂದ 1938ರ ವರೆಗೆ ಪ್ರಕಟವಾದ ಕರ್ನಾಟಕದ ಪ್ರೌಢಶಾಲಾ ಕನ್ನಡ ಪಠ್ಯ ಪುಸ್ತಗಳಲ್ಲಿ ಸಂಸ್ಕೃತಿಗೆ ಸಂಬಂಧಪಟ್ಟ ವಸ್ತು ವಿಷಯಗಳುಳ್ಳ ಯಾವುದೇ ಪಾಠವನ್ನು ಸೇರಿಸಿರುವುದು ಕಂಡುಬಂದಿಲ್ಲ. ಆದರೆ 1939ರಲ್ಲಿ ಪ್ರಕಟವಾದ 8ನೇ ತರಗತಿಯ 'ಕನ್ನಡ ನೂತನ ಪಾಠಮಾಲೆ' ಹೆಸರಿನ ಪಠ್ಯಪುಸ್ತಕದಲ್ಲಿ ಶಾರದಾಪೂಜೆ ಎಂಬ ಗದ್ಯಪಾಠವಿದೆ. ಸರಸ್ವತಿಯನ್ನು ಪೂಜಿಸುವ ರೀತಿ, ಔಚಿತ್ಯವನ್ನೂ ಅದರಲ್ಲಿ ನೀಡಲಾಗಿದೆ. ಈ ಪಾಠವನ್ನು ಸಾಂಸ್ಕೃತಿಕ ಉದ್ದೇಶದಿಂದ ನೀಡಲಾಗಿದೆ ಎನ್ನುವುದಕ್ಕಿಂತ ಧಾರ್ಮಿಕ ಉದ್ದೇಶಕ್ಕಾಗಿ ನೀಡಲಾಗಿದೆ ಎಂದರೂ ತಪ್ಪಲ್ಲ.

1939ರಿಂದ 1958ರ ವರೆಗೆ ಸುಮಾರು 20 ವರ್ಷಗಳ ಕಾಲಘಟ್ಟದಲ್ಲಿ ಪ್ರಕಟವಾದ ಪಠ್ಯಪುಸ್ತಕಗಳಲ್ಲಿ ಸಂಸ್ಕೃತಿಗೆ ಸಂಬಂಧಪಟ್ಟ ವಸ್ತು ವಿಷಯಗಳುಳ್ಳ ಯಾವುದೇ ಪಾಠವನ್ನು ಸೇರಿಸುವುದು ಕಂಡು ಬಂದಿಲ್ಲ. 1959ರ 10ನೇ ತರಗತಿಯ ಪಠ್ಯಪುಸ್ತಕ 'ಅಭಿನವ ಸಾಹಿತ್ಯ ಪ್ರದೇಶ (ಪ್ರಕಾಶಕರು ರಾ.ಗೋ. ಹುಕ್ಕೇರಿ, ಧಾರವಾಡ 1959)ದಲ್ಲಿ ಅನಕೃ ಅವರು ಬರೆದ ಪ್ರಬಂಧ 'ಸರಸ್ವತಿ ಉತ್ಸವ (ಪುಟ 88–89) ದಲ್ಲೂ ವಿದ್ಯಾಧಿದೇವತೆ ಸರಸ್ವತಿಯ ಹಬ್ಬ ಬಗ್ಗೆ ವಿವರಗಳಿವೆ.

1960ರಲ್ಲಿ ಮೈಸೂರು ವಿವಿ ಪ್ರಥಮವಾಗಿ ಕನ್ನಡ ಪಠ್ಯ ಪುಸ್ತವನ್ನು ಸಿದ್ಧಪಡಿಸಿ ಪ್ರಕಟಿಸಲು ಆರಂಭಿಸಿತ್ತು. 2069ರ ವಿದ್ಯಾ ಇಲಾಖೆಯು ಪ್ರಕಟಿಸಿದ ಕನ್ನಡ ಪಠ್ಯಪುಸ್ತಕದಲ್ಲಿ ಸಾಹಿತ್ಯ ಮಂದಾರದಲ್ಲಿ ನಂಜುಂಡ ಕವಿಯ ಸಾಂಗತ್ಯ 'ಕರ್ನಾಟಕದ ವರ್ಣನೆ' ನೀಡಲಾಗಿದೆ. ಈ ಸಾಂಗತ್ಯದಲ್ಲಿ ಕನ್ನಡನಾಡಿನ ವರ್ಣನಾ ಭಾಗಗಳಿವೆ.

ಮೈಸೂರು ಸರ್ಕಾರದ ಪಠ್ಯ ಪುಸ್ತಕಗಳ ಇಲಾಖೆಯು 8ನೇ ತರಗತಿಗಾಗಿ ಪ್ರಕಟಿಸಿದ ಕನ್ನಡ ಪಠ್ಯಪುಸ್ತಕ 'ಸಾಹಿತ್ಯಸುಗ್ಗಿ' ಯಲ್ಲಿ ನಮ್ಮ ಹಳ್ಳಿಯ ಒಂದು ಆಟ (ಗೊರೂರು–84–93)

ಎಂಬ ವೃತ್ತಾಂತವಿದೆ. ನಮ್ಮ ಹಳ್ಳಿಗಳ ನಿತ್ಯ ಜೀವನದಲ್ಲಿ ಪ್ರಮುಖ ಪಾತ್ರವಹಿಸುತ್ತಿರುವ ಯಕ್ಷಗಾನ ಬಯಲಾಟದ ಸ್ವಾರಸ್ಯಕರ ಬರಹ ಇದಾಗಿದೆ.

1961ರಿಂದ 1977ರ ವರೆಗಿನ ಪಠ್ಯಪುಸ್ತಕಗಳನ್ನು ಪರಿಶೀಲಿಸಿದಾಗ ಸಾಂಸ್ಕೃತಿಕ ಅಂಶಗಳನ್ನು ವಸ್ತು ವಿಷಯವಾಗಿ ಅಳವಡಿಸಿದ ಪಾಠಗಳು ಕಂಡು ಬಂದಿಲ್ಲ ಎನ್ನಬಹುದು.

'ಕರ್ನಾಟಕ ನಾಮಕರಣ ಹಾಗೂ ಭಾಷಾವಾರು ಏಂಗಡಣೆಯ ನಂತರದ ಗದ್ಯ ಮತ್ತು ಪದ್ಯಗಳನ್ನು ವಿಶೇಷವಾಗಿ ಈ ನಿಟ್ಟಿನಲ್ಲಿ ಗಮನಿಸಬೇಕಾಗಿದೆ.

1978ರ ಕರ್ನಾಟಕ ಸರ್ಕಾರದ ಪಠ್ಯಪುಸ್ತಕ ನಿರ್ದೇಶನಾಲಯ ಬೆಂಗಳೂರು ಇವರು ಪ್ರಕಟಿಸಿದ 'ಕನ್ನಡ ಗಂಗೋತ್ರಿ–1 8ನೇ ತರಗತಿ ಪಠ್ಯಪುಸ್ತಕದಲ್ಲಿ 'ನಮ್ಮನಾಡಹಬ್ಬ' ಎಂಬಪಾಠವು (ಪುಟ.16–23) ಈ ನಿಟ್ಟಿನಲ್ಲಿ ಪ್ರಮುಖವಾದುದು.

ನಮ್ಮ ನಾಡಿನಲ್ಲಿ ಜನರು ಅನೇಕ ಹಬ್ಬಳನ್ನು ಆಚರಿಸುತ್ತಾರೆ. ಒಂದೊಂದು ಸಮಾಜದಲ್ಲಿ ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆಯ ಹಬ್ಬಗಳನ್ನು ಆಚರಿಸುತ್ತಾರೆ. ಬೆಳೆಗಳ ಸಲುವಾಗಿ ಹಬ್ಬಗಳು ಇವೆ. ದೇವರ ಪೂಜೆಗಾಗಿ ಹಬ್ಬ ಹರಿದಿನಗಳಿವೆ. ಆದರೆ ನಾಡವರೆಲ್ಲರೂ ಕೂಡ ನಲಿದು ಸಂತಸಪಡುವ ಹಬ್ಬವೇ ನಾಡಹಬ್ಬವಾಗಿದೆ. ಈ ಹಬ್ಬವನ್ನು ನವರಾತ್ರಿಯಲ್ಲಿ ಆಚರಿಸಲಾಗುತ್ತದೆ. ಈ ಹಬ್ಬವು ನಮ್ಮ ನಾಡಿನ ಸಂಸ್ಕೃತಿಯ ಪರಂಪರೆಯನ್ನು ಒಗ್ಗಟ್ಟನ್ನು ಸೂಚಿಸುವ ಸಂಕೇತವಾಗಿದೆ. ಈ ಹಬ್ಬವನ್ನು ಕುರಿತು ಮಾಹಿತಿ ನೀಡುವ ಪಾಠವೇ ನಮ್ಮ ನಾಡಹಬ್ಬ. ಸಾಂಸ್ಕೃತಿಕ ನೆಲೆಯನ್ನು ಹೊಂದಿದ ಪ್ರಪ್ರಥಮ ಪಾಠ ಇದು ಎನ್ನಬಹುದು.

ಇದೇ ಪಠ್ಯಪುಸ್ತಕದಲ್ಲಿ ತಿ.ತಾ.ಶರ್ಮ ಅವರು ಬರೆದ 'ಬೇಲೂರು'(ಪು.59–67) ಪಾಠವಿದ್ದು ಇದರಲ್ಲಿ ಕಲೆಯ ಆಗರ, ಸುಂದರ ಸೊಬಗಿನ ನಾಡು ಕನ್ನಡನಾಡನ್ನು ವರ್ಣಿಸಲಾಗಿದೆ. ಕಲೆಗಳಿಗೆ ಆಶ್ರಯತಾಣವಾದ ಕನ್ನಡ ನಾಡಿನಲ್ಲಿ ಶಿಲ್ಪಕಲೆಯ ವೈಭವಕ್ಕೆ ನಿಲುಗನ್ನಡಿಯಾಗಿ ನಿಂತಿದೆ. ಬೇಲೂರು ಅಲ್ಲಿಯ ವೈಭವ, ಅಲ್ಲಿಯ ಶಿಲ್ಪ ಕಲೆಯ ವಿಶೇಷತೆಯನ್ನು ಇಲ್ಲಿ ಸುಂದರವಾಗಿ ವರ್ಣಿಸಲಾಗಿದೆ.

ಕುವೆಂಪು ಅವರ 'ಜಯಹೇ ಕರ್ನಾಟಕ ಮಾತೆ' ಎಂಬ ಪ್ರಸಿದ್ಧ ಕವನ ಇದೇ ಪಠ್ಯದಲ್ಲಿ ಒಂದು ಭಾಗವಾಗಿದೆ. ಕನ್ನಡ ನಾಡಿನ ನುಡಿ, ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ಸಾರುವ ನಾಡಗೀತೆ ಇದಾಗಿದೆ.(ಪು.99).

ಅಂಬಿಕಾತನಯದತ್ತರ ಯುಗಾದಿ ಎಂಬ ಕವನವನ್ನು ಈ ಪಠ್ಯ ಕಂಡಿದೆ. ಯುಗಾದಿ ಹಬ್ಬದ ಹಿರಿಮೆ ಸಾರುವ ಕವನ ಇದಾಗಿದೆ. (ಪು.166)

1978ರಲ್ಲಿ ಕರ್ನಾಟಕ ಸರ್ಕಾರದ ಡಿಎಸ್ಇಆರ್ಟಿ ಪಠ್ಯ ಪುಸ್ತಕ ವಿಭಾಗ ಮುದ್ರಿಸಿ ಪ್ರಕಟಿಸಿರುವ 8ನೇ ತರಗತಿಯ ಕನ್ನಡ ಕುಸುಮ(ತೃತೀಯ ಭಾಷೆ) ಪಠ್ಯ ಪುಸ್ತಕದಲ್ಲಿ ಬಯಲಾಟ ಎಂಬ ಪಾಠವಿದೆ. ಕನ್ನಡನಾಡಿನಲ್ಲಿ ಬಯಲಾಟವು ಬಹಳ ಪ್ರಸಿದ್ಧವಾದ ಕಲೆಯಾಗಿದೆ. ಬೇರೆ ಬೇರೆ ಪ್ರಾದೇಶಗಳಲ್ಲಿ ವಿಧವಿಧವಾದ ರೀತಿಯಲ್ಲಿ ಬಯಲಾಟವನ್ನು ಆಡುತ್ತಾರೆ. ಬಯಲಾಟದಲ್ಲಿ ಯಕ್ಷಗಾನ, ದೊಡ್ಡಾಟ, ಸಣ್ಣಾಟ, ಮುಂತಾದ ಬಗೆಗಳಿವೆ. ಈ ಆಟಿಗಳಲ್ಲಿ ಹೆಚ್ಚಾಗಿ ಪೌರಾಣಿಕ ಕಥೆಗಳಿರುತ್ತದೆ, ಜಾಗಟೆ, ತಾಳ, ಚೆಂಡೆ, ಮೃದಂಗ, ಶೃತಿ ಮೊದಲಾದ ವಾದ್ಯಗಳಿರುತ್ತವೆ. ವೇಷಭೂಷಣ, ಕುಣಿತ, ಆಕರ್ಷಕವಾಗಿರುತ್ತದೆ. ನವರಸಗಳು ಮೇಳೈಸುತ್ತದೆ. ಬಯಲಾಟದ ಕಥೆಗಳಿಂದ ಜನರು ನಡೆನುಡಿ, ಆಚಾರ ವಿಚಾರಗಳನ್ನು ಕಲಿಯುವರು. ಸಾಂಸ್ಕೃತಿಕ ಕಲಿಕೆಗೆ ಬಯಲಾಟಗಳೂ ಮಾಧ್ಯಮವೆನಿಸಿದೆ. ಈ ಪಾಠದ ಮೂಲಕ ಮಕ್ಕಳೆಲ್ಲ ಬಯಲಾಟದ ಬಗ್ಗೆ ಒಲವು, ಆಸರೆ ಮುಡಿಸುವ ಪ್ರಯತ್ನ

ನಡೆದಿದೆ ಎನ್ನಬಹುದು.

ಇದೇ ಪಠ್ಯದಲ್ಲಿ 'ಸಾಂಸ್ಕೃತಿಕ ಹಬ್ಬ'(ಪು.41,43) ಎಂಬ ಪಾಠವಿದ್ದು ಸ್ವಾತಂತ್ರ್ಯದಿನದ ಮಹತ್ವವನ್ನು ತಿಳಿಯಪಡಿಸುತ್ತದೆ.

ಸದರಿ ಪಠ್ಯ ಪುಸ್ತಕದಲ್ಲಿ 'ನಮ್ಮನಾಡಿನ ಕ್ರೀಡೆಗಳು' ಎಂಬಪಾಠದಲ್ಲಿ(ಪು.51–53) ನಾಡಿನ ಕ್ರೀಡೆಗಳಾದ ಕುಂಟಾಟ, ಕಣ್ಣಮುಚ್ಚಾಲೆ, ಕೊಕ್ಕೊ, ಗೋಲಿ, ಗಜ್ಜುಗ, ಜಿಣ್ಣಿಕೋಲು, ಬುಗುರಿ, ಮರಕೋತಿ, ಕಬ್ಬಡಿ, ಕಲ್ಲಾಟ, ಹುಣಸೆಬೀಜ, ಸರಿಬೆಸ, ಉದ್ದಿನ ಮೂಡೆ, ಆನೆಕುರಿ, ಹುಲಿಕುರಿ ಪಗಡೆ, ಚದುರಂಗ ಮುಂತಾದ ಆಟಗಳ ಬಗ್ಗೆ ವಿವರವಿದೆ.ಮಕ್ಕಳಲ್ಲಿ ಸ್ಪರ್ಧಾಮನೋಭಾವ ಮೂಡಿಸುವ ಈ ಆಟಗಳು ನಮ್ಮ ನಾಡಿನ ಸಂಸ್ಕೃತಿಯ ಪ್ರತಿಬಿಂಬ ಎಂದರೂ ತಪ್ಪಲ್ಲ.

1978ರ ಎಂಟನೆಯ ತರಗತಿಯ ಕನ್ನಡ ಕುಸುಮ ಪಠ್ಯಪುಸ್ತಕ ಸಾಂಸ್ಕೃತಿಕ ನೆಲೆಯ ಪಠ್ಯ ವಸ್ತು ವಿಷಯದಿಂದ ತುಂಬಿದೆ ಎನ್ನಲು 7ನೇ ಪಾಠವಾದ 'ಗೊಂಟೆಯಾಟ'ವೂ ಒಂದುನಿದರ್ಶನವಾಗಿದೆ.

ಜನಪದ ಕಲೆಯಾಗಿರುವ ಬೊಂಬೆಯಾಟದಲ್ಲಿ ಕಟ್ಟಿಗೆಯ ತೊಗಲಿನಿಂದ ಮಾಡಿದ ಗೊಂಬೆಗಳನ್ನು ಉಪಯೋಗಿಸುತ್ತಾರೆ. ಇಲ್ಲಿ ಅವಯವಗಳು ಅಲ್ಲಾಡುವಂತೆ ಆಯಾ ಸಂದುಗಳಲ್ಲಿ ಕೀಲು ಜೋಡಿಸುತ್ತಾರೆ.ದಾರ ಕೋಲು ಉಪಯೋಗಿಸಿ ಕೈ ಚಳಕದಿಂದ ಅವುಗಳನ್ನು ಕುಣಿಸುತ್ತಾರೆ. ಒಂದು ಕಥೆಯನ್ನು ಆಯ್ದುಕೊಂಡು ಮಾತು ಆಡಿಸುತ್ತಾರೆ. ಹಾಡು ಹಾಡುತ್ತಾರೆ. ಭಾವಕ್ಕೆ ತಕ್ಕಂತೆ ಗೊಂಬೆಗಳನ್ನು ಕುಣಿಸುತ್ತಾರೆ, ಸೂತ್ರದಾರಿಗಳು ಕಾಣಿಸುವುದಿಲ್ಲ.

ಸದರಿ ಪಠ್ಯಪುಸ್ತಕದಲ್ಲಿ ತುಳುನಾಡಿನ ವೀರರೂ ಅನ್ಯಾಯದ ವಿರುದ್ಧ ಹೋರಾಗಿ ಇಂದಿಗೂ ತುಳುನಾಡಿನ ಉದ್ದಗಲಕ್ಕೂ ಜನಜನಿತ ಹೆಸರಾಗಿ ಅಮರರಾಗಿರುವ 'ಕೋಟಿ ಚೆನ್ನಯ' ಅವರ ಕಥೆ (ಪು.59–62) ಇದೆ. ಈ ಜಾನಪದ ಕಥೆ ತುಳುನಾಡ ಸಂಸ್ಕೃತಿಯ ಪ್ರತೀಕ ಎನ್ನಬಹುದು.

ಒಂದು ಜನಾಂಗದ ಸಂಸ್ಕೃತಿಯನ್ನೂ ತಿಳಿದುಕೊಳ್ಳಲು ಗಾದೆಗಳು ಸಹಾಯಕಾರಿ ಯಾಗಿವೆ. ಗಾದೆಗಳು ಹಿರಿಯರ ಅನುಭವದ ನುಡಿಮುತ್ತುಗಳಿಗೆ ಹೆಸರುವಾಸಿ, ಅವುಗಳನ್ನು ನಾಡು ನುಡಿ (ನಾಣ್ನುಡಿ), ಜಾನನುಡಿ(ಜಾಣ್ನುಡಿ) ಎಂದೂ ಕರೆಯುವರು. ಎಲ್ಲರ ಅನುಭವಕ್ಕೆ ಬಂದ ಮಾತುಗಳು ಮುತ್ತಾಗಿ ಬಾಯಿಯಿಂದ ಹೊರ ಬೀಳುತ್ತದೆ. ಇಂಥ ಗಾದೆಗಳು ಪ್ರತಿಯೊಂದು ದೇಶ ಭಾಷೆಯಲ್ಲಿಯೂ ಇರುತ್ತದೆ.

1993ರ 8ನೇ ತರಗತಿಯ ಕನ್ನಡ ಪಠ್ಯ ಪುಸ್ತಕ 'ಕನ್ನಡ ಭಾರತಿ'ಯಲ್ಲಿ 'ಜಾನಪದ ಹಾಡುಗಳು' ಎಂಬ ಪದ್ಯಭಾಗವಿದ್ದು, ಇದರಲ್ಲಿ ಗರತಿಯ ಹಾಡುಗಳನ್ನು ನೀಡಲಾಗಿದೆ. ಇಲ್ಲಿ ನೀಡಿರುವ ಹಾಡುಗಳಲ್ಲಿ ತಾಯ್ತನದ ಹಿಗ್ಗು ವರ್ಣಿತವಾಗಿದೆ.

1994ರ 10ನೇ ತರಗತಿಯ 'ಕನ್ನಡಭಾರತಿ' ಪಠ್ಯಪುಸ್ತಕದ ಪದ್ಯಭಾಗದಲ್ಲಿ ಜೋಗದ ಝೋಕು ಎಂಬ ಪಠ್ಯವನ್ನು ಮೂಗೂರುಮಲ್ಲಪ್ಪ ಬರೆದಿದ್ದು(ಪು.78–81) ಜಗತ್ಪ್ರಸಿದ್ಧ ಜೋಗ ಜಲಪಾತದ ವರ್ಣನೆಯನ್ನು ಜಾನಪದ ಧಾಟಿಯಲ್ಲಿ ರಚಿಸಿದ್ದಾರೆ. ಕನ್ನಡ ನಾಡಿನ ಹಿರಿಮೆ, ಇತಿಹಾಸ, ಧರ್ಮ, ಇತ್ಯಾದಿಗಳ ವರ್ಣನೆಯೂ ಇದೆ. ಇಲ್ಲಿ ಜೀವನ ಸಾಮರಸ್ಯದ ಸಂದೇಶವೂ ಇದೆ.

ಇದೇ ಪಠ್ಯದಲ್ಲಿ ನಿಸಾರ್ ಅಹಮದ್ ಅವರ 'ನಿತ್ಯೋತ್ಸವ'ದಿಂದ ಆಯ್ದ 'ಸಗ್ಗದಸಿರಿ

ಬಂತು' ಎಂಬ ಕವನವಿದೆ. ಇದೊಂದು ಪ್ರಕೃತಿ ಗೀತೆಯಾಗಿದ್ದು ಸುಗ್ಗಿಯ ಸಂಭ್ರಮವನ್ನು ನಿರೂಪಿಸುತ್ತದೆ. ಪ್ರಕೃತಿಯಲ್ಲಿನ ಸೌಂದರ್ಯವು ಸ್ವರ್ಗ ಸದೃಶ್ಯವಾಗಿದೆ. ಸಸ್ಯ ಸಮೃದ್ಧಿ, ಗೋಸಂಪತ್ತು, ಇತ್ಯಾದಿಗಳಿಂದ ತುಂಬಿದ ಭೂಲೋಕ ಸ್ವರ್ಗದ ಸಂಪತ್ತಿಗಿಂತ ಕಡಿಮೆ ಇಲ್ಲವೆಂದು ಕವಿ ಮನತುಂಬಿ ಹಾಡಿದ್ದಾರೆ.

1999ರ 8ನೇ ತರಗತಿಯ ಪ್ರಥಮ ಭಾಷೆಯ ಪಠ್ಯ ಪುಸ್ತಕ 'ಕನ್ನಡಭಾರತಿ' ಯಲ್ಲಿ ಖ್ಯಾತ ಹಿಂದೂಸ್ಥಾನಿ ಗಾಯಕಿ ಗಂಗೂಬಾಯಿ ಹಾನಗಲ್ಲ' ಅವರ ವ್ಯಕ್ತಿ ಚಿತ್ರಣ ನೀಡಲಾಗಿದೆ. ಒಂದು ನಾಡಿನ ನಿರ್ಮಾಣವಾಗುವುದು ಕೇವಲ ರಾಜಕೀಯ ಆಗುಹೋಗುಗಳಿಂದಲ್ಲ. ಸಾಹಿತ್ಯ, ಸಂಗೀತ, ಕಲೆಗಳ ಉತ್ಕರ್ಷವೂ ಬಹಳ ಮುಖ್ಯ ಎಂಬುದನ್ನು ನಿರೂಪಿಸಲು ಈ ತರದ ಪಾಠಗಳು ಉತ್ತಮ ನಿದರ್ಶನವಾಗುತ್ತದೆ. ಸಂಗೀತದಲ್ಲಿ ಗಂಗೂಬಾಯಿ ಹಾನಗಲ್ಲರ ಸಾಧನೆ ಅಪಾರ. ದಾಕ್ಷಿಣಾತ್ಯರಾಗಿದ್ದರೂ ಹಿಂದೂಸ್ಥಾನಿ ಸಂಗೀತದಲ್ಲಿನ ಅವರ ಪರಿಣತಿ ಭಾವೈಕ್ಯದ ದ್ಯೋತಕವಾಗಿದೆ.

2001ರ 8ನೇ ತರಗತಿಯ 'ಕನ್ನಡ ಕಸ್ತೂರಿ'ಯಲ್ಲಿ ಚಂದ್ರಶೇಖರ ಕಂಬಾರರ "ಕನ್ನಡ ತಾಯಿಯ ಸುಪ್ರಭಾತ" ಎಂಬ ಕವಿತೆಯಿದೆ. ದೇವ ದೇವತೆಗಳನ್ನು ಸ್ತುತಿಸುವ ಅವರ ಮಹಿಮೆಯನ್ನು ಬಣ್ಣಿಸುವ ಸುಪ್ರಭಾತಗಳು ಭಕ್ತಿಸಾಹಿತ್ಯವಾಗಿ ಜನಪ್ರಿಯವಾಗಿದೆ. 'ಕನ್ನಡ ತಾಯಿಯ ಸುಪ್ರಭಾತ' ಪಠ್ಯದಲ್ಲಿ ಕನ್ನಡಮಾತೆಯೇ ಕನ್ನಡಿಗರಿಗೆ ದೈವಸ್ವರೂಪಳಾಗಿದ್ದಾಳೆ. ಪ್ರಸ್ತುತ ಕವಿತೆಯಲ್ಲಿ ಕನ್ನಡ ಮಾತೆಯ ಸೊಬಗು, ಮಮತೆ, ಉದಾರತೆ, ಸರ್ವಧರ್ಮ ಸಮಭಾವ ಇವುಗಳ ಸುಂದರ ವರ್ಣನೆ ಇದೆ.

ಇದೇ ಪಠ್ಯದಲ್ಲಿ 'ಕನ್ನಡಸಂಸ್ಕೃತಿ' ನಮ್ಮ ಹೆಮ್ಮೆ ಎಂಬ ಪಾಠವಿದೆ.(ಪು.45–52) ಎಂ. ಚಿದಾನಂದಮೂರ್ತಿ ಅವರು ಬರೆದ ಈ ಲೇಖನದಲ್ಲಿ ನಮ್ಮ ಸಂಸ್ಕೃತಿಯ ಅರಿಮೆಯನ್ನು ಎತಿ ್ತಹಿಡಿದಿದ್ದಾಳೆ. ಕರ್ನಾಟಕ ಸಂಸ್ಕೃತಿಯು ಭಾರತದ ಚೌಕಟ್ಟಿನಲ್ಲಿ ಹೊಂದಿಕೊಂಡು ಸುಂದರವಾಗಿ ಅರಳಿದೆ. ಇದರ ಸ್ಥಾನ ಹಿರಿದು ಮತ್ತು ವಿಶಿಷ್ಟವಾದದ್ದು, ಇತಿಹಾಸ, ಸಾಮಾಜಿಕ ವ್ಯವಸ್ಥೆ, ಧಾರ್ಮಿಕ ದರ್ಶನ, ಸಾಹಿತ್ಯ ಸೃಷ್ಟಿ, ಶಿಲ್ಪ, ಸಂಗೀತ, ನೃತ್ಯ ಹೀಗೆ ಎಲ್ಲಾ ಕ್ಷೇತ್ರಗಳಲ್ಲಿಯೂ ಕರ್ನಾಟಕದ ಸಾಧನೆ, ಸಾರ್ಥಕತೆಯನ್ನು ಪಡೆದಿದೆ. ಪ್ರಾಚೀನ ಕಾಲದಿಂದಲೂ ಕನ್ನಡ ಸಂಸ್ಕೃತಿಯ ತನ್ನದೇ ಆದ ಉಜ್ವಲ ಪರಂಪರೆಯನ್ನು ನೀಡಿ ಅದನ್ನು ಬೆಳೆಸಿಕೊಂಡು ಬಂದಿದೆ. ಈ ಲೇಖನದಲ್ಲಿ ಭಾಷೆ–ಸಾಹಿತ್ಯ, ಕರ್ನಾಟಕ ಸಂಗೀತ, ನೃತ್ಯ, ಚಿತ್ರಕಲೆ, ಶಿಲ್ಪ, ವಾಸ್ತು ಶಿಲ್ಪ ಇತ್ಯಾದಿಗಳ ಪರಿಚಯಾತ್ಮಕ ಬರಹವಿದೆ.

ಇದೇ ಪಠ್ಯದಲ್ಲಿ ಕೆ. ಶಿವರಾಮ ಕಾರಂತರು ಬರೆದ 'ಕಂಬಳ'(ಪು.157–162) ಪಾಠವಿದೆ. ತುಳುನಾಡಿನ ಸಂಸ್ಕೃತಿಯ ಒಂದು ಭಾಗವೆಂದೇ ಹೇಳಬಹುದಾದ ಕಂಬಳ ಬಗೆಗೆ ವಿವರವನ್ನು ನೀಡಲಾಗಿದೆ. ಆಧುನಿಕ ಕ್ರೀಡಾ ಜಗತ್ತು ಗರಿಗೆದರುವುದಕ್ಕೆ ಬಹುಪೂರ್ವದಲ್ಲಿಯೇ ವಿವಿಧ ಬಗೆಯ ಜನಪದ ಕ್ರೀಡೆಗಳು ನಮ್ಮ ಸುತ್ತ ಮುತ್ತ ಹುಟ್ಟಿಕೊಂಡಿದ್ದವು. ಪ್ರತಿಯೊಂದು ಜನಪದ ಕ್ರೀಡೆಯೂ ಅವರದ್ದೇ ಆದ ಪ್ರಾದೇಶಿಕ ಹಿನ್ನೆಲೆಯನ್ನು ಒಳಗೊಂಡಿರುತ್ತದೆ. ಕಂಬಳವು ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಿಗಷ್ಟೆ ಸೀಮಿತಗೊಂಡ ಒಂದು ಕ್ರೀಡೆಯಾಗಿದೆ. ಕಂಬಳ ಲೇಖನದಲ್ಲಿ ಕಾರಂತರು ಶತಮಾನಗಳಿಂದ ನಡೆದುಕೊಂಡು ಬಂದ ಜನಪದ ಕ್ರೀಡೆಯೊಂದರ ವಿವಿಧ ಮಗ್ಗುಲುಗಳನ್ನು ನಮ್ಮ ಮುಂದೆ ತೆರೆದಿಡುತ್ತಾರೆ. ಅದೆಷ್ಟು ಜನಪದ ಕ್ರೀಡೆಗಳು ಕಾಲದ ಸೆಳೆತಕ್ಕೆ ತುತ್ತಾಗಿ ಕಣ್ಮರೆಯಾಗುತ್ತಲಿವೆ. ಅಂಥದ್ದರ ನಡುವೆ ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ 'ಕಂಬಳ' ಎನ್ನುವ ಕ್ರೀಡಾಹಬ್ಬ ನಿರಾತಂಕವಾಗಿ

ನಡೆದುಕೊಂಡು ಬಂದಿವೆ. ಅದನ್ನೂ ಮುಂದಿನ ಪೀಳಿಗೆಗೂ ಉಳಿಸುವ ದೃಷ್ಟಿಯಿಂದ ಈ ಲೇಖನ ಉಪಯುಕ್ತವಾಗಿದೆ.

2003ರ 9ನೇ ತರಗತಿಯ ಪ್ರಥಮ ಭಾಷೆ ಪಠ್ಯಪುಸ್ತಕ 'ಕನ್ನಡ ಕಸ್ತೂರಿ'ಯಲ್ಲಿ ಜಾರ್ಜ್ ಫರ್ಡಿನಾಂಡ್ ಕಿಟ್ಟಲ್(ಪು.27–39) ಬಗ್ಗೆ ಡಾ.ಆರ್.ಸಿ.ಹಿರೇಮಠ ಅವರು ಬರೆದ ಲೇಖನವಿದೆ. ಕಿಟ್ಟಲ್ ಅವರು ಮಾಡಿದ ಕನ್ನಡ ಭಾಷಾ ಅಧ್ಯಯನ, ಕನ್ನಡಕ್ಕೆ ಅವರು ನೀಡಿದ ಕೊಡುಗೆಗಳು ಅಪಾರ ಕನ್ನಡ–ಇಂಗ್ಲೀಷ್ ವಿಷಯ ರಚಿಸಿ ಕನ್ನಡಕ್ಕೆ ಮಹದುಪಕಾರ ಮಾಡಿದ್ದಾರೆ. ಕಿಟೆಲ್ ಅವರ ಕನ್ನಡ ಸೇವೆಯ ಬಗ್ಗೆ ಈ ಪಾಠ ಬೆಳಕು ಚೆಲ್ಲುತ್ತದೆ.

ಇದೇ ಪಠ್ಯ ಪುಸ್ತಕದಲ್ಲಿ ಗೋ.ರೂ. ಚೆನ್ನಬಸಪ್ಪ ಅವರು ಬರೆದ ದೊಡ್ಡಾಟ(ಪು.47–56) ಎಂಬ ಪಾಠ ಕರ್ನಾಟಕದ ಕಲೆ–ಬಯಲಾಟದಲ್ಲಿ ಒಂದಾದ ದೊಡ್ಡಾಟದ ಬಗ್ಗೆ ಪರಿಚಯಿಸುತ್ತದೆ.

ಮುದ್ದಣನ 'ಕನ್ನಡಂ ಕಸ್ತೂರಿಯಲ್ತೆ' ಎಂಬ ಗದ್ಯಭಾಗವೂ ಕನ್ನಡಭಾಷೆಯ ಹಿರಿಮೆ ಯನ್ನು ವಸ್ತುವಾಗಿರಿಸಿಕೊಂಡಿದೆ.

2004ರ 10ನೇ ತರಗತಿಯ ಕನ್ನಡ ಪಠ್ಯ ಪುಸ್ತಕವಾದ 'ಕನ್ನಡ ಕಸ್ತೂರಿ'ಯಲ್ಲಿ ಎಂ. ಮರಿಯಪ್ಪ ಭಟ್ಟರ 'ನಮ್ಮಭಾಷೆ' ಎಂಬ ಪಾಠವಿದೆ(ಪು1) ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಸುದೀರ್ಘ ಇತಿಹಾಸವಿದೆ. ಅದು ಇತರ ಭಾಷೆ–ಸಾಹಿತ್ಯ, ಸಂಸ್ಕೃತಿಯಿಂದ ಪ್ರಭಾವಿತವಾದರೂ ದೇಸಿಯನ್ನು ಬಿಟ್ಟಿಲ್ಲ. ಸ್ವತಂತ್ರ್ಯವಾಗಿ ಬೆಳೆದು ಬಂದಿದೆ. ಅದರ ಸಾಂಸ್ಕೃತಿಕ ಮಹತ್ವವನ್ನರಿಯುವುದು ಈ ಪಾಠದ ಉದ್ದೇಶವಾಗಿದೆ. 2012ರ ಪಠ್ಯದಲ್ಲೂ ಎಂ. ಮರಿಯಪ್ಪ ಭಟ್ಟ ಅವರ 'ನಮ್ಮ ಭಾಷೆ' ಪಾಠವನ್ನು ಮುಂದುವರಿಸಲಾಗಿದೆ.

ಪದ್ಯಭಾಗದಲ್ಲಿ 'ಕನ್ನಡನಾಡಸಿರಿ' ಎಂಬ ಪದ್ಯವಿದ್ದು (ಪು.168) ಕನ್ನಡನಾಡಿನ ವಿಸ್ತಾರ, ಸಮೃದ್ಧಿ, ಅದರ ವೈಶಿಷ್ಟ್ಯ ಕನ್ನಡಿಗರ ಪ್ರತಿಭಾ ಸಂಪನ್ನತೆ, ಕಾವ್ಯ ಸೃಷ್ಟಿಯ ಪರಿಣತಿಯನ್ನು ಅತ್ಯಂತ ಅಭಿಮಾನದಿಂದ ಕಾವ್ಯಾತ್ಮಕವಾಗಿ ಅಭಿವ್ಯಕ್ತಿಸಿರುವುದು, ಕನ್ನಡ ನಾಡಿನ ಭವ್ಯ ಸಂಸ್ಕೃತಿಯ ಸುಂದರ ನೋಟ ನೀಡಲಾಗಿದೆ.

2006ರ 8ನೇ ತರಗತಿಯ ತಿಳಿಕನ್ನಡ ಪಠ್ಯ ಪುಸ್ತಕದಲ್ಲಿ ದೇವೆಂದ್ರ ಕುಮಾರ ಹಕಾರಿ ಅವರ 'ಸಿರಿನಾಡು' ಎಂಬ ಕವಿತೆಯಿದ್ದು ಅದರಲ್ಲಿ ಕನ್ನಡನಾಡನ್ನು ವರ್ಣಿಸಿದೆ.

2012ರ 10ನೇ ತರಗತಿಯ ಕನ್ನಡ ದ್ವಿತೀಯ ಭಾಷೆಯ ಪಠ್ಯಪುಸ್ತಕ ತಿಳಿಕನ್ನಡದಲ್ಲಿ 'ಬಹುಮುಖ ರಂಗ ಪ್ರತಿಭೆಯ ಬಿ.ವಿ. ಕಾರಂತ ಎಂಬ ಪಾಠವಿದೆ. ಇದನ್ನು ಹಾ.ಸ. ಕೃ. ಅವರು ಬರೆದಿದ್ದಾರೆ(ಪು.32–38) ಕನ್ನಡನಾಡು ಕಲೆಗಳ ಬೀಡು ಪ್ರಸಿದ್ಧ ಕವಿಗಳು ಕಲಾವಿದರು ಈ ಪುಣ್ಯಭೂಮಿಯಲ್ಲಿ ಜನ್ಮ ತಾಳಿದ್ದಾರೆ. ಇವರಲ್ಲದೆ ಕನ್ನಡ ನಾಡಿನಲ್ಲಿ ಎಷ್ಟೋ ಜನ ಮಹತ್ವದ ರಂಗ ಸಂಪನ್ನರೂ ಆಗಿ ಹೋಗಿದ್ದಾರೆ. ಜಾನಪದ, ವೃತ್ತಿ ಮತ್ತು ಹವ್ಯಾಸಿ ಈ ಎಲ್ಲಾ ಕ್ಷೇತ್ರಗಳಲ್ಲೂ ರಂಗಭೂಮಿಯ ಶ್ರೇಯಸ್ಸಿಗಾಗಿ ಅಸಂಖ್ಯಾತ ವ್ಯಕ್ತಿಗಳು ಈ ನಾಡಿನಲ್ಲಿದ್ದಾರೆ. ಅಂತಹ ಮಹತ್ವದ ಸಾಧನೆಗೈದಿರುವ ನಾಟಕಕಾರರು, ನಟರು, ವಿರ್ದೇಶಕರು ಮೊದಲಾದ ರಂಗ ಸಂಪನ್ನರ ಬಗ್ಗೆ ಅರಿಯುವುದು ಮುಂದಿನ ಪೀಳಿಗೆಯ ದೃಷ್ಟಿಯಿಂದ ಪ್ರಯೋಜನಕಾರಿ ಎಂದು ಪರಿಗಣಿಸಿ ಈ ಪಾಠವನ್ನು ನೀಡಲಾಗಿದೆ.

ಬಿ.ಎಂ. ಕಾರಂತರು ಬಹುಮುಖ ಪ್ರತಿಭೆಯುಳ್ಳ ರಂಗಸಂಪನ್ನರು ಬಾಲ್ಯದಿಂದಲೇ ಅವರದು ಹೋರಾಟದ ಬದುಕು. ಸ್ವಪ್ರಯತ್ನದಿಂದ ಮೇಲೇರಿದ ಕಾರಂತರು ರಾಜ್ಯ ಮತ್ತು ರಾಷ್ಟ್ರ ಕಂಡಂತಹ ಓರ್ವ ಶ್ರೇಷ್ಠ ನಟ, ನಾಟಕಕಾರ, ನಿರ್ದೇಶಕ, ರಂಗಭೂಮಿ

ಮತ್ತು ಸಿನಿಮಾ ಜಗತ್ತಿನಲ್ಲಿ ಅಪೂರ್ವ ಛಾಪನ್ನು ಮೂಡಿಸಿದ ವ್ಯಕ್ತಿತ್ವವುಳ್ಳ ಕಾರಂತರನ್ನೂ ಸಂಕ್ಷಿಪ್ತವಾಗಿ ಪರಿಚಯಿಸುವ ಉದ್ದೇಶದಿಂದ ಈ ಪಾಠವನ್ನೂ ನೀಡಲಾಗಿದೆ.

2014ರ 8ನೇ ತರಗತಿಯ ಸಿರಿ ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದಲ್ಲಿ 'ತಲಕಾಡಿನ ವೈಭವ' ಎಂಬ ಪ್ರವಾಸ ಕಥನವನ್ನು ಹಿರೇಮಲ್ಲೂರು ಈಶ್ವರನ್ ಬರೆದಿದ್ದು (ಪು.21–30) ನಮ್ಮ ಸಂಸ್ಕೃತಿಯ ಪ್ರತೀಕವಾದ ದೇವಾಲಯಗಳ ಶಿಲ್ಪ ಕಲಾ ವೈಭವವನ್ನು ವರ್ಣಿಸಿದ್ದಾರೆ. ಕರ್ನಾಟಕದ ತಲಕಾಡು ಪ್ರಕೃತಿ ಸೌಂದರ್ಯವನ್ನು ಹೊಂದಿರುವುದು ವಿಶೇಷ. ಅದರಲ್ಲೂ ಪಂಚ ದೇವಾಲಗಳು ಆಸ್ತಿಕರ ಚಿತ್ರವನ್ನು ಗಮನ ಸೆಳೆಯುವಲ್ಲಿ ಮಹತ್ವದ ಪಾತ್ರ ವಹಿಸಿದೆ ಪ್ರವಾಸಿಗರ, ಯಾತ್ರಾರ್ಥಿಗಳ, ವಾಸ್ತು ತಜ್ಞರ ಕೇಂದ್ರ ಬಿಂದು ತಲಕಾಡಿನ ಚಿತ್ರವನ್ನು ಈ ಗದ್ಯಭಾಗದಲ್ಲಿ ಒಳಗೊಂಡಿದೆ.

2014ರ 8ನೇ ತರಗತಿಯ ಸಿರಿ ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕದಲ್ಲಿ ಕುವೆಂಪು ಅವರು ಬರೆದ 'ಮಲೆನಾಡಿನ ಚಿತ್ರಗಳು' ಗದ್ಯ ಕೃತಿಯಿಂದ ಆಯ್ದ 'ಅಜ್ಜಯ್ಯನ ಅಭ್ಯಂಜನ' (ಪುಟ ಸಂ 62–69) ಹಬ್ಬ ಹರಿದಿನಗಳಲ್ಲಿ ಮನೆಮಂದಿಯೆಲ್ಲರೂ ಸಂತಸದಿಂದ ಅಭ್ಯಂಜನ (ಎಣ್ಣೆ ಸ್ನಾನ) ದಲ್ಲಿ ಭಾಗವಹಿಸುವುದು ಸಂಸ್ಕೃತಿಯ ಒಂದು ಭಾಗವಾಗಿ ಅನೂಚಾನವಾಗಿ ಬೆಳೆದು ಬಂದಿರುತ್ತದೆ. ಈ ಅಭ್ಯಂಜನಕ್ಕೆ ವೈದ್ಯ ಚಿಕಿತ್ಸೆ ಹಾಗೂ ಯೋಗ ಪರಂಪರೆಯಲ್ಲಿ ವಿಶೇಷ ಸ್ಥಾನವಿದೆ. ವೈಜ್ಞಾನಿಕವಾಗಿ ಹಾಗೂ ದೈಹಿಕವಾಗಿ ಅಭ್ಯಂಜನ ಉತ್ತಮ ಆರೋಗ್ಯವನ್ನು ಪಡೆಯಲು ಉತ್ತಮ ವಿಧಾನವೆಂದು ಪರಿಗಣಿಸಲ್ಪಟ್ಟಿದೆ. ಒತ್ತಡ ಹಾಗೂ ಯಾಂತ್ರಿಕ ಜೀವನ ನಡೆಸುವ ಇಂದಿನ ದಿನಗಳಲ್ಲಿ ಅಭ್ಯಂಜನ ತನ್ನ ಮಹತ್ವವನ್ನು ಕಳೆದುಕೊಳ್ಳುತ್ತಿದೆ

2014ರ 9ನೇ ತರಗತಿಯ ಪ್ರಥಮ ಭಾಷೆಯ ಕನ್ನಡ ಪಠ್ಯಪುಸ್ತಕ 'ಸಿರಿ ಕನ್ನಡ'ದಲ್ಲಿ 'ಜನಪದ ಕಲೆಗಳ ವೈಭವ' ಎಂಬ ಗದ್ಯಪಾಠವನ್ನು ನೀಡಲಾಗಿದೆ. ಆನಪದ ಕಲೆ ಅತ್ಯಂತ ಪ್ರಾಚೀನವಾಗಿದ್ದು ಆಂಗಿಕ ಅಭಿನಯದ ಮೂಲಕ ವ್ಯಕ್ತವಾಗುವ ಕಲೆ ಹೆಚ್ಚು ಜನಪ್ರಿಯವಾಗಿದೆ. ವಿವಿಧ ಪ್ರಕಾರಗಳಲ್ಲಿ ವ್ಯಕ್ತವಾಗುವ ಕಲೆ, ಪ್ರಾದೇಶಿಕ ಮಹತ್ವ ಪಡೆದಿದೆ. ಆಧುನಿಕತೆಯ ಪ್ರಭಾವದಿಂದ ಜನಪದ ಕಲೆ ನಶಿಸುತ್ತಿದೆ. ಇದರಿಂದ ಎಷ್ಟೋ ಪ್ರಕಾರಗಳು ಕಣ್ಮರೆಯಾಗಿದೆ. ಗ್ರಾಮೀಣ ಬದುಕಿನ ಅವಿಭಾಜ್ಯ ಅಂಗವಾಗಿದ್ದ ಕಲೆ ಮನರಂಜನೆಯ ಮಾಧ್ಯಮವೂ ಕ್ರಿಯಾಶೀಲತೆಯ ಸಂಕೇತವೂ ಆಗಿರುವುದು ಗಮನಾರ್ಹ ಅಂಶಬಾಗಿದೆ. ವಿಶಿಷ್ಟ ನಂಬಿಕೆ, ಆಚರಣೆಯ ಪ್ರಾತಿನಿಧಿಕ ರೂಪವಾಗಿ ಜನಪದ ಕಲೆ ರೂಪಗೊಂಡಿದ್ದು ಸಾಂಸೃತಿಕ ನೆಲೆಯ ಹಿನ್ನೆಲೆಯಲ್ಲಿ ಮಹತ್ವ ಪಡೆದಿದೆ. ಪ್ರಸ್ತುತ ಪಾಠದಲ್ಲಿ ವೀರಗಾಸೆ, ಕಂಸಾಳೆ, ಡೊಳ್ಳು ಕುಣಿತ ಹಾಗೂ ಯಕ್ಷಗಾನದ ಪರಿಚಯವನ್ನು ಮಾಡಿ ಕೊಡಲಾಗಿದೆ.

ಇದೇ ಪಾಠ ಪುಸ್ತಕದಲ್ಲಿ ಸತ್ಯ ವಿಠಲ ಭಾಮಿನಿ ಷಟ್ಪದಿಯಲ್ಲಿ ರಚಿಸಿದ ' ಸಂಪೂರ್ಣ ದೇವಿ ಮಹಾತ್ಮೆ' ಪದ್ಯವನ್ನು ನೀಡಲಾಗಿದೆ ಅದರಲ್ಲಿ –

ಕನ್ನಡವು ಹಿರಿದೊಂದು ಸಂಸ್ಕೃತಿ
ಕನ್ನಡವು ಹಿರಿದೊಂದು ಜ್ಞಾನವು
ಕನ್ನಡದ ಕಸ್ತೂರಿ ಸೌರಭ ಲೋಕ ತುಂಬಿಹುದು
ಕನ್ನಡ ನುಡಿ ಕಿವಿಗೆ ಮಧುರವು
ಕನ್ನಡ ನುಡಿ ಮಧುರ ಜೇನುವು
ಕನ್ನಡ ಸಿರಿ ಸೊಬಗ ಬಣ್ಣಿಪರಾರು ಲೋಕದಲಿ

ಎಂದು ಕನ್ನಡ ನುಡಿ ಸಂಸ್ಕೃತಿಯನ್ನು ವಸ್ತುವಾಗಿರಿಸಿ ವರ್ಣಿಸಿರುವರು. 2017ರ ವರೆಗೂ ಇದೇ ಪಠ್ಯ ಪುಸ್ತಕವನ್ನು ಮುಂದುವರಿಸಲಾಗಿದೆ.

2014ರ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 'ಸಿರಿ ಕನ್ನಡ'ದಲ್ಲಿ ಗೋರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಬರೆದ 'ಅಮೇರಿಕಾದಲ್ಲಿ ಗೋರೂರು' ಎಂಬ ಪ್ರವಾಸ ಕಥನದಿಂದ ಆಯ್ದ ಅದೇ ಹೆಸರಿನ ಗದ್ಯ ಪಾಠದಲ್ಲಿ(ಪು 14 ರಿಂದ 17)ನಮ್ಮ ದೇಶದ ಸಾಂಸ್ಕೃತಿಕ ಮಹತ್ವವನ್ನು, ಸಾಹಿತ್ಯದ ಸೊಗಸನ್ನು ಮತ್ತು ನಾಡಿನ ಹಿರಿಮೆಯನ್ನು ಬಿಂಬಿಸಿದ್ದಾರೆ. ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ಅನುಯಾಯಿಯಾಗಿದ್ದ ಗೋರೂರರು ಖಾದಿಯ ಮಹತ್ವ ಮತ್ತು ಕನ್ನಡ ಸಾಹಿತ್ಯದ ಹಿರಿಮೆಯನ್ನು ಹಾಸ್ಯಲೇಪನದ ಜೊತೆ ಸುಂದರವಾಗಿ ನಿರೂಪಿಸಿದ್ದಾರೆ.

ಇದೇ ಪಾಠ ಪುಸ್ತಕದಲ್ಲಿ (ಪುಟ ಸಂ.29–32) ಬಿ.ಎಂ.ಶ್ರೀ ಅವರು ಸಂಪಾದಿಸಿದ 'ಕನ್ನಡ ಬಾವುಟ' ಎಂಬ ಕೃತಿಯಿಂದ 'ಧರ್ಮ ಸಮದೃಷ್ಟಿ' ಎಂಬ ಕ್ರಿ.ಶ.1368ರ ಶಾಸನವನ್ನು ನೀಡಲಾಗಿದೆ. ಪ್ರಾಚೀನ ಸಮಾಜವನ್ನು ಅರ್ಥ ಮಾಡಿಕೊಂಡು ಸಾಂಸ್ಕೃತಿಕ ಮಹತ್ವವನ್ನು ಗ್ರಹಿಸಲು ಇರುವ ಆಕರಗಳಲ್ಲಿ ಶಾಸನ ಸಾಹಿತ್ಯ ಪ್ರಮುಖವಾದುದು. ದಾನ–ದತ್ತಿ ಶಾಸನಗಳು, ವೀರಗಲ್ಲುಗಳು, ಮಾಸ್ತಿ ಕಲ್ಲುಗಳು ಪ್ರಾಚೀನ ಸಾಹಿತ್ಯ, ಸಂಸ್ಕೃತಿಗಳನ್ನು ಅರ್ಥಮಾಡಿಕೊಳ್ಳಲು ಸಹಕಾರಿಯಾಗಿದೆ. ಹಿಂದೂ, ಕ್ರೈಸ್ತ, ಮುಸಲ್ಮಾನ, ಬೌದ್ಧ, ಜೈನ, ಪಾರಸಿಕರ ಉದ್ಯಾನದಂತಿರುವ ಭಾರತದಲ್ಲಿನ ಮತೀಯ ಸೌಹಾರ್ದತೆಗೆ ಯತಿಹಾಸಿಕ ಹಿನ್ನೆಲೆಯಿದೆ. ಅಂತಹ ಸಾಮರಸ್ಯಕ್ಕೆ ಶಾಸನವೊಂದು ಇಲ್ಲಿ ಸಾಕ್ಷಿಯಾಗಿದೆ. ಭಾಷೆಯ ಬೆಳೆವಣಿಗೆಯ ದೃಷ್ಟಿಯಿಂದ ಶಾಸನಗಳು ಹೇಗೆ ಪೂರಕವಾಗಿದೆ ಎಂಬುದನ್ನು ಇಲ್ಲಿನ ಶಾಸನದ ಮೂಲಕ ತಿಳಿಯಬಹುದು.

2017ರ ವರೆಗೂ ಇದೇ ಪಠ್ಯ ಪುಸ್ತಕವನ್ನು ಮುಂದುವರಿಸಲಾಗಿದೆ ಎಂಬುದನ್ನು ನಾವು ಗಮನಿಸಬಹುದು.

ಉಪಸಂಹಾರ

1918ರಿಂದ 2018ರ ವರೆಗಿನ 100 ವರ್ಷಗಳ ನಮ್ಮ ರಾಜ್ಯದ ಪ್ರೌಢಶಾಲಾ ಕನ್ನಡ ಪಠ್ಯ ಪುಸ್ತಕಗಳನ್ನು ರಚಿಸುವ ಸಂದರ್ಭದಲ್ಲಿ ಪಠ್ಯ ಪುಸ್ತಕ ರಚನಕಾರರು ಪಠ್ಯ ಪುಸ್ತಕದ ಮೂಲಕ ವಿದ್ಯಾರ್ಥಿಗಳಲ್ಲಿ ತಾನು ಜನಿಸಿದ ನಾಡು ಮತ್ತು ನುಡಿ ಕುರಿತು, ನಾಡಿನ ಭಾಷೆಯನ್ನು ಕುರಿತು ಮತ್ತು ಸಂಸ್ಕೃತಿಯನ್ನು ಕುರಿತು ಅಭಿಮಾನವನ್ನು ಬೆಳೆಸುವ ಉದ್ದೇಶವನ್ನು ಹೊಂದಿದ್ದರೇ ಎಂಬುದನ್ನು ಪರಿಶೀಲಿಸಲಾಗಿದೆ. ಕರ್ನಾಟಕ ಏಕೀಕರಣ ಹಾಗೂ ನಾಮಕರಣದ ನಂತರವಷ್ಟೇ ಸಂಸ್ಕೃತಿಗೆ ಹೆಚ್ಚಿನ ಮಹತ್ವ ನೀಡಲಾಗಿತ್ತು ಎಂಬುದು ಗಮನಾರ್ಹ ಸಂಗತಿಯಾಗಿದೆ. ಕನ್ನಡದ ಪ್ರಸಿದ್ಧ ಸಾಹಿತಿಗಳ, ಕವಿಗಳ ಕೃತಿಗಳನ್ನು ನೀಡುವ ಮೂಲಕ, ನಾಡು ನುಡಿ ಸಂಸ್ಕೃತಿ ಬಗೆಗಿನ ಬರಹಗಳನ್ನು ಅಳವಡಿಸುವ ಮೂಲಕ ಕರ್ನಾಟಕದ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಹ ಗದ್ಯ ಪದ್ಯ ಪಾಠಗಳನ್ನು ಕರ್ನಾಟಕ ನಾಮಕರಣಾನಂತರದ ವಿವಿಧ ಕಾಲಘಟ್ಟದ ಪಠ್ಯ ಪುಸ್ತಕಗಳಲ್ಲಿ ನೀಡಿರುವುದು ಸಂಸ್ಕೃತಿಯ ವರ್ಗಾವಣೆಯ ಸದುದ್ದೇಶದಿಂದ ಎಂದರೆ ಅತಿಶಯೋಕ್ತಿಯಾಗಲಾರದು.

ಒಟ್ಟಿನಲ್ಲಿ ಆಯಾ ಸಮಾಜದ, ಆಯಾ ಜನಾಂಗದ ಸಂಸ್ಕೃತಿಯನ್ನು ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿಗೆ ವರ್ಗಾಯಿಸಲು ಪರಿಣಾಮಕಾರಿಯಾದ

ಮಾಧ್ಯಮವಾಗಿ ಕನ್ನಡ ಪಠ್ಯಪುಸ್ತಕವು ಕಾರ್ಯ ನಿರ್ವಹಿಸುತ್ತದೆ.

ಪರಾಮರ್ಶನ ಗ್ರಂಥಗಳು

1. ಅನುಸೂಯ ಪರಗಿ 'ಮಾತೃಭಾಷೆ ಕನ್ನಡ ತತ್ವ ಮತ್ತು ಬೋಧನಾ ಮಾರ್ಗ' ವಿವೇಕ ಪ್ರಕಾಶನ, ಚಿಕ್ಕಬಳ್ಳಾಪುರ 2014
2. ಮಹಾಬಲೇಶ್ವರ ರಾವ್, 'ಪ್ರೌಢಶಾಲೆಗಳಲ್ಲಿ ಕನ್ನಡ ಬೋಧನೆ' – ಪ್ರಕಾಶಕರು ನವಕರ್ನಾಟಕ ಪಬ್ಲಿಕೇಶನ್ ಬೆಂಗಳೂರು 1996
3. ಶಿವರಾಮ ಕಾರಂತರ ಲೇಖನಗಳು ಸಂಪುಟ2 ಭಾಷೆ, ಶಿಕ್ಷಣ ಸಂಸ್ಕೃತಿ, ಸಂಶೋಧನೆ–ಪ್ರಸಾರಾಂಗ, ಮಂಗಳೂರು 2002
4. ಅಭಿನವ ಸಾಹಿತ್ಯ ಪ್ರವೇಶ ಭಾಗ 3 ಕನ್ನಡ ಪಠ್ಯಪುಸ್ತಕ 10ನೇ ತರಗತಿ 1959
5. ಕನ್ನಡ ಕಸ್ತೂರಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 10ನೇ ತರಗತಿ 2013
6. ಕನ್ನಡ ಕಸ್ತೂರಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 10ನೇ ತರಗತಿ 2012
7. ಕನ್ನಡ ಕಸ್ತೂರಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 9ನೇ ತರಗತಿ 2011
8. ಕನ್ನಡ ಕಸ್ತೂರಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 2010
9. ಕನ್ನಡ ಕಸ್ತೂರಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 9ನೇ ತರಗತಿ 2009
10. ಕನ್ನಡ ಕಸ್ತೂರಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 2007
11. ಕನ್ನಡ ಕಸ್ತೂರಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 10ನೇ ತರಗತಿ 2004
12. ಕನ್ನಡ ಕಸ್ತೂರಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 9ನೇ ತರಗತಿ 2003
13. ಕನ್ನಡ ಕಸ್ತೂರಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 2001
14. ಕನ್ನಡ ಭಾರತಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 2001 (ಪರಿಷ್ಕೃತ)
15. ಕನ್ನಡ ಭಾರತಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 10ನೇ ತರಗತಿ 2002
16. ಕನ್ನಡ ಭಾರತಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 2000
17. ಕನ್ನಡ ಭಾರತಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 1999
18. ಕನ್ನಡ ಭಾರತಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 9ನೇ ತರಗತಿ 1996
19. ಕನ್ನಡ ಭಾರತಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 1992
20. ಕನ್ನಡ ಭಾರತಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 1993
21. ಕನ್ನಡ ಭಾರತಿ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 10ನೇ ತರಗತಿ 1994
22. ಸಾಹಿತ್ಯ ಮಂಜರಿ 1 ದ್ವಿತೀಯ/ತೃತೀಯ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 1992–93
23. ಕನ್ನಡ ಕುಸುಮ ತೃತೀಯ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 1982
24. ಕನ್ನಡ ಗಂಗೋತ್ರಿ 3 ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 10ನೇ ತರಗತಿ 1985
25. ಕನ್ನಡ ಗಂಗೋತ್ರಿ 1 ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 1978
26. ಕನ್ನಡ ಏಳನೇ ಪುಸ್ತಕ– 8ನೇ ತರಗತಿ 1920 ಸಾರ್ವಜನಿಕ ಶಿಕ್ಷಣ ಇಲಾಖೆ, ಮುಂಬಯಿ. ಮ್ಯಾಕ್ ಮಿಲನ್ ಕಂಪೆನಿ ಲಿಮಿಟೆಡ್, ಮುಂಬಯಿ
27. ಕನ್ನಡ ನೂತನ ಪಾಠ 8ನೇ ತರಗತಿ 1936 ಮ್ಯಾಕ್ ಮಿಲನ್ ಕಂಪೆನಿ ಲಿಮಿಟೆಡ್, ಮುಂಬಯಿ.
28. ಕನ್ನಡ ಏಳನೇ ಪುಸ್ತಕ– 8ನೇ ತರಗತಿ 1929 ಸಾರ್ವಜನಿಕ ಶಿಕ್ಷಣ ಇಲಾಖೆ, ವಿ. ಲಕ್ಷ್ಮಣ ರಾವ್ ಎಂಡ್ ಸನ್ಸ್, ಉಡುಪಿ.
29. ಕನ್ನಡ ಪಠ್ಯಪುಸ್ತಕ ಭಾಗ 1–10ನೇ ತರಗತಿ 1960 (ಮದ್ರಾಸ್ ಕರ್ನಾಟಕ ಪ್ರದೇಶಗಳಿಗೆ) ಮೈಸೂರು ವಿಶ್ವ ವಿದ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು.

30. ಕನ್ನಡ ಪಠ್ಯಪುಸ್ತಕ ಭಾಗ 11–10ನೇ ತರಗತಿ 1960(ಮದ್ರಾಸ್ ಕರ್ನಾಟಕ ಪ್ರದೇಶಗಳಿಗೆ) ಮೈಸೂರು ವಿಶ್ವವಿದ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು.
31. ಕನ್ನಡ ಏಳನೇ ಪುಸ್ತಕ – 8ನೇ ತರಗತಿ 1929 ಆರನೇ ಆವೃತ್ತಿ ಸಾರ್ವಜನಿಕ ಶಿಕ್ಷಣ ಇಲಾಖೆ, ಮ್ಯಾಕ್ ಮಿಲನ್ ಕಂಪೆನಿ ಲಿಮಿಟೆಡ್, ಮುಂಬಯಿ.
32. ಕನ್ನಡ ಎರಡನೇ ಪದ್ಯ ಪುಸ್ತಕ–8ನೇ ತರಗತಿ 1926 ಪಂಜೆ ಮಂಗೇಶ ರಾವ್ ಕೆನರೀಸ್ ಮಿಶನ್ ಪ್ರೆಸ್, ಮಂಗಳೂರು.
33. ಕನ್ನಡ ಮೊದಲನೇ ಪುಸ್ತಕ 1921 ಮ್ಯಾಕ್ ಮಿಲನ್ ಕಂಪೆನಿ ಲಿಮಿಟೆಡ್, ಮುಂಬಯಿ.
34. ಕನ್ನಡ ಕಾವ್ಯವಲ್ಲರಿ 1ನೇ ಭಾಗ 1930, ಶೆಣೈ ಬ್ರದರ್ಸ್ ಕಂಪೆನಿ ಲಿ. ಮಂಗಳೂರು.
35. ಕೆನರೀಸ್ ಪ್ರೋಸ್ ಸಂಪುಟ 1 ಕಥಾ ಸಂಗ್ರಹ, 1921.
36. ನವೋದಯ ಕನ್ನಡ ವಾಚನ ಮಾಲೆ, 8ನೇ ತರಗತಿ 1954 ಮಂಗಳೂರು ಟ್ರೇಡಿಂಗ್ ಅಸೋಸಿಯೇಷನ್, ಮಂಗಳೂರು.
37. ಭಾಗ್ಯ ಶಿಲ್ಪಿ ಕನ್ನಡ ಉಪ ಪಠ್ಯಪುಸ್ತಕ 10ನೇ ತರಗತಿ 1968
38. ಸಾಹಿತ್ಯ ಮಣಿಮಾಲೆ ಪ್ರಥಮ ಸಂಪುಟ 1930 ಉಗ್ರಾಣ ಮಂಗೇಶ ರಾವ್, ಬಾಸೆಲ್ ಮಿಶನ್ ಪ್ರೆಸ್, ಮಂಗಳೂರು.
39. ಸಿರಿ ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 8ನೇ ತರಗತಿ 2014
40. ಸಿರಿ ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 9ನೇ ತರಗತಿ 2014
41. ಸಿರಿ ಕನ್ನಡ ಪ್ರಥಮ ಭಾಷಾ ಕನ್ನಡ ಪಠ್ಯಪುಸ್ತಕ 10ನೇ ತರಗತಿ 2014
42. ಹೊಸ ಕನ್ನಡ ಪಾಠ ಪಟ್ಟಿ 8ನೇ ತರಗತಿ 1939
43. Higher Secondary Curriculum 8th Standard 1958 Published by Department of Public Instruction Mysore State, Bangalore.
44. The Canarese Text Book Part- I SSLC 1930 Published by Madras Methodist Publishing House
45. The Canarese Text Book Part- II SSLC 1930 Published by Madras Methodist Publishing House.
46. The Canarese Text Book for detailed study SSLC 1934 Published by Govt of Madras .
47. The Canarese Poetical Selections Group A for detailed study SSLC 1920 Published by Department of Public Instruction, Govt of Madras.
48. The Canarese Text Book for detailed study Part I SSLC 1927 Published by Madras and Andra University.
49. The Canarese Text Book for detailed study Part II SSLC 1927 Published by Madras and Andra University.
50. The Canarese Text Book for detailed study Part II SSLC 1924 Published by Madras University.
51. The Canarese Text Book for detailed study Part II SSLC 1933 Published by Madras and Andra University.

✠✠✠

ಹಳಗನ್ನಡ ಸಾಂಸ್ಕೃತಿಕ ಪದಕೋಶ : ಒಂದು ವಿಮರ್ಶೆ

ಡಾ. ಮಾಧವ ಪೆರಾಜೆ
ಪ್ರಾಧ್ಯಾಪಕರು, ಹಂಪಿ ಕನ್ನಡ ವಿಶ್ವವಿದ್ಯಾನಿಲಯ
ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ

ಪ್ರೊ. ಕೇಶವ ಶರ್ಮ ಅವರು ಹಳಗನ್ನಡ ಸಾಂಸ್ಕೃತಿಕ ಪದಕೋಶ ಎನ್ನುವ ಗ್ರಂಥವನ್ನು ಬರೆದಿದ್ದಾರೆ. (ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, 2018) ಈ ಕೃತಿಯಲ್ಲಿ ಲೇಖಕರ ಮಾತು ಎನ್ನುವ ತಲೆಬರಹದಡಿಯಲ್ಲಿ ಅವರು ಹೀಗೆ ಬರೆದಿದ್ದಾರೆ;

"ಕೆಲವರಿಗೆ ಪರಿಕಲ್ಪನೆ ಎಂದರೇನು ಎಂದೂ ಗೊತ್ತಿಲ್ಲ. ಸಾಮಾನ್ಯ ಮನುಷ್ಯರು ಇಂಥ ಕೋಶದ ಅಗತ್ಯವನ್ನು ತಿಳಿಯದಿದ್ದರೆ ತೊಂದರೆ ಇಲ್ಲ. ಆದರೆ ಸಾಹಿತ್ಯವನ್ನು ಬೋಧಿಸುವವರಿಗೂ ಹಳಗನ್ನಡದ ಪರಿಭಾಷೆಗಳು, ಅದರ ಹಿಂದಿನ ಚರಿತ್ರೆಯ ತಿಳುವಳಿಕೆ ಇಲ್ಲದೆ ಹೋಗಿರುವುದು ಸಮಕಾಲೀನ ದುರಂತಗಳಲ್ಲಿ ಒಂದು. ಅಂಥವರಿಂದ ಈ ಕೋಶವು ಅಭಿವೃದ್ಧಿ ಪ್ರಾಧಿಕಾರದಲ್ಲಿ ಪ್ರಕಟವಾಗುವುದು ತಪ್ಪಿಹೋಯಿತು. ಈ ವಿಷಯದಲ್ಲಿ ನನಗೆ ಖೇದವಿದೆ." (ಪು.ix)

ಕೇಶವ ಶರ್ಮ ಅವರು ಈ ಗ್ರಂಥದ ಅಗತ್ಯವೇನಿದೆ, ಯಾರನ್ನು ಉದ್ದೇಶಿಸಿ ಈ ಗ್ರಂಥವನ್ನು ಬರೆಯಲಾಗಿದೆ, ಎನ್ನುವುದನ್ನು ಪ್ರತ್ಯೇಕವಾಗಿ ಬೇರೆಲ್ಲಿಯೂ ಹೇಳದಿರುವುದರಿಂದ ಬಹುಶಃ ಮೇಲಿನ ಮಾತುಗಳಲ್ಲಿಯೇ ಅದು ಅಸ್ಪಷ್ಟವಾಗಿ ಕಂಡುಬರುತ್ತದೆಂದು ನನಗೆ ತೋರಿದ ಕಾರಣಕ್ಕೆ ಇದನ್ನು ಉಲ್ಲೇಖಿಸಬೇಕಾಯಿತು. ಅಂದರೆ ಹಳಗನ್ನಡವನ್ನು ಪಾಠಮಾಡುವವರಿಗೆ ಹಾಗೂ ಸಾಮಾನ್ಯ ಮನುಷ್ಯರಿಗೆ ಅಲ್ಲಿರುವ ಪರಿಭಾಷೆಗಳು ಅರ್ಥವಾಗಿರುವುದಿಲ್ಲ ಎನ್ನುವ ಕಾರಣಕ್ಕೆ ಅವರು ಈ ಕೋಶವನ್ನು ಸಿದ್ಧಪಡಿಸಿದ್ದಾರೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಅದು ಇದ್ದರೂ ಇರಬಹುದು.

ಆದರೆ ಬೇರೆಯವರಿಗೆ ತಿಳುವಳಿಕೆ ಇಲ್ಲ ಎನ್ನುವ ನೆಲೆಯಿಂದ ಹೊರಡುವ ಇಂತಹ ಕೃತಿಗಳು – ಅದರಲ್ಲಿಯೂ ಈ ರೀತಿಯ ಕೋಶಗಳು – ಆ ಗುರಿಯನ್ನು ಸಮರ್ಪಕವಾಗಿ ಮುಟ್ಟಿದರೆ ಅದರ ಉಪಯೋಗ ಇನ್ನು ಮುಂದಾದರೂ ಸಮಾಜಕ್ಕೆ ತಲುಪಬಹುದು. ಹಾಗೆಯೇ ಸಾಮಾನ್ಯವಾಗಿ ಇಂತಹ ಕೋಶಗಳು ಪ್ರಕಟವಾದಾಗ ಅವುಗಳ ಬಗೆಗೆ ಚರ್ಚೆ ಆಗುವುದೇ ಅಪರೂಪವಾಗುತ್ತದೆ. ಇದರಿಂದಾಗಿ ಚರ್ಚೆಯಾಗದೇ ಈ ರೀತಿಯ ಗ್ರಂಥಗಳು ಅಧಿಕೃತ ಪರಮಾರ್ಶನ ಗ್ರಂಥಗಳೂ ಆಗುತ್ತವೆ. ಹಾಗಾದಾಗ ನಿಜವಾಗಿಯೂ ಆ ಕೃತಿಯನ್ನು ಬರೆದ ಉದ್ದೇಶ – ಅಂದರೆ ತಿಳುವಳಿಕೆ ಉಂಟಾಗಬೇಕೆನ್ನುವುದು – ಮೂಲೆಗೆ ಸರಿದು ಬಿಡುತ್ತದೆ. ಈ ಎರಡು ಉದ್ದೇಶಗಳು ಅಂದರೆ, ಹಳಗನ್ನಡ ಪಾಠವನ್ನು ಮಾಡುವವರಿಗೆ ಮತ್ತು ಸಾಮಾನ್ಯ ಜನರಿಗೆ ತಿಳಿವಳಿಕೆ ನೀಡುವ ಉದ್ದೇಶ ಈಡೇರಿದೆಯೇ ಇಲ್ಲವೇ ಎನ್ನುವುದನ್ನು ವಿವರವಾಗಿ ಚರ್ಚಿಸುವ ಉದ್ದೇಶದಿಂದ ಈ ಲೇಖನವನ್ನು ಬರೆಯಲಾಗಿದೆ. ಈ ಪುಸ್ತಕದ ಮೊದಲನೆಯ ಪರಿಕಲ್ಪನೆ ಹೀಗಿದೆ;

ಅಂಕವಣಿ

"ನಕುಳನುಂ ಅಂಕವಣಿಯಂ ಬಾಳುಂ ಬಾರು ಚಮ್ಮಟಿಕೆಯುಮನೊರ್ವ ಕೀಳಾಳಿಂ ಪಿಡಿಯಿಸಿಕೊಂಡು ಬಂದು ವಿರಾಟನಂ ಕಂಡೆಂತಪ್ಪ ದುಷ್ಪಾಶ್ವಂಗಳುಮನೇರಲುಂ ತಿರ್ದಲುಂ ಬಲ್ಲೆನು ಎಂದು ಪೇಳ್ದಾಳಾಗಿ..... (ಪಂ.ಭಾ. 8–54 ವಚನ)

ನಕುಲನು ಕುದುರೆಯ ಮೇಲಿನ ತಡಿಯನ್ನು (ಅಂಕವಣಿ) ಕತ್ತಿಯನ್ನು (ಬಾಳು) ಚರ್ಮದ ಲಗಾಮನ್ನು ಚಾವಟಿಯನ್ನು ಒಬ್ಬ ಸೇವಕನಿಂದ ತರಿಸಿ ಎಂಥ ದುಷ್ಟ ಕುದುರೆಯ ಏರಿ ಅದನ್ನು ಸರಿದಾರಿಗೆ ತರಬಲ್ಲೆನು ಎಂದು ಹೇಳುತ್ತಾನೆ.

ಅಂಕವಣಿ ಎಂದರೆ ಕುದುರೆಯ ಮೇಲಣ ತಡಿ

ಕುದುರೆಯ ಮೇಲೆ ಹಾಗೆಯೇ ಕುಳಿತುಕೊಳ್ಳಲು ಬರುವುದಿಲ್ಲ. ಯಾಕೆಂದರೆ ಕುದುರೆಯ ಮೇಲೇರಲು ಎರಡು ಅವಶ್ಯಕ ಸಂಗತಿಗಳಿವೆ; ಒಂದು ಅದರ ಮೂಗುದಾರ. ಇದರಿಂದ ನಿಯಂತ್ರಣ ಸಾಧ್ಯ. ಎರಡನೆಯದು ತಡಿ. ಇದು ಕುದುರೆಯ ಸವಾರನಿಗೆ ಕುಳಿತುಕೊಳ್ಳಲು ಸರಿಯಾದ ಅವಕಾಶ ಮತ್ತು ಕುದುರೆಯು ಹರಿದಾಗಲೂ ನಿಯಂತ್ರಣ ಸಾಧಿಸಲು ಒಂದು ಹಿಡಿತವನ್ನು ಕೊಡುತ್ತದೆ. ಲಗಾಮು ಮತ್ತು ಚಾವಟಿ ಕುದುರೆಯ ನಿಯಂತ್ರಣಕ್ಕೆ ಆವಶ್ಯಕವಾಗಿದೆ." (ಅದೇ, ಪು.1)

ಹಾಗೆಯೇ ಅಗುರು ಲಘುತ್ವ ಎನ್ನುವ ಪರಿಭಾಷೆಯನ್ನು ಒಂದು ಕಡೆ ಹೀಗೆ ವಿವರಿಸಲಾಗಿದೆ;

ಅಗುರು ಲಘುತ್ವ ಗುಣ

"ಯಾವ ಶಕ್ತಿಯ ಕಾರಣದಿಂದ ದ್ರವ್ಯದ ದ್ರವ್ಯತ್ವ ಯಾವತ್ತೂ ಉಳಿಯುತ್ತದೆ ಎಂದರೆ 1) ದ್ರವ್ಯವು ಇನ್ನೊಂದು ದ್ರವ್ಯರೂಪವಾಗುವುದಿಲ್ಲ. 2) ಒಂದು ಗುಣವು ಇನ್ನೊಂದು ಗುಣ ರೂಪವಾಗುವುದಿಲ್ಲ 3) ದ್ರವ್ಯದಲ್ಲಿರುವ ರೂಪ ಅನಂತ ಗುಣಗಳು ಚದುರಿ ಭಿನ್ನವಾಗುವುದಿಲ್ಲ. ಆ ಶಕ್ತಿಯನ್ನು ಅಗರು ಲಘುತ್ವ ಗುಣವೆಂದು ಹೇಳುತ್ತಾರೆ. ಅ=ಇಲ್ಲ, ಗುರು=ದೊಡ್ಡದು (ಹಿರಿದು) ಲಘು=ಚಿಕ್ಕದು(ಕಿರಿದು) ಎಂದರೆ ಪ್ರತಿಯೊಂದು ದ್ರವ್ಯವು ತನ್ನಲ್ಲಿ ಪರಿಪೂರ್ಣವಿದೆ. ಎಂದರೆ ದ್ರವ್ಯವು ಎಷ್ಟಿದೆ ಅಷ್ಟೇ ಮತ್ತು ಹಾಗೆಯೇ ಯಾವತ್ತೂ ಉಳಿಯುತ್ತದೆ. ಇನ್ನೊಂದು ದ್ರವ್ಯದಲ್ಲಿ ಕೂಡಿಕೊಂಡು ದೊಡ್ಡದು ಅಥವಾ ಗುಣಗಳು ಚದುರಿ ಹೋಗಿ ಚಿಕ್ಕದೂ ಆಗುವುದಿಲ್ಲ. ಅಗುರು ಲಘುತ್ವ ಗುಣವನ್ನು ಮನ್ನಿಸದೆ ಹೋದರೆ ದ್ರವ್ಯ–ಗುಣ–ಪರ್ಯಾಯಗಳು ನಾಶವಾಗುವ ಪ್ರಸಂಗವು ಬಂದು ಬಿಡುವುದು." (ಅದೇ ಪು. 12)

ಇವುಗಳನ್ನು ಮಾದರಿಯಾಗಿ ಅಷ್ಟೇ ನಾನು ಆಯ್ಕೆ ಮಾಡುತ್ತಿದ್ದೇನೆ. ಏಕೆಂದರೆ ಕೃತಿಯ ಉದ್ದಕ್ಕೂ ಇರುವ ಈ ರೀತಿಯ ವಿವರಗಳನ್ನು ಯಥಾರೀತಿ ನೀಡುವುದಕ್ಕೆ ಹೊರಟರೆ ಅದು ಇನ್ನೊಂದು ಗ್ರಂಥವಾದೀತು! ಆದರೆ ಮೇಲೆ ಉಲ್ಲೇಖಿಸಿರುವ ನಮೂದುಗಳ ಕುರಿತು ವಿವರವಾಗಿ ಚರ್ಚಿಸಬೇಕಾಗಿದೆ.

'ಅಂಕವಣಿ' ಎನ್ನುವ ಪರಿಭಾಷೆಯನ್ನು ಕುರಿತು ಇಲ್ಲಿ ನೀಡಿರುವ ವಿವರದ ಪರಿಶೀಲನೆಯನ್ನು ನಾವು ಆಮೇಲೆ ಮಾಡೋಣ. ಆದರೆ ಸಾಮಾನ್ಯವಾಗಿ ಕೋಶಗಳು ಪರಾಮರ್ಶನಕ್ಕೆ ಒಳಗಾಗಬೇಕಾದರೆ, ಅವುಗಳಲ್ಲಿ ಮೇಲುನೋಟಕ್ಕೆ ಕೆಲವು ಮುಖ್ಯ ಲಕ್ಷಣಗಳು ಬೇಕಾಗುತ್ತವೆ. ಮೊದಲನೆಯದಾಗಿ ಅದರಲ್ಲಿ ಏಕರೂಪತೆ ಎನ್ನುವುದು

ಇರಬೇಕಾಗುತ್ತದೆ. ಇದು ಪ್ರತಿಯೊಂದು ನಮೂದುಗಳನ್ನು ವಿವರಿಸುವ ಕ್ರಮದಿಂದ ಹಿಡಿದು ಪುಸ್ತಕದ ಕೊನೆಯವರೆಗೂ ಇರಬೇಕಾಗುತ್ತದೆ. ಉದಾಹರಣೆಗೆ ಹಿಂದೆ ಹೇಳಿದ 'ಅಂಕವಣಿ' ಎನ್ನುವ ಪದವನ್ನೇ ತೆಗೆದುಕೊಳ್ಳೋಣ. ಅದರಲ್ಲಿ 'ಅಂಕವಣಿ' ಎನ್ನುವುದನ್ನು ಅಕಾರಾದಿಯಾಗಿ (ಅನುಕ್ರಮಣಿಕೆಯಲ್ಲಿ) ನೀಡಲಾಗಿದೆ. ಈ ಪದ ಎಲ್ಲಿ ಬಳಕೆಯಾಗಿದೆ ಎನ್ನುವ ಉಲ್ಲೇಖವನ್ನು, ಅಂದರೆ ಪಂಪಭಾರತದ 8ನೇ ಆಶ್ವಾಸದ 54ನೆಯ ವಚನದ ಆಯ್ದ ಭಾಗವನ್ನು ನೀಡಲಾಗಿದೆ. ಅನಂತರ ಅದರ ಹೊಸಗನ್ನಡದ ಅನುವಾದವನ್ನು ನೀಡಲಾಗಿದೆ. ಬಳಿಕ ಅದರ ಅರ್ಥವನ್ನು ಅಡಕವಾಗಿ ಹೇಳಲಾಗಿದೆ. ಮುಂದೆ ಅದನ್ನು ವಿವರಿಸಲಾಗಿದೆ; ಕೋಶವನ್ನು ಸಿದ್ಧಪಡಿಸುವವರು ಈ ಯಾವುದೇ ಕ್ರಮವನ್ನು ಅಳವಡಿಸಬಹುದು. ಅಲ್ಲಿ ಅವರಿಗೆ ಆಯ್ಕೆಯ ಸ್ವತಂತ್ರವಿದೆ. ಹಾಗೆಯೇ ಇಲ್ಲಿ 1. ನಮೂದು (ಪರಿಭಾಷೆಯನ್ನು 1. ಎನ್ನುವ ಸಂಖ್ಯೆಯಿಂದ ನಿರ್ದೇಶಿಸಿರುವುದು) ಅದರ ಸಂದರ್ಭ, ಅರ್ಥ, ವಿವರಣೆ ಎನ್ನುವುದಾಗಿ ನಾಲ್ಕು ಹಂತಗಳಲ್ಲಿ ಅಂಕವಣಿ ಎನ್ನುವ ಪದವನ್ನು ವಿವರಿಸಲಾಗಿದೆ. ಇದು ಸರಿಯಾಗಿಯೇ ಇದೆ.

ಆದರೆ 'ಅಗುರು ಲಘುತ್ವ ಗುಣ'ಕ್ಕೆ ಸಂಬಂಧಿಸಿದಂತೆ ಆ 'ಗುಣವೇ' ಹೊರಟುಹೋಗಿದೆ. ಅದರ ಸಂದರ್ಭವೇ ಅಂದರೆ ಹಳೆಗನ್ನಡದ ಯಾವ ಪಠ್ಯಗಳಲ್ಲಿ ಅದು ಬಂದಿದೆ ಎನ್ನುವುದೇ ಇಲ್ಲ. ಹೀಗೆ ಅದರ ಸಂದರ್ಭವೇ ಇಲ್ಲದಿರುವಾಗ ಪರಿಭಾಷೆಯ ಅರ್ಥವನ್ನು ಹೇಗೆ ನೀಡುವುದು? ಏಕೆಂದರೆ ಲೇಖಕರೇ ಮುಂದೆ ಇನ್ನೊಂದು ಕಡೆ

ಪರಿಕಲ್ಪನೆಗೆ ಕಲ್ಪನೆಯನ್ನು ವ್ಯವಸ್ಥಿತವಾಗಿ ಕಟ್ಟು, ಸರಿಯಾಗಿ ಜೋಡಿಸು ಎಂಬ ಅರ್ಥಗಳಿವೆ. ಹಾಗೆಯೇ ಪರಿಭಾಷೆಯ ಎಂದರೆ ಆಯಾ ಕಾಲದ ಸಾಹಿತ್ಯ, ಧರ್ಮ, ಸಮಾಜವು ತನಗೆ ಬೇಕಾದ ಪದಗಳನ್ನು ವಿಶಿಷ್ಟವಾಗಿ ಬಳಸುವುದು. ಈ ಕೃತಿಯು ಅದನ್ನು ಹೇಳುತ್ತದೆ ಎಂದು ಹೇಳುತ್ತಾರೆ.

ಪರಿಕಲ್ಪನೆಯು ಅಥವಾ ಪರಿಭಾಷೆಯು ಯಾವ ಸಂದರ್ಭದಲ್ಲಿ ಬಳಕೆಯಾಗಿದೆ ಎಂದು ಹೇಳದೇ, ಅದನ್ನು ವಿವರಿಸುವುದಾದರೂ ಹೇಗೆ? ವ್ಯವಸ್ಥಿತವಾಗಿ ಕಟ್ಟು, ಸರಿಯಾಗಿ ಜೋಡಿಸು ಎಂಬ ಅರ್ಥಗಳನ್ನು ಪರಿಕಲ್ಪನೆಯ ಕುರಿತು ಹೇಳಲಾಗಿದೆಯಷ್ಟೇ? ಹಾಗಾದರೆ ಪ್ರಾಯೋಗಿಕವಾಗಿಯೂ ಅದು ಇರಲೇಬೇಕಲ್ಲವೇ?

ಓದುಗರಿಗೆ ಈಗ ನಾನು ಏನು ಹೇಳುತ್ತಿದ್ದೇನೆ ಎನ್ನುವುದು ಮನವರಿಕೆಯಾಗುತ್ತಿದೆ ಎಂದೆನಿಸುತ್ತದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಇಂತಹ ಕೋಶಗಳಲ್ಲಿ ಅಗತ್ಯವಾಗಿ ಇರಲೇಬೇಕಾದ ಏಕರೂಪತೆಯು ಆರಂಭದಿಂದಲೇ ಕೈತಪ್ಪಿ ಹೋಗಿದೆ. ಹಾಗಿರುವಾಗ ಈ ಉದಾಹರಣೆಗಳನ್ನು ಯಥಾವತ್ತಾಗಿ ವಿಸ್ತರಿಸುವುದಕ್ಕೆ ಸಾಧ್ಯವೇ ಇಲ್ಲ. ಆದರೆ ಹೀಗೆ ಏಕರೂಪದ ವಿವರಣೆಗಳಿಂದ ವಂಚಿತವಾಗಿರುವ ಮುಖ್ಯ ನಮೂದುಗಳನ್ನು ಮಾತ್ರವೇ ಇಲ್ಲಿ ಎತ್ತಿ ತೋರಿಸುತ್ತೇನೆ. ಅವುಗಳೆಂದರೆ ಅನಾತ್ಮ (ಪು.35) ಅನಿಚ್ಚ (ಪು.36) ಅನುಭೂತಿ (ಪು.40) ಅನುಲೋಮ ಪ್ರತಿಲೋಮ(ಪು.41) ಅನೇಕಾಂತವಾದ (ಪು.41–43) ಅಭಯ (ಪು.53) ಅಭಾವ(ಪು.54) ಅಭ್ಯಂತರ ತಪಸ್ಸು (ಪು.62) ಅಮೂರ್ತ (ಪು.65) ಅಶುದ್ಧರು (ಪು.79) ಅಶ್ವಮೇಧ (ಪು.80) ಅಶ್ವಿನಿ ದೇವತೆಗಳು (ಪು.81) ಅಷ್ಟಾದಶವರ್ಣನೆ (ಪು.83) ಅಹಿಂಸೆ (ಪು.88) ಆತಪತ್ರ (ಪು.93) ಆಭಾಸ (ಪು.97) ಆರ್ಯ (ಪು.103) ಋಣ (ಪು.130) ಕರ್ಣಾಟ (ಪು.163) ಕಾಲ (ಪು.176) ಕಾಳಮುಖ (ಪು.182) ಕಿಳ್ಕೀಕಾತರು (ಪು.185) ಕುಕವಿನಿಂದೆ (ಪು.187) ಕೆರೆಗಳು (ಪು.198) ಕೈಕಸುಬುಗಾರ (ಪು.200) ಕೈಯ ಆಭರಣ

(ಪು.201) ಗಡಿಕಲ್ಲು (ಪು.210) ಗಾಂಧರ್ವ ವಿವಾಹ (ಪು.214) ಗಾವುಂಡ (ಪು.220) ಗುಂಪು ನೃತ್ಯ (ಪು.222) ಗುಪ್ತಚರ (ಪು.226) ಗ್ರಹಣ (ಪು.232) ಗ್ರಾಮದೇವತೆ (ಪು.233) ಗ್ರಾಮ್ಯ (ಪು.233) ಗೈವೇಯಕ (ಪು.234) ಚಾಂದ್ರಮಾನ (ಪು.245) ಚೈತನ್ಯ (ಪು.254) ಜಲಕೇಶಿ (ಪು.260) ಜಾತಕರ್ಮ (ಪು.263) ಜಾತಿ (ಪು.264) ಜೈನ ಕ್ರೂರ ದೇವತೆಗಳು (ಪು.272) ತಾಂತ್ರಿಕ ದರ್ಶನ (ಪು.281) ತಾಂತ್ರಿಕ ಸಂಪ್ರದಾಯ (ಪು.282) ತಾರಾಭಗವತಿ (ಪು.283) ತಿಲಕಗಳು (ಪು.283) ತೆರಿಗೆ (ಪು.286) ತೇದಿ (ಪು.290) ದಾಂಪತ್ಯ (ಪು.311) ದಾನಶಾಸನ (ಪು.312) ದಾರಿಕಳ್ಳರು (ಪು.313) ದೇವಗತಿ (ಪು.323) ದೇವತೆಗಳು (ಪು.325) ದೇವದಾಸಿಯರು (ಪು.327) ದೇವರು (ಪು.332) ದೇಶಿ (ಪು.334) ಧರ್ಮ ಪ್ರಭುತ್ವ (ಪು.353) ಧಾರ್ಮಿಕ ನಂಬಿಕೆ (ಪು.355) ನಾಗರು (ಪು.364) ನಾರಾಯಣ (ಪು.378) ನೀತಿ ಮತ್ತು ಧರ್ಮ (ಪು.386) ನೀರಾವರಿ (ಪು.387) ನೃತ್ಯ (ಪು.388) ನೇಕಾರರು (ಪು.389) ನೈಗಮ (ಪು.389) ಪಣಿಗಳು (ಪು.411) ಪಶು (ಪು.419) ಪಾವಿತ್ರ್ಯ (ಪು.431) ಪಿಶಾಚಿಗಳು (ಪು.433) ಪುದ್ಗಲ (ಪು.434) ಪುರಂಧ್ರಿಯರು (ಪು.435) ಪುರೋಹಿತ (ಪು.436) ಪೃಥ್ವಿ (ಪು.441) ಪ್ರಸವ ಧರ್ಮಿಣಿ (ಪು.451) ಪ್ರಾಚೀನ (ಪು.452) ಪ್ರಾಚೀನ ರಾಜಕೀಯ ವ್ಯವಸ್ಥೆ (ಪು.453) ಪ್ರಾಯಶ್ಚಿತ (ಪು.453) ಬಂಧ ಮೋಕ್ಷ (ಪು.458) ಬಡಿಗರು (ಪು.460) ಬಾಂಧವ್ಯ (ಪು.468) ಬಾಲ್ಯವಿವಾಹ (ಪು.471) ಬಾಹ್ಯತಪ (ಪು.473) ಬುಡಕಟ್ಟು (ಪು.474) ಬುದ್ಧಿತತ್ವ (ಪು.475) ಬೇಟೆಯಲ್ಲಿ ಮಡಿದ ವೀರರ ಸ್ಮಾರಕಗಳು (ಪು.486) ಬೌದ್ಧ (ಪು.487) ಬ್ರಹ್ಮ ಮೀಮಾಂಸೆ (ಪು.489) ಭಕ್ತಿ ಮತ್ತು ತಂತ್ರವಾದ (ಪು.490) ಭಕ್ತಿ ಮಾಧ್ಯಮವಾಗಿ ಸಂಗೀತ ನೃತ್ಯ (ಪು.493) ಭಾಗವತ ಮತದ ಹುಟ್ಟು (ಪು.497) ಮನಃಪರ್ಯಾಯ ಜ್ಞಾನ (ಪು.508) ಮಹತ್ (ಪು.510) ಮಾತೃವಾತ್ಸಲ್ಯ (ಪು.518) ಮಾಧ್ಯಮಿಕರು (ಪು.521) ಮಾಸಕ (ಪು.527) ಮೀಮಾಂಸೆ (ಪು.529) ಮುಸಿ (ಪು.574) ಯಂತ್ರದ ಕಲ್ಲುಗಳು (ಪು.545) ಯೋಗ (ಪು.554) ರಸವಿದ್ಯೆ (ಪು.560) ರಸ ಸಿದ್ಧ (ಪು.563) ರಾಣಿಯರ ವೇಷಭೂಷಣಗಳು (ಪು.575) ರುದ್ರ (ಪು.577) ರುದ್ರ–ಶಿವ–ಅಭವ (ಪು.578) ವಡ್ಡಾರಾಧನೆಯ ಕಥನ ಕ್ರಮ (ಪು.586) ವರ್ಣಕ–ಹಾಡುಗಬ್ಬ (ಪು.587) ವರ್ಣ ಧರ್ಮಗಳು (ಪು.589) ವಶೀಕರಣ, ವಸಂತತಿಲಕ (ಪು.590–91) ವಾನಪ್ರಸ್ಥ (ಪು.596) ವಿಜಾತಿ (ಪು.599) ವಿದ್ಯಾಭ್ಯಾಸ (ಪು.597) ವಿಧಾತ್ರ (ಪು.604) ವಿವಾಹದ ರೀತಿ (ಪು.606) ವಿವಾಹ ನಿಷೇಧಗಳು (ಪು.608) ವೀರಗಲ್ಲು (ಪು.609) ವೀರಮರಣ (ಪು.313) ವೀರಶೈವ ಧರ್ಮ (ಪು.613) ವೇಷಭೂಷಣ (ಪು.614) ಶಾಸನಗಳ ಪ್ರಾರ್ಥನಾ ಶ್ಲೋಕಗಳು (ಪು.623) ಶಾಸನಗಳಲ್ಲಿ ಕೆರೆಯ ಉಲ್ಲೇಖ (ಪು.624) ಶಾಸನಗಳು ಮತ್ತು ಸ್ತ್ರೀಯರು (ಪು.625) ಶಾಸನಎಂದರೇನು? (ಪು.626) ಶಿವಾಗಮ ಮತ್ತು ಜೈನಧರ್ಮದ ಆಂತರಿಕ ಸಂಬಂಧ (ಪು.627) ಶೂದ್ರ (ಪು.629) ಶೂದ್ರರ ಮದುವೆ ಆಚರಣೆಗಳು ಮತ್ತು ಮಿಶ್ರ ಜಾತಿಗಳ ರಚನೆಗಳು (ಪು.633) ಶೈವ ದರ್ಶನ ಮತ್ತು ಜೈನ ದರ್ಶನ (ಪು.635) ಶೈವ ಮತ್ತು ಶಾಕ್ತ ಮತ (ಪು.635) ಶೌಚಾಚಾರ (ಪು.637) ಶ್ರಾವಕ (ಪು.637) ಶ್ರುತಜ್ಞಾನ (ಪು.638) ಶ್ವೇತಾಂಬರ ದಿಗಂಬರ (ಪು.640) ಸತ್ ಅಸತ್ (ಪು.650) ಸನ್ಯಾಸಿ (ಪು.564) ಸಮಬಂಧ (ಪು.659) ಸವತಿ (ಪು.667) ಸಹಗಮನ (ಪು.667) ಸಾಂಖ್ಯ (ಪು.671) ಸೀಮಾ ಸಂಬಂಧದ ಕಲಹ (ಪು.674) ಸೇವಾನಾಯಕ (ಪು.683) ಸ್ತ್ರೀ ಮತ್ತು ರಾಜಕಾರಣ (ಪು.689) ಸ್ತ್ರೀಯರು,

ಸ್ತ್ರೀಯರು ಮತ್ತು ಧರ್ಮ(ಪು.690–91) ಸ್ವಮತ ಶ್ರೇಷ್ಠತೆ(ಪು.693) ಸ್ವಯಂವರ(ಪು.694) 10ನೇ ಶತಮಾನದ ರಾಜಕಾರಣ(ಪು.696) ಹನ್ನೆರಡು ಸಾಧನಗಳು(ಪು.967) ಹಾರೀತ (ಪು.699) ಹಿಂಸೆ(ಪು.700) ಹೀನಾಯಾನ ಮತ್ತು ಮಹಾಯಾನ (ಪು.701) ಹೆಂಡದ ಪೂಜೆ (ಪು.703) ಹೆಣ್ಣಿನ ವೇಷಭೂಷಣ (ಪು.705)ಹೈಹಯರು (ಪು.707) ಹೊರಾಂಗಣ ಕ್ರೀಡೆ (ಪು.708)

ಈ ದೀರ್ಘವೂ ನೀರಸವೂ ಆದ ಪಟ್ಟಿಯನ್ನು ನಾನು ಕೊಡುವುದಕ್ಕೆ ಕಾರಣವಿದೆ. ಆ ಕಾರಣಗಳನ್ನು ವಿವರಿಸುವುದಕ್ಕೆ ಹೋದರೆ ಮತ್ತೆ ಅದುವೇ ಒಂದು ದೀರ್ಘವಾದ ಲೇಖನವಾಗುತ್ತದೆ. ಆದುದರಿಂದ ಮೇಲ್ನೋಟಕ್ಕೆ ಕಾಣುವ ಕೆಲವು ಲಕ್ಷಣಗಳನ್ನು ಈಗ ಗಮನಿಸೋಣ;

ಆಗಲೇ ಹೇಳಿದಂತೆ, ಈ ಕೋಶದ ಆರಂಭದಲ್ಲಿ ಕೆಲವು ಪರಿಕಲ್ಪನೆಗಳನ್ನು ವ್ಯವಸ್ಥಿತವಾಗಿ ಅಂದರೆ ಒಂದು ಏಕರೂಪತೆಯಲ್ಲಿ ವಿವರಿಸಲಾಗಿದೆ. ಅಲ್ಲಿಯೂ ಅನೇಕ ಗೊಂದಲಗಳು ಮತ್ತು ಸಮಸ್ಯೆಗಳಿವೆ; ಅದನ್ನು ಆಮೇಲೆ ನೋಡೋಣ. ಆದರೆ ಈಗ ನೀಡಿದ ಪದಗಳಿಗೆ ಈ ತರ್ಕಬದ್ಧತೆಯೂ ಇಲ್ಲ. ಪರಿಭಾಷೆಗಳು ಮೊದಲು ಎಲ್ಲಿ ಬಳಕೆಯಾಗಿವೆ? ಆನಂತರ ಕಾಲಾನುಕ್ರಮದಲ್ಲಿ ಅವುಗಳ ಅರ್ಥ ಹೇಗೆ ಬದಲಾಗಿದೆ? ಹಳಗನ್ನಡ ಭಾಷೆ ಮತ್ತು ಸಂಸ್ಕೃತಿಗಳ ಹಿನ್ನೆಲೆಯಲ್ಲಿ ಅವುಗಳ ಮಹತ್ವವೇನು? ಅಷ್ಟಾಗಿಯೂ ಹಳೆಗನ್ನಡದ ಅಧ್ಯಯನದಲ್ಲಿ ಅವುಗಳ ತಿಳುವಳಿಕೆ ನಮಗೆ ಏಕೆ ಬೇಕು ಎನ್ನುವುದೇ ಗೊತ್ತಾಗುವುದಿಲ್ಲ. ಮಾದರಿಗಾಗಿ ಒಂದು ಉಲ್ಲೇಖವನ್ನು ನೋಡೋಣ.

ಪಿಶಾಚಿಗಳು

"ಸಾವಿರಾರು ಪಿಶಾಚಿಗಳನ್ನು 'ಕೃತ್ಯಾ' ಎಂದು ಕರೆದಿದ್ದಾರೆ. ವಿಕ್ರಮಾರ್ಜುನ ವಿಜಯ; ಸಾಹಸಭೀಮವಿಜಯಗಳಲ್ಲಿ ಬರುವ ಮರುಳುಗಳನ್ನು ನೆನಪಿಸಿಕೊಳ್ಳಬಹುದು."(ಪು.433)

ಪರಿಕಲ್ಪನೆಗೆ ಕಲ್ಪನೆಯನ್ನು ವ್ಯವಸ್ಥಿತವಾಗಿ ಕಟ್ಟು, ಸರಿಯಾಗಿ ಜೋಡಿಸು ಎಂಬ ಅರ್ಥಗಳಿವೆ, ಎಂದು ಹೇಳುವವರು ಪಿಶಾಚಿಯನ್ನುವ ಪದಕ್ಕೆ ನೀಡಿರುವ ಅರ್ಥದ ಮೂಲಕ ನಾವು ಗ್ರಹಿಸುವುದಾದರೂ, ಏನನ್ನು? ಪಿಶಾಚಿ ಎನ್ನುವ ಪರಿಕಲ್ಪನೆ ಬರುವಾಗ ನಾವೇಕೆ ವಿಕ್ರಮಾರ್ಜುನವಿಜಯ, ಸಾಹಸಭೀಮವಿಜಯಗಳನ್ನ ನೆನಪಿಸಿಕೊಳ್ಳಬೇಕು? ಅಷ್ಟಾಗಿಯೂ ಪಿಶಾಚಿಗಳು, ಮರುಳಗಳು ಒಂದೇ ಎಂದು ತಿಳಿಯುವುದು ಹೇಗೆ? ಇದನ್ನು ಕೋಶಕಾರರು ನಮಗೆ ಹೇಳಬೇಕು. ಏಕೆಂದರೆ ಸಾಮಾನ್ಯ ಜನರಿಗೆ ತಿಳುವಳಿಕೆ ನೀಡುವುದಕ್ಕೋ ಅಥವಾ ಇನ್ನು ಯಾವುದೇ ಕಾರಣಕ್ಕೊ ಈ ಪುಸ್ತಕವನ್ನು ಬರೆದವರು ಮರುಳುಗಳು ಅಥವಾ ಪಿಶಾಚಿಗಳ ಬಗೆಗೆ ವಿವರ ನೀಡಬೇಕು. ಅದನ್ನು ಬಿಟ್ಟು ಏನೂ ಸಂಬಂಧ ಇಲ್ಲದ ಓದುಗರಿಗೆ ವಿಕ್ರಮಾರ್ಜುನವಿಜಯವನ್ನು ನೆನಪಿಸಿಕೊಳ್ಳಿ, ಸಾಹಸಭೀಮವಿಜಯವನ್ನು ನೆನಪಿಸಿಕೊಳ್ಳಿ ಎಂದರೆ ಆ ಪರಿಕಲ್ಪನೆಗಳನ್ನು ಕುರಿತು ಏನು ಹೇಳಿದಂತಾಯಿತು? ಒಂದು ವೇಳೆ ಇದೇ ಮಾದರಿ ಎಲ್ಲದಕ್ಕೂ ಅನ್ವಯಿಸುತ್ತದೆ ಎಂದಾದರೆ, ಪರಿಕಲ್ಪನೆಗಳ ಒಂದು ಅಕಾರಾದಿಯನ್ನು ನೀಡಿ ಅವುಗಳ ಮುಂದೆ ಒಂದಷ್ಟು ಪುಸ್ತಕಗಳನ್ನು ಹೆಸರಿಸಿದರೂ ಆಗುತ್ತಿರಲಿಲ್ಲವೇ? ಈ ಪುಸ್ತಕ ಸುಮಾರು 700 ಪುಟಗಳವರೆಗೆ ವಿಸ್ತಾರವಾದಬೇಕಾದ ಅಗತ್ಯವಾದರೂ ಏನು?

ಈ ಸಮಸ್ಯೆ ಅಲ್ಲಿಗೆ ನಿಲ್ಲುವುದಿಲ್ಲ. ಆಗಲೇ ಹೇಳಿದಂತೆ ಸಂದರ್ಭಗಳನ್ನು ನೀಡಿರುವ ಮತ್ತು ನೀಡದಿರುವ ಪರಿಕಲ್ಪನೆಗಳಲ್ಲಿ ಮತ್ತು ವಿವರಣೆಯಲ್ಲಿ ವ್ಯತ್ಯಾಸವಾಗಿದೆ. ಮೊದಲಿಗೆ

ಒಂದೆರಡು ಅಕ್ಷರಗಳುಳ್ಳ ಪದಗಳಿಗೆ(ಉದಾಹರಣೆ ಅಮೂರ್ತ, ಆಭಾಸ ಇತ್ಯಾದಿ) ಸೀಮಿತವಾದ ಪರಿಕಲ್ಪನೆಗಳು ಆಮೇಲೆ ಅಶ್ವಿನಿ ದೇವತೆಗಳು, ಅಷ್ಟಾದಶ ವರ್ಣನೆಗಳು ಎಂದು ಅನೇಕ ಪದಗಳನ್ನು ಒಳಗೊಂಡು ಆಮೇಲೆ ವಾಕ್ಯಗಳಾಗಿ ಪರಿವರ್ತನೆಗಳಾಗುತ್ತವೆ. ಉದಾಹರಣೆಗೆ ಹೇಳುವುದಾದರೆ ಜೈನ ಕ್ರೂರ ದೇವತೆಗಳು, ತಾಂತ್ರಿಕ ಸಂಪ್ರದಾಯ, ಪ್ರಾಚೀನ ರಾಜಕೀಯ ವ್ಯವಸ್ಥೆ, ಭಕ್ತಿ ಮಾಧ್ಯಮವಾಗಿ ಸಂಗೀತ ನೃತ್ಯ, ವಡ್ಡಾರಾಧನೆಯ ಕಥನಕ್ರಮ, 10ನೇ ಶತಮಾನದ ರಾಜಕಾರಣ ಇತ್ಯಾದಿ. ವಾಕ್ಯಗಳು ಪರಿಕಲ್ಪನೆಗಳಾಗುವುದು ಹೇಗೆ? ಅಷ್ಟಾಗಿಯೂ 'ಹತ್ತನೆಯ ಶತಮಾನದ ಕಥನಕ್ರಮ' ಎನ್ನುವ ಪರಿಕಲ್ಪನೆ ಹಳೆಗನ್ನಡ ಕಾವ್ಯದಲ್ಲಿ ಬರುವುದಾದರು ಹೇಗೆ? ಸಾಮಾನ್ಯವಾಗಿ ಕೋಶಗಳು ಅಥವಾ ನಿಘಂಟುಗಳಲ್ಲಿ ಪದಗಳ ಮೂಲ ರೂಪಗಳನ್ನು ಮಾತ್ರವೇ ನಮೂದುಗಳಾಗಿ ಮಾಡಲಾಗುತ್ತದೆ. ಉದಾಹರಣೆ ಪಿಶಾಚಿಗಳು ಎಂದಲ್ಲ ಕೋಶಗಳಲ್ಲಿ ಅದು 'ಪಿಶಾಚಿ' ಎಂದು ನಮೂದಾಗುವುದೇ ಸರಿ. ಏಕೆಂದರೆ ಕೋಶದಲ್ಲಿ ಬರುವ ಪ್ರತಿಯೊಂದು ಅಕ್ಷರಕ್ಕೂ ಅಕಾರಾದಿ ಅನ್ವಯವಾಗುತ್ತದೆ. ಹಾಗಿರುವಾಗ 'ಹತ್ತನೆಯ ಶತಮಾನದ ಕಥನಕ್ರಮ' ಎನ್ನುವುದಕ್ಕೆ ಪೂರ್ವದಲ್ಲಿ 'ಹ' ಕಾರ 'ತ' ಕಾರ 'ನ' ಕಾರ 'ಯ' ಕಾರ 'ಶ' ಕಾರ 'ತ' ಕಾರದಿಂದಾಗಿ ಇರುವ ಇನ್ನೊಂದು ಪದವು ಇರಲೇಬೇಕಾಗುತ್ತದೆ. ಹಾಗಾದರೆ ಅದನ್ನು ಕೈಬಿಟ್ಟಿದ್ದೇಕೆ? ಸರಳವಾಗಿ ಹೇಳುವುದಾದರೆ, ವಾಕ್ಯ ರೂಪಗಳನ್ನು ಕೊಡುತ್ತ ಹೋದಷ್ಟು ಅನುಕ್ರಮಣಿಕೆಯಲ್ಲಿ ದೋಷ ಉಂಟಾಗುತ್ತಲೇ ಹೋಗುತ್ತದೆ. ಹಾಗಾದುದರಿಂದ ಕೋಶಗಳನ್ನು ರಚಿಸುವಾಗ ಕನಿಷ್ಠತಮ ಘಟಕಗಳನ್ನು ಆಯ್ಕೆ ಮಾಡುವುದೇ ಸರಿಯಾದ ಕ್ರಮ. ರೇಮಂಡ್ ವಿಲಿಯಮ್ಸ್‌ನ ಕೀವರ್ಡ್ಸ್‌ನಲ್ಲಿಯೂ ಹೀಗೆಯೇ ಮಾಡಲಾಗಿದೆ. (ಕೋಶಗಾರರೆಲ್ಲರಿಗೆ ಆತ ಕುಲಗುರು ಆದ್ದರಿಂದ ಇಲ್ಲಿ ಆತನನ್ನು ಪ್ರಸ್ತಾಪಿಸಲಾಗಿದೆ.) ಅಂದರೆ ನಮೂದುಗಳನ್ನು ನೀಡಿರುವಾಗ ಏನು ಬೇಕಾದರೂ ಬರೆಯಬಹುದೆಂಬ ಕಾರಣಕ್ಕೆ ಕೆಲವು ವಿಷಯಗಳಿಗೆ (ಅವು ಹಳಗನ್ನಡದ ಪರಿಕಲ್ಪನೆಗಳಲ್ಲ) ಪುಟಗಟ್ಟಲೆ ವಿವರ ನೀಡಲಾಗಿದೆ. ಉದಾಹರಣೆ: ಬಡಿಗರು, ಬಾಲ್ಯ ವಿವಾಹ, ಹೆಣ್ಣಿನ ವೇಷಭೂಷಣ ಇವುಗಳಿಗೆ ಬರೆದವರಿಗೆ ಸಂತೋಷವಾಗುವಷ್ಟೂ ವಿವರಗಳನ್ನು ನೀಡಲಾಗಿದೆ. ಅಷ್ಟು ಮಾತ್ರವಲ್ಲ; ಅವು ಬೇರೆ ಪುಸ್ತಕಗಳಿಂದ ಪುಟಸಂಖ್ಯೆ ಸಮೇತ ಸ್ಥೂಲವಾಗಿ ಎತ್ತಿ ತಂದ ವಿವರಗಳು! ಆದರೆ ಪರಿಕಲ್ಪನೆಗಳಿಗೆ ಉಲ್ಲೇಖಗಳನ್ನು ನೀಡುವಲ್ಲಿ ಬರವಣಿಗೆ ಕುಂಟುತ್ತಾ ಹೇಗೆ ಸಾಗುತ್ತದೆ ಎನ್ನುವುದಕ್ಕೆ ಈ ಕೆಳಗಿನ ವಿವರಗಳನ್ನು ನೋಡಿ;

ಸಾಮಂತ

ಸಾಮಂತ ಚೂಡಾಮಣಿಯರಂ ಬಂದು ಕಂಡಂ ಸುರೇಂದ್ರಂ (ಪಂಪಭಾರತ ಪು.7–95) ಸಾಮಂತರೆಂದರೆ ಹತ್ತಿರದವರು ಮತ್ತು ಪರ್ಯಾಯ ಆಡಳಿತಗಾರರು. ಆಡಳಿತದ ವಿಕೇಂದ್ರಿಕರಣದ ಸೂಚನೆಗಳಿವು, ಅಗ್ರಹಾರದ ಅರ್ಥ ಹುಡುಕಬೇಕು.

ಸಾಮಂತ ಚೂಡಾಮಣಿಯೆಂದರೆ ಸಾಮಾಂತರ ಸಾಲಿನಲ್ಲಿ ಚೂಡಾಮಣಿಯಾಗಿದ್ದವನು ಅಂದರೆ ಸಾಮಂತ ಶ್ರೇಷ್ಠವೆಂದರ್ಥ. ಚೂಡಾಮಣಿಯೆಂದರೆ ತಲೆಯ ಆಭರಣ ಚೂಡಾರತ್ನವೆಂದೂ ಕರೆಯುತ್ತಾರೆ.(ಪು.672)

ಪರಿಕಲ್ಪನೆಗಳಿಗೆ ಉಲ್ಲೇಖ ಕೊಟ್ಟರೆ ಕೋಶಕಾರರು ಹೇಗೆ ತಮಗೆ ತಾವೇ ತಗುಲಿ ಹಾಕಿಕೊಳ್ಳುತ್ತಾರೆ. ನೋಡಿ! ಮುಖ್ಯ ನಮೂದು ಇರುವುದು ಸಾಮಂತ, ಉಲ್ಲೇಖ ಕೊಟ್ಟಿರುವುದು ಸಾಮಂತ ಚೂಡಾಮಣಿಗೆ! ಅದರ ಮಧ್ಯೆ ಅಗ್ರಹಾರದ ಅರ್ಥವನ್ನು ಹುಡುಕಬೇಕಂತೆ!!

ಯಾರು ಹುಡುಕಬೇಕು, ಹುಡುಕುವುದೇಕೆ? ಅದರಿಂದ ನನಗೇನು ಲಾಭ? ಚೂಡಾಮಣಿ ಎನ್ನುವ ಪದವನ್ನು ಇನ್ನೂ ಹ್ರಸ್ವಗೊಳಿಸಿದರೆ 'ಚೂಡು' ಎಂದು ಆಗುತ್ತದೆ. ಅದಕ್ಕೆ ಸುಳ್ಯ, ಪುತ್ತೂರು ಭಾಗದ ಕನ್ನಡದಲ್ಲಿ ಬೇರೆ ಅರ್ಥವೂ ಇದೆ. ಮತ್ತೆ ಅದನ್ನೇಕೆ ಹೇಳಬಾರದು?

ಇನ್ನು ಈ ಪುಸ್ತಕದಲ್ಲಿ ಕೊಟ್ಟಿರುವ ಕೆಲವು ಪದಗಳು ಮೇಲ್ನೋಟಕ್ಕೆ ಕುತೂಹಲಕಾರಿಯಾಗಿವೆ. ಉದಾಹರಣೆಗೆ ಅಂಚೆ ಎನ್ನುವ ಪರಿಕಲ್ಪನೆಯನ್ನು ಕುರಿತು ಹೀಗೆ ಹೇಳಲಾಗಿದೆ.

ಅಂಚೆ

ಎನ್ನ ನುಡಿಯಂ ನೀಂ ಕೇಳ್ದುಮೊಂದಂಚೆಯಂ ಪೊದೆದೊಂದಂಚೆಯಂ ಪೂದೆ – ದೊಂದಂಚೆಯನುಟ್ಟು ನಿನ್ನರವಿದೇನಂಬೋಜ ಪತ್ರೇಕ್ಷಣೇ... (ಪಂಪಭಾರತ (ಪು.8–66)

ನನ್ನ ಮಾತನ್ನು ಕೇಳಿ ಒಂದು ವಸ್ತ್ರ (ಅಂಚೆ) ಹೊದುದುಕೊ. ಎಲೆ ಕಮಲದಳದಂತೆ ಕಣ್ಣುಳ್ಳವಳೇ ಏಕವಸ್ತ್ರವನ್ನು (ಅಂಚೆ–ವಸ್ತ್ರ) ಉಟ್ಟಿರುವ ನಿನ್ನ ದುರವಸ್ಥೆ ಏನಿದು? ಇಲ್ಲಿ ಅಂಚೆಯೆಂದರೆ ವಸ್ತ್ರ. ಇದು ಕೀಚಕ ದ್ರೌಪದಿಗೆ ಹೇಳುವ ಮಾತು.

ಸಂಸ್ಕೃತದ 'ಹಂಸ'ದ ತದ್ಭವ ರೂಪ ಅಂಚೆ ಇಲ್ಲಿ ವಸ್ತ್ರ ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಇದು ವಿಶೇಷ. ಅಂಚು ಎಂದರೆ ತುದಿ. ಏಕವಸ್ತ್ರವನ್ನು ಧರಿಸಿರುವುದು ದುರವಸ್ಥೆಯನ್ನು ಸೂಚಿಸುತ್ತದೆ. ಏಕವಸ್ತ್ರಧಾರಣೆಯು ದುರವಸ್ಥೆಯನ್ನು ಸೂಚಿಸುವುದು ಮಾತ್ರವಲ್ಲ, ಶ್ರೀಮಂತರು ಬಹು ವಸ್ತ್ರಗಳನ್ನು ಧರಿಸುತ್ತಿದ್ದರು ಎಂಬುದನ್ನು ಮೇಲಿನ ಮಾತುಗಳು ಹೇಳುತ್ತವೆ.

ಪಂಚೆ ಮತ್ತು ದೋತ್ರವನ್ನು ಅಂಚೆ ಎಂದು ಕರೆಯಲಾಗಿದೆ. ಇದು ಕೇಶವ ಶರ್ಮ ಅವರು ನೀಡಿರುವ ವಿವರಣೆಯಾಗಿದೆ. ಈ ವಿವರಣೆಯಲ್ಲಿ ಗೊಂದಲಗಳಿವೆ. ಅದನ್ನು ಸರಿಪಡಿಸಿ ಹೀಗೆ ಬರೆಯಬಹುದು.

ಅಂಚೆ

ಮದನಾಸ್ತ್ರಂ ಕರಸಾಣೆಗಾಣಿಸಿದುದೆಂಬಂತಾಗೆ ನಿನ್ನದೊಂದು ಕಂ
ದಿದ ಮೆಯ್ಯೆನ್ನಯ ತೋಳೊಳೊಂದೆ ಸಿರಿಯುಂ ನೀನುಯ್ದು ತೊಳ್ತಾಳ್ದುರಾ
ಗದಿನೆನ್ನೊಳ್ ಸುಕಮಿರ್ದುದೆನ್ನ ನುಡಿಯಂ ನೀಂ ಕೇಳ್ದುಮೊದಂಚೆಯಂ
ಪೊದೆಯೊಂದಂಚೆಯನುಟ್ಟು ನಿನ್ನರವಿದೇನಂಬೋಜ ಪತ್ರೇಕ್ಷಣೇ ॥

ಇದು ಪಂಪನ ವಿಕ್ರಮಾರ್ಜುನ ವಿಜಯಂ ಕಾವ್ಯದ ಅಷ್ಟಮಾಶ್ವಾಸದ 66ನೆಯ ಪದ್ಯವಾಗಿದೆ. ಇದಕ್ಕೆ ಡಿ. ಎಲ್. ನರಸಿಂಹಾಚಾರ್ಯರು ಹೀಗೆ ವ್ಯಾಖ್ಯಾನ ಬರೆದಿದ್ದಾರೆ.

ನಿನ್ನೊಂದು ಕಂದಿದ ಮೆಯ್– ನಿನ್ನ ಮಾಸಿದ ಮೈ, ಎನ್ನಯ ತೋಳೊಳ್–ನನ್ನ ತೋಳುಗಳಲ್ಲಿ, ಒಂದಿ–ಸೇರಿ, ಮದನಾಸ್ತ್ರಂ ಮನ್ಮಥನ ಬಾಣ, ಕರಸಾಣೆಗಾಣಿಸಿದುದು–ತೀಕ್ಷ್ಣವಾದ ಸಾಣೆಗೆ ಇಡಲ್ಪಟ್ಟಿತು, ಎಂಬಂತಾಗೆ–ಎನ್ನುವ ಹಾಗಾಗಲು, ನೀಂ– ನೀನು, ಸಿರಿಯಂ–ಲಕ್ಷ್ಮಿಯನ್ನು, ನನ್ನ ಐಶ್ವರ್ಯವನ್ನೆಲ್ಲ, ಉಯ್ದು–ತೆಗೆದುಕೊಂಡು ಹೋಗಿ, ತೊಳ್ತಾಳ್ದು–ತೊತ್ತುಮಾಡಿ ಆಳಿ, ರಾಗದಿಂ, ಸಂತೋಷದಿಂದ, ಎನ್ನೊಳ್–ನನ್ನಲ್ಲಿ, ಸುಕಮಿರ್ದುದು ಸುಖವಾಗಿ ಇರುವುದು. ಎನ್ನ–ಎನ್ನ ನುಡಿಯಂ–ಮಾತನ್ನು, ನೀಂ ಕೇಳ್ದುಂ–ನೀನು ಕೇಳಿಯೂ, ಒಂದಂಚೆಯಂ–ಒಂದು ವಸ್ತ್ರವನ್ನು, ಪೊದೊಯೊಂದಂಚೆಯಂ–ಹೊದೆವ ಒಂದು ವಸ್ತ್ರವನ್ನು ಉಟ್ಟು ಧರಿಸಿದ, ನಿನ್ನಿರವು ನಿನ್ನ ಸ್ಥಿತಿ, ಅಂಭೋಜ ಪತ್ರೇಕ್ಷಣೇ – ಕಮಲನಯನೇ, ಇದೇನ್?

ಅಂದರೆ ನಿನ್ನ ಮಾಸಿದ ಮೈಯ್ ನನ್ನ ತೋಳುಗಳನ್ನು ಸೇರಿದಾಗ ಮನ್ಮಥನ ಬಾಣವೇ ತೀಕ್ಷ್ಣವಾಗಿ ಸಾಣೆಗೆ ಇಡಲ್ಪಟ್ಟಿತು ಎನ್ನುವಂತಾಯಿತು. ನೀನು ನನ್ನ ಐಶ್ವರ್ಯವೆಲ್ಲದಕ್ಕೂ ರಾಣಿಯಾಗಿ ಅವುಗಳನ್ನೆಲ್ಲ ಸಂತೋಷದಿಂದ ಆಳು. ಕಮಲವದನೆಯೇ ನನ್ನ ಈ ಪ್ರೀತಿಯ ಮಾತುಗಳನ್ನು ಕೇಳಿಯೂ ಇನ್ನೂ ನೀನು ಒಂದು ವಸ್ತ್ರವನ್ನು ಧರಿಸಿ ಒಂದು ವಸ್ತ್ರವನ್ನು ಉಟ್ಟು ನಿಂತಿರುವ ನಿನ್ನ ಸ್ಥಿತಿಗೆ ನಾನು ಏನೆಂದು ಹೇಳಲಿ?

ಇದು ದ್ರೌಪದಿಯನ್ನು ಕಂಡ ಕೀಚಕನು ಹೇಳುವ ಮಾತು. ದ್ರೌಪದಿಯು ಈಗ ಸುದೇಷ್ಣೆಯ ದಾಸಿಯಾದುದರಿಂದ ಅವಳು ಒಂದು ವಸ್ತ್ರವನ್ನುಟ್ಟು ಮತ್ತೊಂದು ವಸ್ತ್ರವನ್ನು ಹೊದೆದುಕೊಂಡು ಇದ್ದಾಳೆ. ಇದು ಪ್ರಾಚೀನ ಕಾಲದಲ್ಲಿ ದಾಸಿಯರು ಇದ್ದ ಸ್ಥಿತಿ–ಗತಿಯನ್ನು ವಿವರಿಸವ ಪದ್ಯವಾಗಿದೆ. ಅಂದರೆ ಪ್ರಾಚೀನ ಕಾಲದಲ್ಲಿ ದಾಸಿಯರು ಒಂದು ವಸ್ತ್ರವನ್ನು ಹೊದೆದುಕೊಂಡೂ ಇನ್ನೊಂದನ್ನು ಉಟ್ಟುಕೊಂಡೂ ಇರುತ್ತಿದ್ದರು ಎಂದು ಇದರಿಂದ ತಿಳಿಯುತ್ತದೆ. ಇದು ಗಮನಾರ್ಹವಾಗಿದೆ.

'ಅಂಚೆ' ಎನ್ನುವ ಪದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಮೊದಲನೆಯ ಸಂಪುಟದಲ್ಲಿ (ಪು.20) ಹೀಗೆ ಅರ್ಥ ನೀಡಲಾಗಿದೆ;

ಬಟ್ಟೆ : ವಸ್ತ್ರ : "ಅಂಚೆ ಎಂದು ಕಪ್ಪಡಂ"(ಶಬ್ದ ಪು.20–393) ಒಂದಂಚೆಯಂ ಪೊದೆಯೊ(ದೊ)ಂದಂಚೆಯನುಟ್ಟು ನಿನ್ನರವಿದೇನಂಭೋಜ ಪತ್ರೇಕ್ಷಣೇ (ಪಂಪ ಭಾ. ಪು. 8–66) ಅರುಣಾಂಬುಜದಳ್ಳಲರೆಸಳ್ಗಳಂಚೆಯೊಳ್ ಸಂಚಲಿಸದೆ ಜಲ ಬಿಂದು ಬಿಂದುವೆನೆ ಸೊಗಯಿಸುಗುಂ(ಮಲ್ಲಿಪು. ಪು. 3–58); ಅರಿಸಿನದಂಚೆಯನಿನಿಸೋಸರಿಲು ಮೀಯದೆ ಯಶೋದೆಯೀತಂ ಪಿತಾಂಬರನೆಂದು ಧರೆಗೆ ಪೇಳ್ವಂತಿರೆ (ಅರ್ಧ ನೇ.ಪು. 7–56)

'ಅಂಚೆ' ಎಂದರೆ 'ಪಂಚೆ' ಎನ್ನುವ ಅರ್ಥವೂ ಇದೆ.

ಈ ಕುರಿತು ಪರಿಷತ್ತಿನ ಕನ್ನಡ ನಿಘಂಟು (ಐದನೇ ಸಂಪುಟ 5055) ರಲ್ಲಿ ಹೀಗೆ ಹೇಳಲಾಗಿದೆ;

ಪಂಚ, ಪಂಜಿ, ಪಂಚೆ (ನಾ) ಗಂಡಸರು ಉಡುವ ಹಾಗೂ ಹೊದೆಯುವ ಬಟ್ಟೆ : ಪಂಚೆಯೆಂದರುವೆ (ಕಬ್ಬಿ ಕೈ 53) ಪಂಚೆಯನೆ ವಸ್ತ್ರಮಕ್ಕುಂ (ಶಶದ. 60) ಇತ್ಯಾದಿ

ಕನ್ನಡದಲ್ಲಿ 'ಹಂಸೆ' ಎನ್ನುವುದು 'ಅಂಚೆ' ಎಂದಾಗುತ್ತದೆ. ಹಂಸೆ ಎಂದರೆ ಒಂದು ಜಾತಿಯ ಹಕ್ಕಿ ಎಂದರ್ಥವಾಗುತ್ತದೆ. ಆಧುನಿಕ ಕಾಲದಲ್ಲಿ ಇಂಗ್ಲೀಷ್‌ನ 'post' ಎನ್ನುವ ಪದಕ್ಕೂ ಅಂಚೆ ಎಂದು ಹೇಳಲಾಗುತ್ತದೆ. ಪತ್ರರವಾನೆ ಮೊದಲಾದವುಗಳಿಗೆ ಹಂಸ ಪಕ್ಷಿಗಳನ್ನು ಬಳಸುತ್ತಿದ್ದುದೇ ಇದಕ್ಕೆ ಕಾರಣವಾಗಿದೆ. ಅದರೆ 'ಹಂಸ'ವು 'ಅಂಚೆ'ಯಾಗುವುದಕ್ಕೆ ಕನ್ನಡದ ವಾಗ್ಪ್ರಾಧಿಯೇ ಕಾರಣವಾಗಿದೆ. ಕನ್ನಡದ ವಾಗ್ಪ್ರಾಧಿಗನುಸಾರವಾಗಿ 'ಹ' ಕಾರವು 'ಅ' ಕಾರವಾಗುತ್ತದೆ. ಉದಾಹರಣೆ ಹರಿಗ>ಅರಿಗ : ಹಡಪ>ಅಡಪ ಇತ್ಯಾದಿ. ಅನುಕೂಲದ ದೃಷ್ಟಿಯಿಂದ ಸಂಸ್ಕೃತದ 'ಸ' ಕಾರವು 'ಚ' ಕಾರವಾಗುತ್ತದೆ. ಉದಾಹರಣೆಗೆ ಸ್ಥಿರ>ಚಿರ ಇತ್ಯಾದಿ ಇದೆ ರೀತಿಯಾಗಿ ಹಳೆಯ 'ಪ' ಕಾರವು 'ಹ' ಕಾರವಾಗುತ್ತದೆ. ಆಗ ಪಂಚೆ>ಹಂಚೆಯಾಗುತ್ತದೆ. ಮುಂದೆ 'ಹ' ಕಾರ ಉಚ್ಚರಣೆ ಅನುಕೂಲದ ದೃಷ್ಟಿಯಿಂದ 'ಅ' ಕಾರವಾಗಿ ಅಂಚೆ ಆಗುತ್ತದೆ. ಹಾಗಾದ್ದರಿಂದ 'ಅಂಚೆ'ಯು 'ಪಂಚೆ'ಯು ಒಂದೇ ಎನ್ನಬಹುದು.

ಪಂಚೆ ಎಂದರೆ ಉಡುವ ಹಾಗೂ ತೊಡುವ ಬಟ್ಟೆ ಎಂದು ಇದರಿಂದ ತಿಳಿಯುತ್ತದೆ. ಮೇಲಿನ ಪದ್ಯದಲ್ಲಿ ಕೀಚಕನು ಒಂದು ವಸ್ತ್ರವನ್ನುಟ್ಟು ಮತ್ತೊಂದು ವಸ್ತ್ರವನ್ನು ಹೊದೆದಿರುವ

ಹಾಗೂ ತೊಟ್ಟಿರುವ ದ್ರೌಪದಿಯನ್ನು ಕುರಿತು ಮಾತನಾಡುತ್ತಾನೆ. ಏಕೆಂದರೆ ದ್ರೌಪದಿಯು ಈಗ ದಾಸಿಯಾದುದರಿಂದ ರೇಷ್ಮೆಸೀರೆ ಹಾಗೂ ಕುಪ್ಪಸವನ್ನು ತೊಡುವಂತಿಲ್ಲ. ಆದರೆ ಸಾಮಾನ್ಯ ಹೆಂಗಸರ ಹಾಗೆ ಪಂಚೆಯನ್ನುಡಬಹುದಾಗಿತ್ತು. (ಒಂದು ವಸ್ತ್ರವನ್ನು ಹೊದೆಯುವುದು ಒಂದನ್ನು ಹೊದೆಯುವುದು)

ಇದು ಹಿಂದೆ ದಾಸಿ ಜನರು ಹೇಗಿದ್ದರು, ಅವರು ಏನನ್ನು ಉಡುತ್ತಿದ್ದರು ಎನ್ನುವುದಕ್ಕೆ ಸ್ಪಷ್ಟವಾದ ನಿದರ್ಶನವಾಗಿದೆ. ಕೇರಳದ ಕಡೆಗೆ ಅಥವಾ ಭಾರತದ ಕೆಲವು ಭಾಗಗಳಲ್ಲಿ ಕೆಳವರ್ಗ, ಕೆಳಜಾತಿ ಅಥವಾ ಅಸ್ಪೃಶ್ಯರು, ಗುಡ್ಡಗಾಡು ಜನರು ಸೊಂಟದ ಮೇಲೆ ಬಟ್ಟೆ ತೊಡುತ್ತಿರಲಿಲ್ಲ ಎನ್ನುವ ಹಾಗೆ ಇಂಗ್ಲಿಷ್ ವಿದ್ಯಾಭ್ಯಾಸದ ಕಾರಣದಿಂದಾಗಿ ನಾವೆಲ್ಲರೂ ನಂಬಿದ್ದೇವೆ. ಆದರೆ ಪಂಪನ ವಿಕ್ರಮಾರ್ಜುನ ವಿಜಯಂ ಕಾವ್ಯದಲ್ಲಿ ಇದಕ್ಕಿಂತ ಭಿನ್ನವಾದ ಚಿತ್ರಣವಿದೆ.

ಸಾಮಾನ್ಯವಾಗಿ ದಾಸೀ ಜನರ ಜೀವನವು ಅತ್ಯಂತ ಕೆಳಹಂತದ ಜೀವನವೆಂದು ನಾವು ಸದ್ಯಕ್ಕಿರುವ ವಿವರಗಳಿಂದ ತಿಳಿಯಬಹುದು. ಶೂದ್ರರೇ ಮೊದಲಾದವರು ಮೇಲ್ಜಾತಿಯವರ ಸೇವೆಯನ್ನು ಮಾಡಬೇಕೆಂದು ಭಾರತೀಯ ಶಾಸ್ತ್ರಗಳಲ್ಲಿಯೂ ಹೇಳಲಾಗಿದೆ. ಅದನ್ನು ಒಪ್ಪಿಕೊಂಡಾಗ ಕೆಳಜಾತಿಯ ಶೂದ್ರರು, ಅಸ್ಪೃಶ್ಯರು ಇದೇ ರೀತಿಯಾಗಿ ಬಟ್ಟೆಗಳನ್ನು ತೊಡುತ್ತಿದ್ದರು ಎಂದು ನಾವು ತಿಳಿಯಬಹುದು. ಅಂದರೆ ಅಸ್ಪೃಶ್ಯರಾಗಲಿ, ಶೂದ್ರರಾಗಲಿ, ಸೊಂಟದ ಕೆಳಭಾಗ ಮತ್ತು ಮೇಲ್ ಭಾಗಗಳನ್ನು ಮುಚ್ಚುವ ಹಾಗೆ ಬಟ್ಟೆ ತೊಡುತ್ತಿದ್ದರು ಎಂದು ಇದರಿಂದ ಸ್ಪಷ್ಟವಾಗುತ್ತದೆ. ಅಷ್ಟೇಕೆ ಇಂದಿಗೂ ಹಳ್ಳಿಗಲ್ಲಿ ಗಂಡಸರು ಹೀಗೆಯೇ ಇರುತ್ತಾರೆ. ಹಳ್ಳಿಗಳಲ್ಲಿ ಗಂಡಸರು ಸೊಂಟದ ಮೇಲ್ಭಾಗಕ್ಕೆ ಬಟ್ಟೆ ಧರಿಸುವುದಿಲ್ಲ ಎಂದೂ ಹೇಳಬಹುದು. ಆದರೆ ಇಂದಿಗೂ ಹಳ್ಳಿಗಳಲ್ಲಿ ಪಂಪನು ಹೇಳುವಂತೆ ಬಟ್ಟೆ ಧರಿಸುವ ಹೆಣ್ಣುಮಕ್ಕಳು ಕಂಡುಬರುತ್ತಾರೆ. (ಅಷ್ಟೇಕೆ ಕುಪ್ಪಸ ಧರಿಸಿರದೆ ಕೇವಲ ಸೀರೆ ಮಾತ್ರ ಧರಿಸುವುದು ಇಂದು ಫ್ಯಾಶನ್ ಎನಿಸಿಕೊಳ್ಳುತ್ತಿದೆ.) ಅದು ಬೇರೆ ಮಾತು. ಹೀಗಿರುವಾಗ ಕೇರಳದ ಕಡೆ ಅಥವಾ ಭಾರತದ ಕೆಲವು ಕಡೆ ಹೆಣ್ಣುಮಕ್ಕಳು ಸೊಂಟದ ಮೇಲೆ ಬಟ್ಟೆಯನ್ನು ಧರಿಸುತ್ತಿರಲಿಲ್ಲ; ಅದು ಬ್ರಿಟಿಷರಿಂದ ಸಾಧ್ಯವಾಯಿತು ಎಂದು ನಮ್ಮನ್ನು ನಂಬಿಸುತ್ತಿರುವುದು ಹೇಗೆ?

ಪಂಪನ ವಿಕ್ರಮಾರ್ಜುನ ವಿಜಯಂ ಕಾವ್ಯದ ಈ ಭಾಗವನ್ನು ಓದಿದ ಮೇಲೆ (ಅಂದರೆ ಅಂತಹ ಸ್ಥಿತಿ ಭಾರತದಲ್ಲಿ ಇರಲಿಲ್ಲ ಎನ್ನುವುದು ಸ್ಪಷ್ಟವಾದ ಮೇಲೆ) ಇದಕ್ಕೆ ಸಂಬಂಧಿಸಿದಂತೆ ಮೂರು ರೀತಿಯ ಕಲ್ಪನೆಯನ್ನು ನಾವು ಮಾಡಬಹುದು: ಮೊದಲನೆಯದು ಇದು ಬ್ರಿಟಿಷರ ಬಂದಮೇಲೆ ಅವರಿಂದಾಗಿ ಜಾರಿಗೆ ಬಂದಿರಬೇಕು; ಅಥವಾ ಬ್ರಿಟಿಷರ ಕೈಕೆಳಗಿನ ಅಧಿಕಾರಿಗಳು (ಭಾರತೀಯರೂ ಸೇರಿ) ಹಾಗೂ ಅವರ ದರ್ಪವನ್ನು ಅನುಕರಿಸಿ ಆಳುವ ವರ್ಗವೂ ಸಮಾಜಿಕ ನಿಯಮಗಳನ್ನು ರೂಪಿಸಿರಬೇಕು; ಈ ಮಟ್ಟಕ್ಕೆ ಕಠಿಣಗೊಳಿಸಿರಬೇಕು : ಇಲ್ಲವೇ ಇವೆರಡೂ ಆಗಿರುವ ಮೂರನೆಯದೊಂದು ಸಾಧ್ಯತೆಯೂ ಇರಬಹುದು.

ಅದೇನೇ ಇರಲಿ ಪ್ರಾಚೀನ ಭಾರತದಲ್ಲಿ ಸಾಮಾನ್ಯ ಸ್ತ್ರೀಯರು– ಅವರು ಅಸ್ಪೃಶ್ಯರೇ ಇರಲಿ ಶೂದ್ರ ಅಥವಾ ಕೆಳಜಾತಿಯವರೇ ಇರಲೀ ಮೈತುಂಬಾ ಬಟ್ಟೆ ಧರಿಸುತ್ತಿದ್ದರು ಎಂದು ಮೇಲಿನ ಪದ್ಯದಿಂದ ತಿಳಿಯುತ್ತದೆ.

ಇದು ಅಂಚೆ ಎನ್ನುವ ಪರಿಕಲ್ಪನೆಯನ್ನು ವಿವರಿಸುವ ಒಂದು ಮಾದರಿಯಾಗಿದೆ. ಮೊದಲಿಗೆ ಪದದ ಸಂದರ್ಭವನ್ನು (contex) ಹೇಳಬೇಕಾಗುತ್ತದೆ. ಏಕೆಂದರೆ ಸಂದರ್ಭ

ಇಲ್ಲದಿದ್ದರೆ ಪದಗಳಿಗೆ ಅರ್ಥವೇ ಇರುವುದಿಲ್ಲ. ಅನಂತರ ಇತರ ಉದಾಹರಣೆಗಳನ್ನು ನೀಡಬೇಕಾಗುತ್ತದೆ. ಆಮೇಲೆ ಪಂಪನ ಕಾವ್ಯವಾಗಿದ್ದರಿಂದ ಡಿ.ಎಲ್. ನರಸಿಂಹಾಚಾರ್ಯರು ಏನು ಹೇಳಿದ್ದಾರೆ ಎನ್ನುವುದನ್ನು ಗುರುತಿಸಬೇಕಾಗುತ್ತದೆ. ಏಕೆಂದರೆ ಅವರ 'ಪಂಪಭಾರತ ದೀಪಿಕೆ' ಅಧಿಕೃತವಾದ ಗ್ರಂಥವಾಗಿದೆ. ಆನಂತರ ಅದರ ಅನುವಾದ, ಆಮೇಲೆ ಹೆಚ್ಚಿನ ವಿವರಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟು' ಸಂಪುಟಗಳಿಂದ ಹೆಚ್ಚುವರಿ ಮಾಹಿತಿಯನ್ನು ನೀಡಬಹುದು. ಆಮೇಲೆ ಆ ಪರಿಕಲ್ಪನೆಯ ಕುರಿತು ಸಮಕಾಲೀನ ಚರ್ಚೆಯನ್ನು ಮಂಡಿಸ ಬೇಕಾಗುತ್ತದೆ.

ಹಳಗನ್ನಡಕ್ಕೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಸಂಪುಟಗಳನ್ನು (8) ಇಲ್ಲಿ ವಿಶೇಷವಾಗಿ ನಾನು ಪ್ರಸ್ತಾಪಿಸಬೇಕಾಗುತ್ತದೆ. ಈ ಸಂಪುಟಗಳು ಕನ್ನಡ ಹಿರಿಯ ಮೇಧಾವಿಗಳಿಂದ (ಅಕ್ಷರಶಃ ಮೇಧಾವಿಗಳಿಂದ) ರಚಿತವಾದವು. ಡಿ ಎಲ್ ನರಸಿಂಹಾಚಾರ್, ತೀ.ನಂ ಶ್ರೀಕಂಠಯ್ಯ, ರಂ.ಶ್ರೀ ಮುಗುಳಿ, ಎನ್ ಬಸವರಾಧ್ಯ, ಡಿಕೆ ಭೀಮಸೇನರಾಯ, ಕೆ ಎಂ ರಾಘವಾಚಾರ್ಯ, ಎಂ ಮರಿಯಪ್ಪಭಟ್ಟ, ಆರ್ ಸಿ ಹಿರೇಮಠ, ಸ. ಸ. ಮಾಳವಾಡ, ಎಂ ಲಕ್ಷ್ಮೀನಾರಾಯಣ, ಕಾ. ಸ ಧರಣೇಂದ್ರಯ್ಯ, ಡಿ ಜವರೇಗೌಡ, ಜಿ ವೆಂಕಟಸುಬ್ಬಯ್ಯ, ಬಿ ವಿ ನಾಯಕ, ಬಿಎಂ ಶ್ರೀಕಂಠಯ್ಯ, ಎಂ ಗೋವಿಂದ ಪೈ, ಎಲ್ ವಿ ರಾಮಸ್ವಾಮಿ, ಎ ಎಸ್ ಉಪಾಧ್ಯ, ರಾ ಅನಂತಕೃಷ್ಣಶರ್ಮ, ಪಿ.ಎಂ ಸೋಮಸುಂದರಂ, ಕೆ ಜಿ ಕುಂದಣಗಾರ, ಎಚ್ ದೇವಿರಪ್ಪ, ಟಿವಿ ವೆಂಕಟಸುಬ್ಬಯ್ಯ, ಎಂ ಚಿದಾನಂದಮೂರ್ತಿ, ಹಾಗೂ ಇನ್ನೂ ಅನೇಕ ಮಹಾ–ಮಹಾ ವಿದ್ವಾಂಸರು ಸೇರಿ ರೂಪಿಸಿದ ನಿಘಂಟುಗಳವು, ಶಾಸನಗಳು, ಹಳೆಗನ್ನಡ–ನಡುಗನ್ನಡ–ಹೊಸಗನ್ನಡ ಸಾಹಿತ್ಯ ಸಂಪತ್ತಿನಿಂದ, ಕನ್ನಡದ ಲಕ್ಷಾಂತರ ಪದಗಳಿಗೆ ಕಾಲಾನುಕ್ರಮದಲ್ಲಿ ಅರ್ಥ ನೀಡುತ್ತಾರೆ. ಈ ನಿಘಂಟುಗಳು ಇರುವಾಗ ಹಳೆಗನ್ನಡಕ್ಕೆ ಸಂಬಂಧಿಸಿದಂತೆ ಕೋಶಗಳ ಇಂತಹ ಅಗತ್ಯವೇ ಇಲ್ಲ. ಏಕೆಂದರೆ ಇದರಲ್ಲಿ ಎಲ್ಲವೂ ಇವೆ. ಒಂದು ವೇಳೆ ಬೇರೆಯವರು ಸಿದ್ಧಪಡಿಸಿದಾಗಲೂ ಅದು ಈ ನಿಘಂಟುಗಳಲ್ಲಿರುವ ಅರ್ಥಗಳೇ ಆಗಿವೆ. ಕೇಶವಶರ್ಮ ಆವರ ಈ ಕೋಶದಲ್ಲಿಯೂ ಪರಿಷತ್ತಿನ ನಿಘಂಟುಗಳಲ್ಲಿ ಈಗಾಗಲೇ ನೀಡಿರುವ ಅರ್ಥಗಳನ್ನೇ ಇಲ್ಲಿಯೂ ನೀಡಲಾಗಿದೆ.

ಒಂದು ವೇಳೆ ಹಳೆಗನ್ನಡಕ್ಕೆ ಸಂಬಂಧಿಸಿದಂತೆ ಇನ್ನೊಂದು ಕೋಶವನ್ನು ಸಿದ್ಧಪಡಿಸುವುದೇ ಆದರೆ ಈ ನಿಘಂಟುಗಳಲ್ಲಿ (ಅಂದರೆ ಪರಿಷತ್ತಿನ ಕನ್ನಡ ನಿಘಂಟು ಸಂಪುಟಗಳಲ್ಲಿ) ಇಲ್ಲದ ಪದಗಳು ಮತ್ತು ಅರ್ಥಗಳು ಇರಬೇಕಾಗುತ್ತದೆ. ಆದರೆ ಅದು ಅತ್ಯಂತ ಸುಲಭ ಮಾತಲ್ಲ. ಅದಕ್ಕೆ ಅಪಾರವಾದ ಪಾಂಡಿತ್ಯ, ನಿಷಿತಮತಿ ಇರಲೇಬೇಕಾಗುತ್ತದೆ. ಈ ಕೋಶದಲ್ಲಿ ಅಂತಹ ಯಾವ ಪ್ರಯತ್ನಗಳೂ ಕಂಡುಬರುವುದಿಲ್ಲ. ಅಷ್ಟು ಮಾತ್ರವಲ್ಲ ಪರಿಷತ್ತಿನ ನಿಘಂಟು ಸಂಪುಟಗಳ ಉಲ್ಲೇಖವನ್ನೂ ಮಾಡಿಲ್ಲ. ಅಂದರೆ ಲೇಖಕರು, (ಸಂಪಾದಕರು) ಈ ಸಂಪುಟಗಳನ್ನೇ ನೋಡಿಲ್ಲವೆನಿಸುತ್ತದೆ. ಇದು ಹೌದಾದರೆ ಇಂತಹ ಕೋಶ ರಚನೆಯ ಹಿನ್ನೆಲೆಯಲ್ಲಿ ಹೊಸತನ ಬರುವುದಾದರು ಹೇಗೆ?

ಇನ್ನು ಇಲ್ಲಿ ಇರುವ ಕೆಲವು ವಿವರಗಳನ್ನು ಮೇಲ್ನೋಟಕ್ಕೆ ವಿದ್ವತ್ಪೂರ್ಣವೆನಿಸುತ್ತದೆ ಒಂದು ಉದಾಹರಣೆ.

ಅಜಾತ

ಮೀರಲ್ಕಜಾತ ದೊರೆಯಲ್ಲವಲ್ಲ.... ಪಂಪಭಾರತ (9–21)

ಅಜಾತನೆಂದರೆ ಹುಟ್ಟಿಲ್ಲದವನು, ಕೃಷ್ಣ ಎಂದರ್ಥ. ಪಂಪನು ಕೃಷ್ಣನ ದೈವತ್ವ ಅಥವಾ ಅಲೌಕಿಕ ವ್ಯಕ್ತಿತ್ವವನ್ನು ಮನಗಂಡಿದ್ದಾನೆ ಎನಿಸುತ್ತದೆ. ಇದೇ ಕೃಷ್ಣನನ್ನು ಬೇರೆ ಸಂದರ್ಭಗಳಲ್ಲಿ ಅಚ್ಯುತ, ಅನಂತ, ಮುಕುಂದ, ಮುರಾರಿ ಮುಂತಾದ ಹೆಸರುಗಳಿಂದ ಕರೆದಿರುವುದನ್ನು ಗಮನಿಸಿದರೆ ಪಂಪನಿಗೆ ಹಿನ್ನೆಲೆಯಾಗಿರುವ ವೈದಿಕ ಧರ್ಮದ ವಾಙ್ಮಯ ಪ್ರಭಾವವನ್ನು ಗುರುತಿಸಲು ಸಾಧ್ಯವಿದೆ. ಕೃಷ್ಣನದು ಜಾತರೂಪವಲ್ಲ, ದೇವರಿಗೂ ಮನುಷ್ಯರಿಗೂ ಇರುವ ವ್ಯತ್ಯಾಸವಿದು. ದೇವರು ಉದ್ದೇಶಪೂರ್ವಕವಾಗಿ ಭೂಮಿಯನ್ನು ಉದ್ಧರಿಸಲು ಅವತಾರವೆತ್ತುತ್ತಾನೆ, ಇಲ್ಲಿ ಅವತರಿಸುವುದು ಮುಖ್ಯ. ಸಾಮಾನ್ಯ ಮನುಷ್ಯರು ಹುಟ್ಟುತ್ತಾರೆ ಮತ್ತು ಸಾಯುತ್ತಾರೆ. ಅವತಾರ ಪ್ರಜ್ಞಾಪೂರ್ವಕವಾದದ್ದು, ಆದುದರಿಂದ ಕೃಷ್ಣ ಅವತಾರವೆತ್ತಿದ್ದಾನೆ... (ಅದೇ ಪು.23) ಇದು ಕೇಶವಶರ್ಮ ಅವರು ಕೋಶದಲ್ಲಿ ನೀಡಿರುವ ವಿವರಣೆಯಾಗಿದೆ.

1. ಇಲ್ಲಿ ಕೋಶಕಾರರು ಕೃಷ್ಣನದು ಅವತಾರವೆಂದು ಹೇಳಿದ್ದಾರೆ. ಸಾಮಾನ್ಯ ಜನರು ಹೀಗೇ ತಿಳಿದಿದ್ದಾರೆ. ಆದರೆ 'On The Meaning Of the Mahabharata' ಎನ್ನುವ ಕೃತಿಯಲ್ಲಿ ವಿ. ಎಸ್. ಸುಕ್ತಂಕರ್ ಅವರು ಹೇಳಿರುವ ಈ ಮಾತುಗಳನ್ನು ಗಮನಿಸಿ:

Let us examine this point a little more fully. The Adi- parvan relates in great detail the story of the birth of all important persons participating in the drama, who are described there as being either incarnations of Devas or Asuras, or else of other than mortal parentage. The story goes that it is in response to the prayer of the outraged Earth, wasted by the tyranny of demonic kings then ruling, that Viṣnu takes birth among the Yädavas along with other heavenly beings – gods rsis, gandharvas, kinnaras and so on - with a view to relieving the burden of the Earth. Thus, according to the epic itself, the Mahabhärata War is the expression of a state of tension between two ideal orders of beings, a moral type wherein the gods become incarnate as heroic individuals and an immoral or rather an unmoral- type which it is the object of the former to destroy. This war - or, to give it a more general name, conflict- is an eternal recurrence, a phenomenon assuming in the space-time continuum the most diverse forms and aspects. The Mahabhārata thus becomes the type or the arche type of all wars or conflicts of the past, the present or the future.

This aspect of the Mahäbharata as a projection on the cosmic background deserves to be dealt with in greater detail as it is an aspect which appears not to be widely known or understood. About the cosmic character or Sri Krşna, the epic itself is not in any doubt. He is an Iśvara. He is the Puruşa of the Sämkhyas; the Brahman, the Atman or the Paramatman of the Vedantins. The man of knowledge affirms that Vasudeva is All (Văsudevah sarvam iti, Gita 7. 19). Clearly he cannot be more. I may add, there is to

my knowledge not a single passage in the Mahäbhärata which does not presuppose the divinity or the cosmic character of Sri Krşna; or, to put it more precisely, which does not assume that he is an Avatara or incarnation of Vişnu-Narayana, in the peculiar sense in which the word "Avatara" is used in Indian philosophy or meta physics. (P.62-63)

ಕೃಷ್ಣನು ಅವತಾರಪುರುಷ ಎನ್ನುವ ಮಾತು ಮಹಾಭಾರತದಲ್ಲಿ ಎಲ್ಲಿಯೂ ಬರುವುದಿಲ್ಲ ಎನ್ನುವುದು ಸುಕ್ತಂಕರ್ ಅವರ ಅಭಿಪ್ರಾಯವಾಗಿದೆ. ಸುಕ್ತಂಕರ್ ಅವರು ಮಹಾಭಾರತವನ್ನು ಮೊದಲ ಬಾರಿಗೆ ಸಂಪಾದನೆ ಮಾಡಿದರು. ಹಾಗೆಯೇ ಸಂಪಾದನೆ ಮಾಡಿದ ಮೇಲೆಯೇ ಈ ಪುಸ್ತಕವನ್ನು ಅವರು ಬರೆದರು. ಅಂತಹ ತಿಲಕಪ್ರಾಯವಾದ ಪುಸ್ತಕವನ್ನು ಈ ಕೊಶದಲ್ಲಿ ಬಳಸಿಯೇ ಇಲ್ಲ. ಹೀಗೆ ಮೇಲ್ನೋಟಕ್ಕೆ ಪಾಂಡಿತ್ಯಪೂರ್ಣ ಎನಿಸುವ ಇಲ್ಲಿನ ಒಳನೋಟಗಳು ಕೂಡ ಆಳದಲ್ಲಿ ಹೇಗೆ ಲೊಳಲೊಟ್ಟೆಯಾಗಿವೆ, ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಹಾಗಾದರೆ ಪಂಪನು ಅಜಾತ ಎನ್ನುವ ಪದದ ಅರ್ಥವನ್ನು ಸುಕ್ತಂಕರ್ ಹೇಳುವ ಅರ್ಥದಲ್ಲಿಯೇ ಗ್ರಹಿಸಿರಬೇಕು ಎಂದರೆ ಸುಕ್ತಂಕರ್ ಹೇಳುವ ಅಧ್ಯಾತ್ಮಿಕ ಅರ್ಥವು ಪಂಪನಿಗೆ ಗೊತ್ತಿರಲೇ ಬೇಕು. ಏಕೆಂದರೆ ಮಹಾಭಾರತದಲ್ಲಿ ಕೃಷ್ಣನನ್ನು ಹೇಗೆ ಗ್ರಹಿಸಲಾಗಿದೆ ಎನ್ನುವುದನ್ನೇ ಸುಕ್ತಂಕರ್ ಅವರು ಹೇಳಿರುವುದಾಗಿದೆ. ಹಾಗಾದರೆ ಅಜಾತ ಎನ್ನುವುದಕ್ಕೆ ಪಂಪನು ಹೇಳಿರುವ ಅರ್ಥವಾದರೂ ಏನಿರಬಹುದು? ಸುಕ್ತಂಕರವರ ವಿಶ್ಲೇಷಣೆಯನ್ನು ನೋಡಿದರೆ ಪಂಪನು ಅಜಾತ ಎನ್ನುವ ಪದವನ್ನು ತೀರ್ಥಂಕರ ಎನ್ನುವ ಅರ್ಥದಲ್ಲಿಯೇ ಪ್ರಯೋಗಿಸುತ್ತಿದ್ದಾನೆ ಎಂದೆನಿಸುತ್ತದೆ. ಏಕೆಂದರೆ ತೀರ್ಥಂಕರನ 1008 ನಾಮಗಳಲ್ಲಿ ಅಜಾತ ಎನ್ನುವುದೂ ಒಂದಾಗಿದೆ.

ಇಂತಹುದೇ ಇನ್ನೊಂದು ಉದಾಹರಣೆಯನ್ನು ಗಮನಿಸೋಣ; ಪುದ್ಗಲ ಎನ್ನುವುದರ ಬಗೆಗೆ ಈ ಕೋಶದಲ್ಲಿ ಹೀಗೆ ಹೇಳಲಾಗಿದೆ:

ಪುದ್ಗಲ

ಪುದ್ಗಲವೆಂಬ ಪದವನ್ನು ಜೈನರು ವಿಶಿಷ್ಟ ಅರ್ಥದಲ್ಲಿ ಬಳಸುತ್ತಾರೆ. ಪೂರಯತಿಗಲಯತಿ ಇತಿ ಪುದ್ಗಮ್ ಎಂದರೆ –ಎಂದರೆ ಸೇರುವ ಮತ್ತು ಬೇರೆಯಾಗುವ ಗುಣವುಳ್ಳದ್ದು ಪುದ್ಗಲ ಇದನ್ನು ಭೌತವಸ್ತು(mater) ಅಥವಾ ಭೂ ಸಾಮಾನ್ಯವೆಂದು ಕರೆಯಬಹುದು. ಇತರ ದರ್ಶನಗಳಲ್ಲಿ ಪ್ರಕೃತಿ, ಪ್ರಧಾನ, ಪರಮಾಣುಗಳಿವೆ ಇದು ಸಂವಾದಿಯಾಗಿದೆ. ಈ ಪುದ್ಗಲಕ್ಕೆ ಎರಡು ರೂಪಗಳಿವೆ ಪರಮಾಣು ಮತ್ತು ಸ್ಕಂದ ಅಥವಾ ಸಂಘಾತ. ಪುದ್ಗಲದ ವಿಭಾಗ ಮಾಡಲು ಬಾರದ ಸೂಕ್ಷ್ಮವಾದ ರೂಪಕ್ಕೆ ಅಣುವೆಂದು ಹೆಸರು. ನಿರಯವಿ ಪರಮಾಣುಗಳೆಲ್ಲ ಒಂದೇ ವಿಧವುಗಳೆಂದು ಜೈನರವಾದ ಆದರೂ ಅವು ಅನಂತ ವಸ್ತುಗಳ ಉದಯಕ್ಕೆ ಕಾರಣವಾಗಬಲ್ಲವು. ಪೃಥ್ವೀ. ಅಪ್. ತೇಜಸ್ ಮತ್ತು ವಾಯು ಎಂಬ ನಾಲ್ಕು ವಿಧವಾದ ವ್ಯತ್ಯಾಸಗಳೂ ಕೂಡ ಅನಂತರ ಉತ್ಪನ್ನವಾದವು ಮತ್ತು ಗೌಣ. ವೈಶೇಷಿಕರು ಹೇಳುವಂತೆ ಅವು ಶಾಶ್ವತ ಮತ್ತು ಪ್ರಧಾನವಲ್ಲ. ಪರಮಾಣುಗಳೆಲ್ಲ ಒಂದೇ ರೂಪವಾಗಿದ್ದರೂ ರಸ, ಗಂಧ ಮುಂತಾದ ಲಕ್ಷಣಗಳನ್ನು ಬೆಳೆಸಿಕೊಂಡು ಬೇರೆಯಾಗುತ್ತವೆ. ಇವುಗಳಿಂದಲೇ ಪ್ರಪಂಚವು ಹುಟ್ಟಿದೆ. ಎರಡು ಅಥವಾ ಹೆಚ್ಚು ಪರಮಾಣುಗಳು ಸೇರಿದಾಗ ಸ್ಕಂದ ಅಥವಾ ಸಂಘಾತ ಎನಿಸಿಕೊಳ್ಳುತ್ತದೆ. ದೃಷ್ಟಿ ಗೋಚರವಾಗುವ ಯಾವತ್ತೂ ವಸ್ತುಗಳು ಈ ವರ್ಗಕ್ಕೆ

ಸೇರುತ್ತವೆ. (ಪು. 434) ಇದು ಕೇಶವಶರ್ಮರವರ ವಿವರಣೆಯಾಗಿದೆ.

ಇದರಿಂದ ಏನೂ ಹೇಳಿದಂತಾಗುವುದಿಲ್ಲ. ಪುದ್ಗಲದ ಕುರಿತು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. ಜಿನಸೇನಾಚಾರ್ಯರ ಪೂರ್ವಪುರಾಣದಲ್ಲಿ –

ಧರ್ಮಾಧರ್ಮವಿಯತ್ಕಾಲಪದಾರ್ಥಾ ಮೂರ್ತಿವರ್ಜಿತಾಃ ।

ಮೂರ್ತಿಮತ್ಪುದ್ಗಲದ್ರವ್ಯಂ ತಸ್ಯ ಭೇದಾನಿತಃ ಶೃಣು ॥144॥

ಧರ್ಮ, ಅಧರ್ಮ, ಆಕಾಶ, ಕಾಲ ಈ ನಾಲ್ಕು ದ್ರವ್ಯಗಳು ಅಮೂರ್ತಗಳಾಗಿವೆ. ಪುದ್ಗಲದ್ರವ್ಯವು ಮೂರ್ತವಾಗಿದೆ. ಇದರ ಭೇದಗಳನ್ನು ಮುಂದೆ ಹೇಳುವ ಪ್ರಕಾರವಾಗಿ ಕೇಳು.

ವರ್ಣಗಂಧರಸಸ್ಪರ್ಶಯೋಗಿನ: ಪುದ್ಗಲಾ ಮತಾಃ ।

ಪೂರಣಾದ್ಗಲನಾಚ್ಚೈವ ಸಂಪ್ರಾಪ್ತಾನ್ವರ್ಥನಾಮಕಾಃ ॥145॥

ರೂಪ ರಸ ಗಂಧ ಸ್ಪರ್ಶ ಈ ಗುಣಗಳಿಂದ ಯುಕ್ತವಾದುವು ಪುದ್ಗಲಗಳು. ಈ ಪುದ್ಗಲಗಳು ಪರಸ್ಪರವಾಗಿ ಸೇರಿ ಸ್ಕಂಧವಾಗುವುದರಿಂದಲೂ, ಸ್ಕಂಧದಲ್ಲಿ ಸೇರಿರುವುವು ಬೇರೆಯಾಗುವುದರಿಂದಲೂ ಪುದ್ಗಲಗಳೆಂದು ಸಾರ್ಥಕವಾದ ಹೆಸರನ್ನು ಪಡೆದಿವೆ. (ಪೂರಣಾದ್ಗಲನಾಚ್ಚಪುದ್ಗಲಃ).

ಸ್ಕಂಧಾಣುಭೇದತೋ ದ್ವೇಧಾ ಪುದ್ಗಲಸ್ಯ ವ್ಯವಸ್ಥಿತಿಃ ।

ಸ್ನಿಗ್ಧರೂಕ್ಷಾತ್ಮಕಾಣೂನಾಂ ಸಂಘಾತಃ ಸ್ಕಂಧ ಇಷ್ಯತೇ ॥146॥

ಪುದ್ದಲದ್ರವ್ಯವು ಸ್ಕಂಧವೆಂದೂ ಅಣುವೆಂದೂ ಎರಡುವಿಧವಾಗಿದೆ. ಸ್ನಿಗ್ಧರೂಕ್ಷ ಗುಣಗಳುಳ್ಳ ಪರಮಾಣುಗಳ ಸಮೂಹಕ್ಕೆ ಸ್ಕಂಧವೆಂದು ಹೆಸರು. ಜಿಗಟು ಕಾಠಿಣ್ಯಗುಣಗಳುಳ್ಳ ಪರಮಾಣುಗಳು ಪರಸ್ಪರವಾಗಿ ಸೇರುವುದರಿಂದಾಗುವ ಪಿಂಡಕ್ಕೆ ಸ್ಕಂಧವೆಂದು ಹೆಸರು.

ದ್ವ್ಯಣುಕಾದಿರ್ಮಹಾಸ್ಕಂಧಪರ್ಯಂತಸ್ತಸ್ಯ ವಿಸ್ತರಃ ।

ಛಾಯಾತಪತಮೋಜ್ಯೋತ್ಸ್ನಾಪಯೋದಾದಿಪ್ರಭೇದಭಾಕ್ ॥147॥

ಎರಡು ಅಣುಗಳಿಂದಾದ ಸ್ಕಂಧಮೊದಲಾಗಿ ಮಹಾಸ್ಕಂಧದವರೆಗೆ ಅದರ ವಿಸ್ತಾರವಿದೆ. ಆ ಸ್ಕಂಧವು ನೆರಳು, ಬಿಸಲು, ಕತ್ತಲೆ, ಬೆಳದಿಂಗಳು, ಮೇಘ ಮೊದಲಾದ ಭೇದಗಳುಳ್ಳದೂ ಆಗಿದೆ.

ಅಣವಃ ಕಾರ್ಯಲಿಂಗಾಃ ಸ್ಯುರ್ದ್ವಿಸ್ಪರ್ಶಾಃ ಪರಿಮಂಡಲಾಃ ।

ಏಕವರ್ಣರಸಾ ನಿತ್ಯಾಃ ಸ್ಯುರನಿತ್ಯಾಶ್ಚ ಪರ್ಯಯೈಃ ॥148॥

ಇಂದ್ರಿಯಗಳಿಗೆ ಗೋಚರವಾಗದಿರುವ ಪರಮಾಣುಗಳು ಘಟಪಟ ಮೊದಲಾದ ಕಾರ್ಯಗಳಿಂದ ತಿಳಿಯಲರ್ಹವಾಗಿವೆ. ಅನುಮಾನಪ್ರಮಾಣ(ಜ್ಞಾನ)ಕ್ಕೆ ವಿಷಯವಾಗಿವೆಯೆಂದು ಭಾವವು, ಸ್ನಿಗ್ಧರೂಕ್ಷಗಳೆಂಬೆರಡು ಸ್ಪರ್ಶಗಳುಳ್ಳವೂ ಸೂಕ್ಷ್ಮವೂ ಒಂದೇವಿಧವಾದ (ಬದಲಾಯಿಸದ) ವರ್ಣರಸಗಳುಳ್ಳವೂ ಆದ ಆ ಪರಮಾಣುಗಳು ದ್ರವ್ಯಾಪೇಕ್ಷೆಯಿಂದ ನಿತ್ಯಗಳೂ ಘಟಪಟ ಮೊದಲಾದ ಪರ್ಯಾಯಾಪೇಕ್ಷೆಯಿಂದ ಅನಿತ್ಯಗಳೂ ಆಗಿವೆ. ಪರ್ಯಾಯಗಳಲ್ಲಿ ವರ್ಣಾದಿಗಳು ಬದಲಾಯಿಸುತ್ತವೆಂದು ಭಾವವು.

ಸೂಕ್ಷ್ಮ ಸೂಕ್ಷ್ಮಸ್ತಥಾ ಸೂಕ್ಷ್ಮಾಃ ಸೂಕ್ಷ್ಮಸ್ಥೂಲಾತ್ಮಕಾಃ ಪರೇ ।

ಸ್ಥೂಲಸೂಕ್ಷ್ಮಾತ್ಮಕಾಃ ಸ್ಥೂಲ ಸ್ಥೂಲಸ್ಥೂಲಾಶ್ಚ ಪುದ್ಗಲಾಃ ॥149॥

ಆ ಪುದ್ಗಲಗಳು ಸೂಕ್ಷ್ಮಸೂಕ್ಷ್ಮಗಳೂ, ಸೂಕ್ಷ್ಮಗಳೂ, ಸೂಕ್ಷ್ಮಸ್ಥೂಲಗಳೂ, ಸೂಕ್ಷ್ಮಸ್ಥೂಲಗಳೂ, ಸ್ಥೂಲಗಳೂ, ಸ್ಥೂಲಸ್ಥೂಲಗಳೂ ಎಂದು ಆರುವಿಧವಾಗಿವೆ.

ಸೂಕ್ಷ್ಮಸೂಕ್ಷ್ಮೋಣುರೇಕಃ ಸ್ಯಾದದೃಶ್ಯೋಸ್ಪರ್ಶ ಏವ ಚ ।
ಸೂಕ್ಷ್ಮಾಸ್ತೇ ಕಾರ್ಮಣಸ್ಕಂಧಾಃ ಪ್ರದೇಶಾನಂತ್ಯಯೋಗತಃ ॥150॥

ದೃಷ್ಟಿಗೋಚರವಾಗದಿರುವುದೂ ಸ್ಪರ್ಶನೇಂದ್ರಿಯವಿಷಯವಲ್ಲದುದೂ ಆದ ಒಂದು ಪರಮಾಣುವು ಸೂಕ್ಷ್ಮಸೂಕ್ಷ್ಮವೆಂಬ ಪುದ್ಗಲವಾಗಿದೆ. ಅತೀಂದ್ರಿಯವಾದ ನಿರವಯವಪರಮಾಣುವು ಸೂಕ್ಷ್ಮಸೂಕ್ಷ್ಮಪುದ್ಗಲವೆಂದರ್ಥವು, ಪುಣ್ಯಪಾಪರೂಪವಾದ ಅನಂತಪರಮಾಣುಗಳ ಸಂಯೋಗದಿಂದಾದ ಕಾರ್ಮಣವೆಂಬ ಸೂಕ್ಷ್ಮ ಶರೀರಸ್ಕಂಧಗಳು ಸೂಕ್ಷ್ಮಪುದ್ಗಲಗಳಾಗಿವೆ. ಸಂಸಾರಿಜೀವನ ಕರ್ಮರೂಪವಾದ ಈ ಸೂಕ್ಷ್ಮಶರೀರವು ಅನಂತಪರಮಾಣುಗಳ ಸಮೂಹವಾಗಿದ್ದರೂ ಅತೀಂದ್ರಿಯವಾಗಿದೆಯೆಂದು ಭಾವವು.

ಶಬ್ದಃ ಸ್ಪರ್ಶೋ ರಸೋ ಗಂಧಃ ಸೂಕ್ಷ್ಮಸ್ಥೂಲೋ ನಿಗದ್ಯತೇ ।
ಅಚಾಕ್ಷುಷತ್ವೇ ಸತ್ಯೇಷಾಮಿಂದ್ರಿಯಗ್ರಾಹ್ಯತೇಕ್ಷಣಾತ್ ॥151॥

ಶಬ್ದ ಸ್ಪರ್ಶ ರಸ ಗಂಧ ಇವುಗಳು ಚಕ್ಷುರಿಂದ್ರಿಯಕ್ಕೆ ವಿಷಯವಲ್ಲದಿದ್ದರೂ ಶ್ರೋತ್ರಮೊದಲಾದ ಇಂದ್ರಿಯಗಳಿಗೆ ವಿಷಯವಾಗಿರುವುದು ಕಾಣುವುದರಿಂದ ಆ ಶಬ್ದಮೊದಲಾದುವು ಸೂಕ್ಷ್ಮಸ್ಥೂಲಪುದ್ದಲಗಳೆಂದು ಹೇಳಲ್ಪಡುತ್ತವೆ.

ಸ್ಥೂಲಸೂಕ್ಷ್ಮಾಃ ಪುನರ್ಜ್ಞೇಯಾಶ್ಛಾಯಾಜ್ಯೋತ್ಸ್ನಾತಪಾದಯಃ ।
ಚಾಕ್ಷುಷತ್ವೇ ಪ್ಯಸಂಹಾರ್ಯರೂಪತ್ವಾದವಿಘಾತಕಾಃ ॥152॥

ನೆರಳು ಬೆಳದಿಂಗಳು ಬಿಸಲು ಮೊದಲಾದುವು ಚಕ್ಷುರಿಂದ್ರಿಯಕ್ಕೆ ವಿಷಯಗಳಾಗಿದ್ದರೂ ಅಪಹರಿಸುವುದಕ್ಕಾಗದಿರುವ ಸ್ವರೂಪವುಳ್ಳವುಗಳಾಗಿರುವುದರಿಂದ ಪ್ರತಿಘಾತರಹಿತವಾದ ಸ್ಥೂಲಸೂಕ್ಷ್ಮಪುದ್ಗಲಗಳೆಂದು ತಿಳಿಯಬೇಕು.

ದ್ರವದ್ರವ್ಯಂ ಜಲಾದಿ ಸ್ಯಾತ್ಸ್ಥೂಲಭೇದನಿದರ್ಶನಮ್ ।
ಸ್ಥೂಲಸ್ಥೂಲಃ ಪೃಥಿವ್ಯಾದಿರ್ಭೇದ್ಯಸ್ಕಂಧಃ ಪ್ರಕೀರ್ತಿತಃ ॥153॥

ನೀರುಮೊದಲಾದ ದ್ರವವಸ್ತುವು ಸ್ಥೂಲಪುದ್ಗಲದ್ರವ್ಯದ ಭೇದಕ್ಕೆ ದೃಷ್ಟಾಂತವಾಗಿದೆ. ಭೇದಿಸುವುದಕ್ಕೆ ಯೋಗ್ಯವಾದ ಸ್ಕಂಧವುಳ್ಳ ಪೃಥಿವೀಮೊದಲಾದ ಪದಾರ್ಥವು ಸ್ಥೂಲಸ್ಥೂಲಪುದ್ಗಲದ್ರವ್ಯವೆಂದು ಹೇಳಲ್ಪಟ್ಟಿದೆ.

ಇತ್ಯಮೀಷಾಂ ಪದಾರ್ಥಾನಾಂ ಯಾಥಾತ್ಮ್ಯಮವಿಪರ್ಯಯಾತ್ ।
ಯಃ ಶ್ರದ್ಧತ್ತೇ ಸ ಭವ್ಯಾತ್ಮಾ ಪರಂಬ್ರಹ್ಮಾಧಿಗಚ್ಛತಿ ॥154॥

ಈ ಪದಾರ್ಥಗಳ ಯಥಾರ್ಥಸ್ವರೂಪವನ್ನು ವಿಪರೀತವಿಲ್ಲದೆ ನಂಬುವ ಭವ್ಯಾತ್ಮನು ಪರಬ್ರಹ್ಮಸ್ವರೂಪವನ್ನು ಹೊಂದುತ್ತಾನೆ.”

ಇದು ಪೂರ್ವಪುರಾಣದಲ್ಲಿ ‘ಪುದ್ಗಲದ’ ಕುರಿತು ನೀಡಿರುವ ವಿವರಣೆಯಾಗಿದೆ. ಅದನ್ನು ಆದಿತೀರ್ಥಂಕರನು ತನ್ನ ಮಗನಾದ ಭರತ ಚಕ್ರೇಶ್ವರನಿಗೆ ನೀಡಿರುವನು. ಅಂತಹ ಮಹತ್ವವಿರುವ ಸಂಗತಿಯನ್ನು ಈ ಕೋಶಕಾರರು ವಿವರಿಸಿರುವುದಾದರೂ ಹೇಗೆ ಎನ್ನುವುದನ್ನು ನೋಡಿ! ಇದರ ಕುರಿತು ಇನ್ನಷ್ಟು ವಿವರಗಳಿಗೆ ಹೋಗುವ ಮುನ್ನ ಒಂದು ಮಾತನ್ನು ಹೇಳಬೇಕು. ಪುರಾಣ ಹಾಗೂ ಧರ್ಮಶಾಸ್ತ್ರಗಳ ವಿಷಯಕ್ಕೆ ಸಂಬಂಧಿಸಿದಂತೆ ವೈದಿಕರು ಮತ್ತು ಜೈನರಲ್ಲಿ ತುಂಬ ವ್ಯತ್ಯಾಸವಿದೆ. ಅಂದರೆ ವೈದಿಕರು ಮಡಿ ಮಡಿ ಎನ್ನುತ್ತಲೇ ತಮ್ಮ ಗ್ರಂಥಗಳನ್ನು ತಮ್ಮ ದೇಶದ ಇತರ ಜನರಿಗಲ್ಲದಿದ್ದರೂ, ಯುರೋಪಿಯನ್ನರಿಗೆ ಕಲಿಸುವುದಕ್ಕೆ ಹೆಚ್ಚಿನ ಆಸಕ್ತಿಯನ್ನು ತೋರಿಸುತ್ತಾರೆ. ಆದುದರಿಂದಲೇ ವೈದಿಕ ಶಾಸ್ತ್ರಗಳನ್ನು ಪುರಾಣಗಳನ್ನು ಯುರೋಪಿಯನ್ನರು ಮತ್ತು ಅವರ ಮಾನಸಪುತ್ರರು ಎಷ್ಟು

ಕುಲಗೆಡಿಸಬೇಕೋ ಅಷ್ಟು ಕುಲಗೆಡಿಸಿದ್ದಾರೆ! ಆದರೆ ಜೈನರು ಯುರೋಪಿಯನ್ನರನ್ನು ಹತ್ತಿರ ಸೇರಿಸಲೇ ಇಲ್ಲ. ಆದುದರಿಂದ ಜೈನ ಗ್ರಂಥಗಳು ಇಲ್ಲಿಯವರೆಗೂ ಯುರೋಪಿಯನ್ನರ ಕೈಗೆ ದೊರೆಯಲೇ ಇಲ್ಲ. ಒಂದು ವೇಳೆ ಇದ್ದರೂ ಅತೀ ಅಲ್ಪ. ಹಾಗಾದ್ದರಿಂದ ಅವುಗಳು ತಮ್ಮ ಮೂಲರೂಪದಲ್ಲಿ ಹಾಗೆಯೇ ಇವೆ! ಇಂಗ್ಲಿಷ್ ಮೊದಲಾದ ಯುರೋಪಿಯನ್ನರ ಭಾಷೆಗಳಲ್ಲಿ ಜೈನ ಗ್ರಂಥಗಳ ಕುರಿತು ಇಲ್ಲವೆನ್ನುವಷ್ಟು ಕಡಿಮೆ ಬರಹಗಳಿವೆ. ಆದುದರಿಂದ ಆಧುನಿಕ ವಿದ್ವಾಂಸರು ಜೈನಧರ್ಮ ಸಿದ್ಧಾಂತಗಳ ವಿಚಾರದಲ್ಲಿ ಪಡುವ ಪರಿಪಾಟಲನ್ನು ಎಷ್ಟು ವಿವರಿಸಿದರೂ ಸಾಕಾಗುವುದಿಲ್ಲ. ಅವರು ಇಂತಹ ವಿಚಾರಗಳು ಬಂದಾಗ ಹೆಚ್ಚು–ಕಡಿಮೆ ಜೈನ ಪುರಾಣಗಳಲ್ಲಿ ಪಾಪಿ ಜೀವವು ಕರ್ಮ ಬಂಧನದಲ್ಲಿ ಸಿಲುಕಿ ಒದ್ದಾಡುವ ಹಾಗೆ ವಿಲವಿಲ ಒದ್ದಾಡುತ್ತಾರೆ! ಕೋಶದಲ್ಲಿಯೂ ಅದುವೇ ಆಗಿರುವುದು.

ಅಷ್ಟಾಗಿಯೂ 'ಪುದ್ಗಲ' ಎಂದರೇನು? ಕೋಶಕಾರರು ನಿಜವಾಗಿಯೂ ಹೇಳಬೇಕಾದುದೇನು ಎನ್ನುವುದನ್ನೂ ನೋಡೋಣ:

ಜೀವ ಮೊದಲಾದ ಪದಾರ್ಥಗಳ ನಿಜವಾದ ಸ್ವರೂಪವನ್ನು ತಿಳಿಯುವುದೇ – ಜೈನರ ಪ್ರಕಾರ ಸಮ್ಯಕ್ ಜ್ಞಾನವಾಗಿದೆ. ಹಾಗಾದರೆ ಜ್ಞಾನ ಎಂದರೇನು? ವಸ್ತುವಿನ ವಿಶೇಷಾಕಾರವನ್ನು ಗ್ರಹಿಸುವುದೇ ಜ್ಞಾನ ಸಾಮಾನ್ಯಾಕಾರವನ್ನು ಗ್ರಹಿಸುವುದೇ ದರ್ಶನವಾಗಿದೆ. ಸಾಮಾನ್ಯ ಎನ್ನುವುದನ್ನು ನಮ್ಮ ಇಂದಿನ ಅಧ್ಯಯನ ಕ್ರಮಗಳಲ್ಲಿ Ideology ಎಂದರೂ ಸರಿಯೇ. ಜೀವ ಪದಾರ್ಥಗಳ ಸರಿಯಾದ ತಿಳುವಳಿಕೆಯು ಸಮ್ಯಕ್ ಜ್ಞಾನವಾಗಿದೆ ಅದನ್ನೇ ನಾವು Knowledge (ಜ್ಞಾನ) ಎಂದು ಅಧುನಿಕ ಪರಿಭಾಷೆಯಲ್ಲಿ ಹೇಳಬಹುದು. ಆದರೆ ಸಮ್ಯಕ್ ಜ್ಞಾನದ ಅಗತ್ಯವಾದರೂ ಏನು? ಸಮ್ಯಕ್ ಜ್ಞಾನವು ಮೋಕ್ಷಕ್ಕೆ ದಾರಿಯಾಗಬೇಕು. ಅಂದರೆ ಸಂಪೂರ್ಣ ಕರ್ಮಗಳಿಂದ ಬಿಡುಗಡೆಯಾಗುವುದಕ್ಕೆ ಅದು ಸೋಪಾನವಾಗಿದೆ. ಆದರೆ ಹಾಗೆ ಮೋಕ್ಷಕ್ಕೆ ಸೋಪಾನವಾಗಬೇಕಾದರೆ ಅದೊಂದೇ ಸಾಕಾಗುವುದಿಲ್ಲ. ಸಮ್ಯಕ್ ದರ್ಶನ, ಸಮ್ಯಕ್ ಜ್ಞಾನ, ಸಮ್ಯಕ್ ಚಾರಿತ್ರ್ಯಗಳೆಂಬ ಇತರೆ ಸೋಪಾನಗಳೂ ಜೊತೆಗೆ ಇರಲೇಬೇಕಾಗುತ್ತದೆ. ಹಾಗಾದುದರಿಂದ ಜ್ಞಾನ ಎನ್ನುವುದು. ದೇವರು, ಆಗಮಗಳನ್ನು ನಂಬುವುದು (ಸಮ್ಯಕ್ ದರ್ಶನ), ವಿಷಯ – ಭೋಗಳಲ್ಲಿ ಆಸಕ್ತಿಯನ್ನು ತಾಳದಿರುವುದು ಅಹಿಂಸೆಯನ್ನು (ಸಮ್ಯಕ್ ಚಾರಿತ್ರ್ಯ) ಪಾಲಿಸುವುದು ಮೊದಲಾದವು ಸೇರಿಕೊಂಡಗಲೇ (ಸಮ್ಯಕ್ ಜ್ಞಾನ) ಪರಿಪೂರ್ಣವಾಗುತ್ತದೆ. ಸ್ಥೂಲವಾಗಿ ಹೇಳುವುದಾದರೆ ನಿಜವಾದ ಜ್ಞಾನವು (ಸಮ್ಯಕ್ ಜ್ಞಾನ) ಪರಂಪರೆ ಮತ್ತು ಸನ್ಮಾರ್ಗಗಳ ನೆಲೆಯಿಂದ ಉಂಟಾಗುತ್ತದೆ ಎಂದು ಜೈನ ಧರ್ಮವು ಹೇಳುತ್ತದೆ.

ಸರಿ, ಹಾಗಾದರೆ ಪುದ್ಗಲ ಎಂದರೇನು? ಜೈನ ಧರ್ಮದಲ್ಲಿ ಅದನ್ನು ಏಕೆ ಹೇಳಲಾಗಿದೆ?

ಸರಳವಾಗಿ ಹೇಳುವುದಾದರೆ ಜೈನ ಸಿದ್ಧಾಂತದ ಪ್ರಕಾರ ವಿಶ್ವದ ಬಗೆಗಿನ ಚರ್ಚೆಯಿಂದಲೇ ಪುದ್ಗಲಗಳ ಚರ್ಚೆಯೂ ಆರಂಭವಾಗುತ್ತದೆ. ಆ ಅರ್ಥದಲ್ಲಿ ಪುದ್ಗಲ ಎನ್ನುವುದು ಇಂಗ್ಲಿಷ್‌ನ 'ಟಚಿಣಜಡಿ' ಎನ್ನುವ ಪದಕ್ಕೆ ಸಂವಾದಿಯಾಗಬಹುದು. ಅಂದರೆ ವಿಶ್ವವನ್ನು ಜೀವ ಇರುವ ಮತ್ತು ಇಲ್ಲದಿರುವ ತತ್ವಗಳು ಎಂದು ವಿಂಗಡನೆ ಮಾಡಿದರೆ, 'ಪುದ್ಗಲ'ವು ಜೀವ ಇಲ್ಲದಿರುವ ತತ್ವಗಳ ಕೆಳಗೆ ಬರುತ್ತದೆ. ಈ ಜೀವ ರಹಿತವಾದ ತತ್ವಗಳಲ್ಲಿ ಪುದ್ಗಲ ಆಕಾಶ, ಕಾಲ, ಧರ್ಮ ಮತ್ತು ಅಧರ್ಮಗಳೆಂಬ ಐದು ತತ್ವಗಳಿವೆ. ಇವುಗಳಲ್ಲಿ ಧರ್ಮ, ಅಧರ್ಮ, ಆಕಾಶ ಹಾಗೂ ಕಾಲಗಳಿಂದ ಆತ್ಮನಿಗೆ ಕರ್ಮದ

ಭಾದೆ ಉಂಟಾಗುವುದಿಲ್ಲ. ಆದರೆ ಪುದ್ಗಲಗಳ ಮೂಲಕವೇ ಆತ್ಮನಿಗೆ ಕರ್ಮದ ಲೇಪನ ಉಂಟಾಗುತ್ತದೆ. ಅದು ಹೀಗೆ:

"ಆತ್ಮದ ಮೂಲಕ ಪ್ರಾಪ್ತವಾಗುವುದರಿಂದ ಕ್ರಿಯೆಯನ್ನು ಕರ್ಮ ಎನ್ನುತ್ತೇವೆ. ಅದರ ನಿಮಿತ್ತವಾಗಿ ಪರಿಣಾಮವನ್ನು ಪಡೆದ ಪುದ್ಗಲವನ್ನು ಕೂಡ ಕರ್ಮ ಎನ್ನುತ್ತೇವೆ. ಇದರ ಅಭಿಪ್ರಾಯವೇನೆಂದರೆ, ಆತ್ಮದಲ್ಲಿ ಕಂಪನ ರೂಪ ಕ್ರಿಯೆ ಇರುತ್ತದೆ; ಈ ಕ್ರಿಯೆಯ ನಿಮಿತ್ತದಿಂದ ಪುದ್ಗಲಗಳ ವಿಶಿಷ್ಟ ಪರಮಾಣುಗಳಲ್ಲಿ ಆಗುವ ಪರಿಣಾಮವನ್ನು ಕರ್ಮ ಎನ್ನುತ್ತೇವೆ..... ಜೀವದ ಪರಿಣಾಮಗಳನ್ನು ನಿಮಿತ್ತವಾಗಿಸಿಕೊಂಡು ಅದರಿಂದ ಪರತಂತ್ರ ಸುಖ–ದುಃಖ ಭೋಗಿಸುವ ಪುದ್ಗಲದ ಅವಸ್ಥೆಯನ್ನು ಕರ್ಮ ಎನ್ನುತ್ತೇವೆ" (ಧವಲತ್ರಯ ಗ್ರಂಥ ಪ್ರವೇಶ ಪು. 376)

ಅಂದರೆ ಪುದ್ಗಲಗಳು ಆತ್ಮನಿಗೆ ಕರ್ಮವನ್ನು ತರುವ ತತ್ವಗಳಾಗಿವೆ. ಮುನಿಗಳು ಅವುಗಳನ್ನು ಘಾತಿಸಬೇಕಾಗುತ್ತದೆ. ಅದಕ್ಕಾಗಿಯೇ ಉದ್ಗಾರಗಳ ಕುರಿತು ಜೈನಶಾಸ್ತ್ರ ಗ್ರಂಥಗಳಲ್ಲಿ ವಿಶೇಷವಾಗಿ ವಿವರಿಸಲಾಗಿದೆ. ಮುಖ್ಯವಾಗಿ ಅದೊಂದು ಆಧ್ಯಾತ್ಮಿಕ ಪರಿಭಾಷೆ ಎಂದು ಹೇಳಬಹುದಾಗಿದೆ.

ಈ ಕೋಶದಲ್ಲಿ 'ಬುಡಕಟ್ಟು' ಎನ್ನುವ ಪದದ ಬಗೆಗೆ ಪುಟಗಟ್ಟಲೆ ಬರೆಯಲಾಗಿದೆ. ಏಕೆಂದರೆ ಅಲ್ಲಿ ಏನು ಬೇಕಾದರೂ ಬರೆಯಬಹುದು. ಇನ್ನು ಅದರ ಬಗೆಗೆ ಬರೆದಿರುವ ಬೃಹಸ್ಪತಿಗಳಾದರೂ ಯಾರು? ಆರ್. ಎಸ್. ಶರ್ಮಾ, ಶಂ. ಬಾ. ಜೋಶಿ ಮೊದಲಾದವರು. 'ಬುಡಕಟ್ಟು' ಎನ್ನುವ ಪದ ಕನ್ನಡಕ್ಕೆ ಬಂದಿರುವುದೇ ಇಪ್ಪತ್ತನೆಯ ಶತಮಾನದಲ್ಲಿ ಪುಣ್ಯಾತ್ಮರು (ಎಂದರೆ ಆರ್ ಎಸ್ ಶರ್ಮ ಮತ್ತು ಶಂ ಬಾ ಜೋಶಿ ಮೊದಲಾದವರು) ಅದನ್ನು ಋಗ್ವೇದದಲ್ಲಿಯೇ ಇದೆ ಎಂದು ಹೇಳಿದವರು, ಎಂಥಾ ಪಾಂಡಿತ್ಯ ನೋಡಿ! ಆದುದರಿಂದಲೇ ಕೋಶಕಾರರು ಅದರ ಬಗೆಗೆ ಬರೆದಿದ್ದೆ ಬರೆದದ್ದು – ಉತ್ತರನ ಪೌರುಷ ಒಲೆ ಮುಂದೆ ಎನ್ನುವ ಹಾಗೆ. ಅದೇ ರೀತಿ 'ಪುದ್ಗಲ'ಗಳ ಬಗೆಗೂ ಬರೆಯುವುದಿಲ್ಲ ಏಕೆ? ಏಕೆಂದರೆ ಆಗಲೇ ಹೇಳಿದಂತೆ ಆಧುನಿಕ ಚಿಂತಕರಿಗೆ ಸುಲಭವಾಗಿ ಸಿಗುವ ಇಂಗ್ಲಿಷ್ನಲ್ಲಿ ಜೈನಧರ್ಮದ ಬಗೆಗೆ ಏನೂ ಸಿಗುವುದಿಲ್ಲ. ಕರ್ಮ ಬಂಧನದಲ್ಲಿರುವ ಪಾಪಿ ಜೀವವು ಜನನ–ಮರಣಗಳ ಸುಳಿಯಲ್ಲಿ ಸಿಲುಕಿ ಒದ್ದಾಡುವ ಹಾಗೆ ಬರಹಗಾರರೂ ಒದ್ದಾಡುತ್ತಾರೆ. ಇಲ್ಲಿಯೂ ಅದೇ ಆಗಿದೆ.

ಇಷ್ಟು ಹೇಳಿದ ಮೇಲೆ 'ಕೋಶ' ಹೇಗೆ ಇನ್ನು ಕೋಶಾವಸ್ಥೆಯಲ್ಲೇ ಇದೆ ಎಂದು ಓದುಗರಿಗೆ ಅರಿವಾಗದಿರದು ಎಂದೆನಿಸುತ್ತದೆ.

ಆಗಲೇ ಹೇಳಿದಂತೆ ಈ ಕೋಶದಲ್ಲಿ ಏಕರೂಪತೆಯ ನಾಶವಾಗಿರುವುದಕ್ಕೆ ಸರಳ ಬರವಣಿಗೆ ಕಡಿಮೆಯಾಗಿರುವುದು ಕಾರಣವಾಗಿದೆ. ಕೆಲವು ಪರಿಕಲ್ಪನೆಗಳನ್ನು ವಿವರಿಸುವಾಗ ಬೇರೆಯವರ ಬರವಣಿಗೆಯನ್ನು (ಅದರಲ್ಲಿಯೂ ಶಂಭಾಜೋಷಿ) ಯಥಾವತ್ತಾಗಿ ತಂದು ಹಾಕಲಾಗಿದೆ. ಜೋಶಿಯವರ ಬರವಣಿಗೆಯ ಪದಗಳ ಜೊತೆಗೆ ಆಟವಾಡುವ ಮಾದರಿಯದು ಅವರ ಋಗ್ವೇದ ಸಂಹಿತೆ : ನಾಗ ಪ್ರತಿಮಾ ಎನ್ನುವ ಪುಸ್ತಕದ ಕುರಿತು ಅಷ್ಟೇ ಗಾತ್ರದ ಪುಸ್ತಕವನ್ನು ಶೇಷನಾರಾಯಣ ಅವರು ಬರೆದಿದ್ದಾರೆ. ಅದರಲ್ಲಿ ಪದಶಃ ಶಂಬಾ ಜೋಶಿಯವರ ಬರವಣಿಗೆ ಎಷ್ಟು ಅಪ್ರಬುದ್ಧ ಎಂದು ತೋರಿಸಲಾಗಿದೆ. ಆದರೆ ಕನ್ನಡದ ಲೇಖಕರು ಕೃತಿಯನ್ನೇ ಓದದೆ ಶಂಬಾ ಜೋಷಿಯವರ ಪರವಾಗಿ ತುತ್ತೂರಿ ಊದುತ್ತಾರೆ. ಹಾಗೆಯೇ ಮೇಲೆ ಕೇವಲ ಮಾದರಿಗಾಗಿ ಅಷ್ಟೇ ಕೆಲವು ಪರಿಕಲ್ಪನೆ ಕುರಿತು

ವಿವರಿಸಿದ್ದೇನೆ. ಈ ಕೃತಿಯ ಕುರಿತು ಇದೇ ರೀತಿಯ ಜಾಳು ಜಾಳಾದ ವಿವರಣೆಗಳೇ ತುಂಬಿವೆ. ಅವುಗಳನ್ನು ಓದುಗ ಮಹಾಶಯರೇ ಓದಬೇಕು.

ಭಾರತೀಯ ಸಂಸ್ಕೃತಿಯ ಕುರಿತು ಯುರೋಪಿಯನ್ನರು ಮತ್ತು ಅವರ ಮಾನಸಪುತ್ರರೇ ಈವರೆಗೆ ಬರೆಯುತ್ತಾ ಬಂದಿದ್ದಾರೆ. ನಮ್ಮ ಹಳಗನ್ನಡ ಕವಿಗಳು ಆ ಕಾಲದಲ್ಲಿ ಬಾಳಿದವರು; ಹಾಗಾದ್ದರಿಂದ ಅವರ ಕಾವ್ಯಗಳಲ್ಲಿ ಭಾರತೀಯ ಸಂಸ್ಕೃತಿಯ ಚಿಂತನೆಯ ದಟ್ಟವಾದ ಪ್ರಭಾವಗಳು ಆಳದಲ್ಲಿರುವ ಸಾಧ್ಯತೆ ಇರಬಹುದು, ಇದೆ. ಯುರೋಪಿಯನ್ ವಿದ್ವಾಂಸರು ಹಾಗೂ ಅವರ ಮಾನಸಪುತ್ರರಿಗೆ ಈ ಕೃತಿಗಳ ಆಳವಾದ ತಿಳುವಳಿಕೆ ಇಲ್ಲ. ಇವುಗಳನ್ನು ಅವರು(ಇಂದಿಗೂ)ಓದಿಲ್ಲ, ಓದಲು ಬರುವುದಿಲ್ಲ. ಹಾಗಿರುವಾಗ ಇಂತಹ ಕೋಶಗಳಲ್ಲಿ ಅದಕ್ಕಿಂತ ಭಿನ್ನವಾದ ವಿವರಗಳಿವೆ ಎಂದು ಸೋದಾಹರಣವಾಗಿ ಹೇಳಲು ನಮಗೆ ಸಾಧ್ಯವಾದರೆ ಮಾತ್ರ (ಉದಾಹರಣೆ ಈಗಾಗಲೇ ಇರುವ 'ಅಂಚೆ' ಪರಿಕಲ್ಪನೆ)ಇಂತಹ ಕೋಶಗಳ ಉಪಯೋಗ ಸಮಾಜಕ್ಕೆ, ಸಾಮಾನ್ಯ ಜನರಿಗೆ ಆಗುತ್ತದೆ. ಅದನ್ನು ಬಿಟ್ಟು ಬೇರೆ ಕಡೆ ಇರುವುದನ್ನೇ ಹೇಳಿದರೆ ವ್ಯರ್ಥ ಕಾಲಹರಣವಾಗದೇ? ಅದನ್ನು ವಿಶ್ವವಿದ್ಯಾಲಯದ ಪ್ರಾಧ್ಯಾಪಕರು ಮಾಡುವ ಅಗತ್ಯವೇನಿದೆ? ಅಷ್ಟಾಗಿಯೂ ಕನ್ನಡ ಕೈಪಿಡಿ ಪರಿಷತ್ತಿನ ನಿಘಂಟು 8 ಸಂಪುಟಗಳು ಹಳೆಗನ್ನಡ ಕಾವ್ಯಗಳು, ಅವುಗಳ ಕೊನೆಯಲ್ಲಿ ಕೊಟ್ಟಿರುವ ಅರ್ಥಕೋಶ, ಪ್ರತ್ಯೇಕ–ಪ್ರತ್ಯೇಕವಾದ ಹಳೆಗನ್ನಡ ನಿಘಂಟುಗಳು, ಒಬ್ಬೊಬ್ಬ ಕವಿಗಳ ಕುರಿತಾಗಿರುವ ಪದಪ್ರಯೋಗ ಕೋಶಗಳು, ದೀಪಿಕೆಗಳು ಬಹುತೇಕ ಎಲ್ಲಾ ಕಾವ್ಯಗಳಿಗೆ ಬರೆದಿರುವ ಗದ್ಯಾನುವಾದಗಳು, ಡಾ. ಚಿದಾನಂದಮೂರ್ತಿ ಮತ್ತು ಡಾ. ಎಂ ಎಂ ಕಲಬುರ್ಗಿ ಅವರ ಮೊದಲಾದವರ ಲೇಖನಗಳು, ಹಳಗನ್ನಡ ಕಾವ್ಯ ಸಂಗ್ರಹಗಳು, ಇರುವಾಗ ಪ್ರತ್ಯೇಕವಾಗಿ ಇಂತಹ ಕೋಶದ ಅಗತ್ಯವೇನಿರುತ್ತದೆ?

ಈಗ ಮತ್ತೊಮ್ಮೆ ಲೇಖಕರ ಆರಂಭದಲ್ಲಿ ಹೇಳಿರುವ ಮಾತುಗಳನ್ನು ನೆನಪಿಸಿಕೊಳ್ಳೋಣ.

"ಕೆಲವರಿಗೆ ಪರಿಕಲ್ಪನೆ ಎಂದರೇನು ಎಂದು ಗೊತ್ತಿಲ್ಲ. ಸಾಮಾನ್ಯ ಮನುಷ್ಯರು ಇಂಥ ಕೋಶದ ಅಗತ್ಯವನ್ನು ತಿಳಿಯದಿದ್ದರೆ ತೊಂದರೆ ಇಲ್ಲ. ಆದರೆ ಸಾಹಿತ್ಯವನ್ನು ಬೋಧಿಸುವವರಿಗೂ ಹಳೆಗನ್ನಡದ ಪರಿಭಾಷೆಗಳು, ಅದರ ಇಂದಿನ ಚರಿತ್ರೆಯ ತಿಳುವಳಿಕೆ ಇಲ್ಲದೆ ಹೋಗಿರುವುದು ಸಮಕಾಲೀನ ದುರಂತಗಳಲ್ಲಿ ಒಂದು. ಅಂಥವರಿಂದ ಈ ಕೋಶವು ಅಭಿವೃದ್ಧಿ ಪ್ರಾಧಿಕಾರದಲ್ಲಿ ಪ್ರಕಟವಾಗುವುದು ತಪ್ಪಿ ಹೋಯಿತು. ಈ ವಿಷಯದಲ್ಲಿ ನನಗೆ ಖೇದವಿದೆ."

ಲೇಖಕರ ಈ ಮಾತನ್ನು ಲೇಖನದ ಆರಂಭದಲ್ಲಿಯೇ ನಾನು ಉಲ್ಲೇಖಿಸಿದ್ದೇನೆ ಆಗ ಅದು ಪಡೆದ ಅರ್ಥ ಒಂದಾದರೆ, ಇಷ್ಟೆಲ್ಲ ದೀರ್ಘ ವಿವರಣೆಯ ಅನಂತರ ಈ ಮಾತುಗಳು ಪಡೆಯುವ ಅರ್ಥವು ಬೇರೆಯದೇ ಆಗುತ್ತದೆ. ಪರಿಭಾಷೆಗಳ ಹಿಂದಿನ ಚರಿತ್ರೆಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸಾಕಷ್ಟು ಕೆಲಸವಾಗಿದೆ (ಅದನ್ನು ಈಗಾಗಲೇ ನಾನು ಹೇಳಿದ್ದೇನೆ) ಅದನ್ನು ಹಳೆಗನ್ನಡದ ಕುರಿತು ಆಸಕ್ತರು ಓದುತ್ತಾರೋ ಇಲ್ಲವೋ ಅದು ಬೇರೆ ಮಾತು. ಆದರೆ ಅದು ಸಮಕಾಲೀನ ದುರಂತಗಳ ಸಾಲಿಗೆ ಸೇರುವುದು ಹೇಗೆ? ಪರಿಕಲ್ಪನೆಗಳನ್ನು ತಿಳಿಸಿಕೊಡುತ್ತೇವೆ ಎಂದು ಹೊರಟವರೇ ಹೀಗೆ ತಪ್ಪು ತಪ್ಪಾಗಿ ಬರೆಯುತ್ತಾರೆ ಎಂದ ಮೇಲೆ ಉಳಿದವರ ಕಥೆ ಏನು? ಅಷ್ಟಾಗಿಯೂ ಪರಿಕಲ್ಪನೆ ಅಥವಾ ಪರಿಭಾಷೆ ಎಂದರೇನು ಎನ್ನುವುದನ್ನು ಸರಿಯಾಗಿ ಹೇಳಿದ ಮಾತ್ರಕ್ಕೆ ಸಮಸ್ಯೆ ಮುಗಿಯುದಿಲ್ಲ. ಅವು ನಮ್ಮ ಅನುಭವಕ್ಕೆ ಎಷ್ಟರಮಟ್ಟಿಗೆ ನಿಲುಕುತ್ತವೆ ಎನ್ನುವುದೂ ಮುಖ್ಯವಾಗುತ್ತದೆ.

ಕೋಶಕಾರರು ಹೇಳುವ ಹಾಗೆ ಸಮಕಾಲೀನ ದುರಂತವೇನಾದರೂ ಇದ್ದರೆ ಅದು ಬ್ರಿಟಿಷರು ಹೋದ 75 ವರ್ಷಗಳ ಆನಂತರವೂ ಅವರು ಆಳಿದ ಸುಮಾರು 300 ವರ್ಷಗಳ ಆಳ್ವಿಕೆಯ ಪ್ರಭಾವವನ್ನು ನಮ್ಮ ತಲೆಯಿಂದ ತೆಗೆದುಹಾಕುವುದಕ್ಕೆ ಹಾಗೂ ಅವರಿಗಿಂತ ಭಿನ್ನವಾಗಿ ನಮ್ಮ ಸಂಸ್ಕೃತಿ, ಭಾಷೆ – ಹಳೆಗನ್ನಡ ಸಾಹಿತ್ಯದ ಬಗೆಗೆ ನಮಗೆ ಯೋಚಿಸುವುದಕ್ಕೆ ಆಗದಿರುವುದೇ ಅಂತಹ ದುರಂತವಾಗಿದೆ. ಹೀಗೆ ಸ್ವತಂತ್ರವಾಗಿ ಯೋಚನೆ ಮಾಡದಿರುವುದರಿಂದ, ವಿಶ್ವದ ಅಷ್ಟೇಕೆ, ಏಷ್ಯಾದ 200 ವಿಶ್ವವಿದ್ಯಾಲಯಗಳ ಸಾಲಿಗೂ ಜೆ ಎನ್ ಯು ಸಹಿತವಾಗಿ ನಮ್ಮ ದೇಶದ ಯಾವ ವಿಶ್ವವಿದ್ಯಾಲಯವೂ ಸೇರುವುದಿಲ್ಲ. ಜಾಗತಿಕ ಮಟ್ಟದಲ್ಲಿ ಆ ಅರ್ಥದಲ್ಲಿ ನಾವೆಲ್ಲ ಇಂದಿಗೂ ಅನಕ್ಷರಸ್ಥರೇ ಆಗಿದ್ದೇವೆ. ಸಮಕಾಲೀನ ಸಾಮಾಜಿಕ ದುರಂತವೆಂದರೆ ಇದುವೇ ಆಗಿದೆ.

ಇನ್ನು ಈ ಗ್ರಂಥದ ಲೇಖಕರು ತಮ್ಮ ಕೃತಿಯು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಕಟವಾಗುವುದು ತಪ್ಪಿಹೋಯಿತು ಎಂದು ಖೇದ ವ್ಯಕ್ತಪಡಿಸಿದ್ದಾರೆ. ಇಷ್ಟೆಲ್ಲ ಹೇಳಿದ ಮೇಲೆ ಅಭಿವೃದ್ಧಿ ಪ್ರಾಧಿಕಾರದವರು ಈ ಪುಸ್ತಕವನ್ನು ಪ್ರಕಟ ಮಾಡುವುದಕ್ಕೆ ಏಕೆ ಹಿಂಜರಿದರೆಂಬುದೂ, ಹಾಗೆಯೇ ಈ ಕೋಶ ಹೇಗೆ ಇನ್ನೂ ಕೋಶಾವಸ್ಥೆಯಲ್ಲಿಯೇ ಇದೆ ಎನ್ನುವುದೂ ಓದುಗರಿಗೆ ಗೊತ್ತಾಗದಿರದು.

ಪರಾಮರ್ಶನ ಗ್ರಂಥಗಳು

1) ಕನ್ನಡ ಪರಿಷತ್ತಿನ ಕನ್ನಡ ನಿಘಂಟು (8.ಸಂಪುಟಗಳು)
2) ಜಯಚಂದ್ರ ಎಂ. ಎ.(ಸಂ), ತಿಲೋಯ ಪಣ್ಣತ್ತಿ.
3) ನರಸಿಂಹಚಾರ್ ಡಿ ಎಲ್– ಪಂಪಭಾರತ ದೀಪಿಕೆ
4) ಪಾಟೀಲ ಸೇಡ ಬಾಳ(ಅನು), ಮೊಕ್ಷಶಾಸ್ತ್ರ.
5) ಬೆಳ್ಳಾವೆ ವೆಂಕಟನಾರಾಯಣಪ್ಪ– ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ
6) ಶಾಂತಿರಾಜ ಶಾಸ್ತ್ರೀ ಎರ್ತೂರು, ಮಹಾಪುರಾಣ.
7) ಸ್ವಸ್ತಿ ಶ್ರೀ ಚಾರುಭಟ್ಟಾರಕ ಸ್ವಾಮೀಜಿ(ಸಂ), ಧವಲತ್ರಯ ಗ್ರಂಥ ಪ್ರವೇಶ.
8) V. S. Sunkthankar – On The Meaning Of the Mahabharata

✠✠✠

ತೃಷಿತ ತಿರೆಯಲಿ
ವರ್ಷ ಸಿಂಚನ
ಹರ್ಷಿತ ಹುಲ್ಲಿನಲಿ
ಹೊಸ ರೋಮಾಂಚನ

ನವ ಚಾರಿತ್ರಿಕತೆ : ಈಗಿನ ಸಾಹಿತ್ಯ ಚಳುವಳಿ

ಡಾ. ಬಿ. ಜನಾರ್ದನ ಭಟ್
ಅಕ್ಷರ, ದೇವಸ್ಥಾನದ ರಸ್ತೆ, ಅಂಚೆ: ಬೆಳ್ಮಣ್ಣು–576111
ಉಡುಪಿ ಜಿಲ್ಲೆ.

ಹಿಂದಣ ಹೆಜ್ಜೆಯ ನೋಡಿ ಕಂಡಲ್ಲದೆ ನಿಂದ ಹೆಜ್ಜೆಯನರಿಯಬಾರದು. – ಅಲ್ಲಮಪ್ರಭು

ಭಾಗ : ಒಂದು

ಪ್ರಸ್ತಾವನೆ

ಧಾರವಾಡದ ಸಾಹಿತ್ಯ ಸಂಭ್ರಮದಲ್ಲಿ (2019) ಕೆಲವು ಪ್ರಶ್ನೆಗಳು ಉದ್ಭವಿಸಿದ ಅಂತರ ಕೆ.ವಿ. ತಿರುಮಲೇಶ್ ಅವರು ಬಹಳ ಮುಖ್ಯ ಸಲಹೆಯೊಂದನ್ನು ನೀಡಿದರು:

"ನೀವು ನವ್ಯವನ್ನು ಬಯ್ಯಿರಿ, ಅಥವಾ ಬಂಡಾಯವನ್ನು ತೆಗಳಿರಿ; ಪ್ರಗತಿಶೀಲವನ್ನು ಕಡೆಗೈಸಿರಿ, ಅಥವಾ ನವೋದಯವನ್ನು ಹೀಯಾಳಿಸಿರಿ; ಹಳೆಯ ಸಾಹಿತ್ಯವನ್ನೆಲ್ಲ ದೂರೀಕರಿಸಿರಿ, ಹೊಸ ಸಾಹಿತ್ಯವನ್ನು ಕೀಳ್ಗಣಿಸಿರಿ; ಲಿಖಿತ ಸಾಹಿತ್ಯದ ವಿರುದ್ಧ ಮೌಖಿಕ ಸಾಹಿತ್ಯವನ್ನು ಎತ್ತಿಕಟ್ಟಿರಿ, ಎಡಬಲವೆಂದು ಹೋರಾಡಿರಿ, ಸಹಿಷ್ಣುತೆಗಾಗಿ ಅಸಹಿಷ್ಣುವಾಗಿರಿ, ರಾಷ್ಟ್ರೀಯತೆಯ ವಿರುದ್ಧ ಸಂವಿಧಾನವನ್ನು ನಿಲ್ಲಿಸಿ, ನೀವೇ ಸರಿಯೆಂದೂ ಎದುರಾಳಿ ತಪ್ಪೆಂದೂ ಮೇಜು ಕುಟ್ಟಿರಿ, ಏನು ಬೇಕಾದರೂ ಮಾಡಿ, ಆದರೆ ನನ್ನ ವಿನಂತಿ ಇಷ್ಟೆ: ನೀವು ಯಾವ ಸಾಹಿತ್ಯವನ್ನು ತೆಗಳುತ್ತೀರೋ ಅದನ್ನು ಮೊದಲು ಓದಿ ತಿಳಿದುಕೊಳ್ಳಿ. ಇದೊಂದು ಪ್ರಾಥಮಿಕ ಅಗತ್ಯ. ತಿಳಿದುಕೊಳ್ಳುವುದು ಎಂದರೆ ಆ ಸಾಹಿತ್ಯದ ಪಠ್ಯಗಳು ಯಾವುದು, ಅವು ಏನು ಹೇಳುತ್ತವೆ, ಅವುಗಳ ಸ್ವರೂಪವೇನು, ಅವು ಯಾವ ಕಾಲಘಟ್ಟದಲ್ಲಿ ಬಂದುವು, ಯಾಕೆ ಬಂದುವು, ಅವು ಇಲ್ಲದಿದ್ದರೂ ಆಗುತ್ತಿತ್ತೆ, ಅವು ಸಾಹಿತ್ಯದ ಕುರಿತು ನಮಗಿದ್ದ ಕಲ್ಪನೆಗಳನ್ನು ಸ್ವಲ್ಪವಾದರೂ ಬದಲಾಯಿಸಿದುವೆ, ಹೌದು ಎಂದಾದರೆ ಯಾವ ರೀತಿಯಲ್ಲಿ, ಆಯಾ ಕಾಲದ ಲೇಖಕರು ಎದುರಿಸಿದ ಸಮಸ್ಯೆಗಳೇನು, ವಿಮರ್ಶಕರು ಅವರನ್ನು ವಿರೋಧಿಸಿದರೆ, ಗುರುತಿಸಿದರೆ ಎಂದು ಮುಂತಾಗಿ ವಿಶ್ಲೇಷಿಸುವುದು. ಒಂದನ್ನು ಇನ್ನೊಂದರ ಜತೆ ಹೋಲಿಸುವಾಗ ಅರ್ಥಪೂರ್ಣವಾಗಿರುವುದು ಅಗತ್ಯ, ಭಾವುಕವಾಗಿ ಅಲ್ಲ." (ಕನ್ನಡಪ್ರಭ: 27.1.2019)

ಈ ಮಾತುಗಳು ಕನ್ನಡ ಸಾಹಿತ್ಯದ ಪ್ರಚಲಿತ ಸನ್ನಿವೇಶವನ್ನು ಸರಿಯಾಗಿ ಗ್ರಹಿಸಿವೆ. ಹೀಗಿರುವುದರಿಂದಲೇ ಸಮಕಾಲೀನ ಸಾಹಿತ್ಯವನ್ನು ಗ್ರಹಿಸಲು ಕಣ್ಣೂರು ವಿಶ್ವವಿದ್ಯಾಲಯವು ಏರ್ಪಡಿಸಿರುವ ಈ ವಿಚಾರಸಂಕಿರಣಕ್ಕೆ ಮಹತ್ವ ಬರುವುದು. ಸಮಕಾಲೀನ ಸಾಹಿತ್ಯದ ಬಗ್ಗೆ ಚಿಂತನ ಮಂಥನ ನಡೆಸುವಾಗ ನಾವು ಗಮನಿಸಬಹುದಾದ ಕೆಲವು ವಿಚಾರಗಳ ಬಗ್ಗೆ ನನ್ನ ಚಿಂತನೆಗಳನ್ನು ನಿಮ್ಮ ಜತೆಗೆ ಹಂಚಿಕೊಳ್ಳಲು ಬಯಸುತ್ತೇನೆ.

ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಚಳುವಳಿಗಳ ಮುಖಾಂತರ ಅಧ್ಯಯನ

ಮಾಡುವುದು ಒಂದು ಕ್ರಮ. ಹಾಗೆ ಮಾಡಿದ್ದಲ್ಲದೆ ಸಾಹಿತ್ಯದ ಅಭ್ಯಾಸಕ್ಕೆ ಒಂದು ಚೌಕಟ್ಟು ದೊರೆಯುವುದಿಲ್ಲ. ಜಾಗತಿಕ ಸಾಹಿತ್ಯದಲ್ಲೆಲ್ಲ ಈ ಅಧ್ಯಯನ ಕ್ರಮವೇ ಚಾಲ್ತಿಯಲ್ಲಿರುವುದು. ನಾವು ವರ್ಲ್ಡ್ ಡ್ರಾಮ, ಅಥವಾ ಯುರೋಪಿಯನ್ ಕ್ಲಾಸಿಕ್ಸ್ ಹೀಗೆಲ್ಲ ಪ್ರಕಾರ (genre) ಗಳ ಅಧ್ಯಯನ ಮಾಡಲಿ, ಅಮೇರಿಕನ್ ಸಾಹಿತ್ಯ ಇತ್ಯಾದಿ ದೇಶ ಪ್ರದೇಶಗಳ ಅಧ್ಯಯನ ಮಾಡಲಿ ಸಾಹಿತ್ಯದ ಕಾಲಘಟ್ಟಗಳನ್ನು ಮತ್ತು ಚಳುವಳಿಗಳನ್ನು ಗಮನಿಸದೆ ಸಾಹಿತ್ಯವನ್ನು ಒಂದು ನಿರ್ವಾತ ಸನ್ನಿವೇಶದಲ್ಲಿ ಅಧ್ಯಯನ ಮಾಡಲು ಸಾಧ್ಯವಾಗುವುದಿಲ್ಲ.

ಹೀಗಿರುವಾಗ ಸಮಕಾಲೀನ ಕನ್ನಡ ಸಾಹಿತ್ಯವನ್ನು ಗ್ರಹಿಸಲು ಆಧುನಿಕ ಕನ್ನಡ ಸಾಹಿತ್ಯದ ಚಳುವಳಿಗಳನ್ನು ಒಮ್ಮೆ ಗಮನಿಸಿಕೊಳ್ಳುವುದು ಸೂಕ್ತವಾಗುತ್ತದೆ. ಜತೆಗೆ ಆ ಚಳುವಳಿಗಳ ಲಕ್ಷಣಗಳ ಜತೆಗೆ ತುಲನಾತ್ಮಕವಾಗಿ ನೋಡಿದಾಗಲೂ ಸಮಕಾಲೀನ ಸಾಹಿತ್ಯ ಸಂದರ್ಭದ ಕೆಲವು ಲಕ್ಷಣಗಳು ಹೆಚ್ಚು ಸ್ಪಷ್ಟವಾಗುತ್ತವೆ.

ಅದಕ್ಕಿಂತಲೂ ಮೊದಲು ಕನ್ನಡ ಸಾಹಿತ್ಯದ ಕೆಲವು ದೊಡ್ಡ ಚಳುವಳಿಗಳಿಗೆ ಸಾಮಾಜಿಕ – ಧಾರ್ಮಿಕ ಚಳುವಳಿಗಳು ಪ್ರೇರಣೆ ನೀಡಿದವು ಎನ್ನುವುದನ್ನು ಸುಮ್ಮನೆ ಗಮನಿಸೋಣ. ಉದಾಹರಣೆಗೆ ಹನ್ನೊಂದನೆಯ ಶತಮಾನದ ವಚನ ಸಾಹಿತ್ಯ ಒಂದು ಧಾರ್ಮಿಕ ಚಳುವಳಿಯ ಉತ್ಪನ್ನವಾಗಿ ಬಂತು. 16 ನೆಯ ಶತಮಾನದ ವಿಜಯನಗರ ಸಾಮ್ರಾಜ್ಯದ ಉತ್ಕರ್ಷಕ್ಕೂ, ದಾಸ ಸಾಹಿತ್ಯಕ್ಕೂ ಸಂಬಂಧವಿದೆ. ಭಕ್ತಿ ಚಳುವಳಿಗಳು ಮಧ್ಯಕಾಲೀನ ಪ್ರಭುತ್ವಗಳು ಹುಟ್ಟುಹಾಕಿದ ಮತೀಯ ಆಕ್ರಮಣಕ್ಕೆ ಪ್ರತಿಕ್ರಿಯೆಯಾಗಿ, ಸ್ವಧರ್ಮವನ್ನು ಉಳಿಸಿಕೊಳ್ಳುವ ರಕ್ಷಣಾತ್ಮಕ ಉದ್ದೇಶದಿಂದ ಹುಟ್ಟಿಕೊಂಡ ಚಳುವಳಿಗಳು ಎಂದು ಕೂಡ ನೋಡಬಹುದು.

ನಂತರದ ಅತಿದೊಡ್ಡ ರಾಜಕೀಯ ಸ್ಥಿತ್ಯಂತರವಾದ ಟಿಪ್ಪು ಸುಲ್ತಾನನ ಆಡಳಿತ ಮತ್ತು ಬ್ರಿಟಿಷರ ಉತ್ಕರ್ಷದ ಪ್ರಾರಂಭದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರ ನಿದ್ರಾವಸ್ಥೆಯಲ್ಲಿತ್ತು. ನಿಧಾನವಾಗಿ ಮಿಷನರಿಗಳ ಚಟುವಟಿಕೆ ಹಾಗೂ ಶೈಕ್ಷಣಿಕ ಪ್ರಯತ್ನದಿಂದ ಹೊಸ ಸಾಹಿತ್ಯದ ಸೃಷ್ಟಿಗೆ ಪ್ರೇರಣೆ ದೊರಕಿ ಆಧುನಿಕ ಸಾಹಿತ್ಯ ಪ್ರಸ್ಥಾನಗಳು ಪ್ರಾರಂಭವಾದವು.

ಸಮಾಜದಲ್ಲಿ ನಡೆಯುವ ದೊಡ್ಡ ಸ್ಥಿತ್ಯಂತರಗಳು ಸಾಹಿತ್ಯದಲ್ಲಿ ಹೊಸ ಸಂಚಲನಗಳಿಗೆ ಕಾರಣವಾಗುತ್ತವೆ ಎಂದು ಊಹಿಸಬಹುದು. ಆದರೆ ಸಾಹಿತ್ಯದ ಮೂಲಕ ಪ್ರತಿಕ್ರಿಯಿಸಲು ಮತ್ತು ದಾಖಲಿಸಲು ಒಂದು ಬಗೆಯ ನಾಯಕತ್ವ ಅಥವಾ ಪ್ರೇರಣೆಯೂ ಬೇಕಾಗುತ್ತದೆ. ಹಾಗೆ ಪ್ರೇರಣೆ ದೊರಕಿದಾಗ ಅದಕ್ಕೊಂದು ಚಳುವಳಿಯ ಸ್ವರೂಪ ಬರುತ್ತದೆ.

ಒಟ್ಟಿನಲ್ಲಿ ಎಲ್ಲ ಚಳುವಳಿಗಳ ಗುರಿ ಎರಡು –

ಅ) ವಚನ ಸಾಹಿತ್ಯ ಚಳುವಳಿಯಲ್ಲಿ ಗುರುತಿಸಬಹುದಾದಂತೆ ಸಮಾಜ ಅಥವಾ ಸಾಹಿತ್ಯದಲ್ಲಿ ಸಂಪೂರ್ಣ ಬದಲಾವಣೆ ಮಾಡುವುದು.

ಆ) ದಾಸ ಸಾಹಿತ್ಯದ ಭಕ್ತಿ ಪಂಥದಲ್ಲಿ ಗುರುತಿಸಬಹುದಾದಂತೆ ಸದ್ಯ ಅಸ್ತಿತ್ವದಲ್ಲಿರುವ ಮೌಲ್ಯ ಮತ್ತು ಸ್ವರೂಪಗಳನ್ನು ಸುಧಾರಿಸುವುದು.

ಒಂದೇ ಕಾಲದಲ್ಲಿ ನೂರಾರು ಸಾಹಿತ್ಯ ಕೃತಿಗಳು ರಚನೆಯಾಗುವ ಆಧುನಿಕ ಕಾಲದಲ್ಲಿ ಸಾಹಿತ್ಯ ಚಳುವಳಿಗಳಲ್ಲಿ ಕೆಲವು ಸಮಾನ ಲಕ್ಷಣಗಳನ್ನು ಗುರುತಿಸಬಹುದು:

1. ಎಲ್ಲ ಚಳುವಳಿಗಳಿಗೂ ಗುರಿ ಅಥವಾ ಉದ್ದೇಶಗಳಿವೆ.
2. ಅವುಗಳನ್ನು ಪ್ರೇರಿಸುವ ತತ್ತ್ವಾದರ್ಶಗಳಿವೆ.
3. ಚಳುವಳಿಗಳನ್ನು ಹುಟ್ಟುಹಾಕುವ ಅಥವಾ ಮುನ್ನಡೆಸುವ ನಾಯಕರು ಮತ್ತು

ಸಂಘಟನೆಗಳಿರುತ್ತವೆ.

4. ಚಳುವಳಿಗಳಿಗೆ ತಮ್ಮದೇ ಆದ ಕಾರ್ಯತಂತ್ರಗಳಿರುತ್ತವೆ. (ಶ್ರೀಧರ ಹೆಗಡೆ ಭದ್ರನ್: 2018)

****

ಭಾಗ : ಎರಡು

ಕಳೆದ ಶತಮಾನದ ಸಾಹಿತ್ಯ : ಚಳುವಳಿಗಳ ಮೂಲಕ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಇದುವರೆಗಿನ ಸಾಹಿತ್ಯ ಚಳುವಳಿಗಳನ್ನು ಗಮನಿಸಿದರೆ 1900 ರಿಂದ 2000 ದವರೆಗಿನ ಒಂದು ಶತಮಾನದಲ್ಲಿ ನಾಲ್ಕು ಮುಖ್ಯ ಘಟ್ಟಗಳನ್ನು ಗುರುತಿಸಬಹುದು: 1.ನವೋದಯ 2. ಪ್ರಗತಿಶೀಲ 3. ನವ್ಯ 4. ದಲಿತ ಬಂಡಾಯ

ನವೋದಯ

ನವೋದಯ ಅಥವಾ ಖಿಜಟಿಚಿಛಿಚಿಟಿಛಿಜ ಅಂದರೆ ಹೊಸ ಜ್ಞಾನಾನ್ವೇಷಣೆ, ಕಲೆ, ಸಾಹಿತ್ಯಗಳಲ್ಲಿ ಮತ್ತೆ ಆಸಕ್ತಿ ಗರಿಕೆದರಿದ ಒಂದು ಸ್ಥಿತಿ. ಕನ್ನಡ ಸಾಹಿತ್ಯ 1700 ರಿಂದ 1890 ರವರೆಗೆ ನಿದ್ರಾವಸ್ಥೆಯಲ್ಲಿ ಅಥವಾ ಚಲನರಹಿತವಾಗಿದ್ದುದು ಒಮ್ಮೆಲೆ ಹೊಸ ಸಾಹಿತ್ಯಾಸಕ್ತಿ, ಬರವಣಿಗೆಗೆ ತೆರೆದುಕೊಂಡ ಕಾರಣ ನವೋದಯ ಎನ್ನುವ ಹೆಸರನ್ನು ಇರಿಸಲಾಗಿದೆ.

ನವೋದಯ ಸಾಹಿತ್ಯ ಪಂಥವನ್ನು ಆಧುನಿಕ ಅಥವಾ ರಮ್ಯ ಸಾಹಿತ್ಯ ಎಂದು ಕೂಡ ಕರೆಯುವುದಿದೆ. 1900 ರಿಂದ 1950 ರವರೆಗಿನ ಸುಮಾರು ಅರ್ಧ ಶತಮಾನ ಕಾಲಾವಧಿಯಲ್ಲಿ ಮೂರು ತಲೆಮಾರುಗಳಲ್ಲಿ ವಿಸ್ತರಿಸಿದ್ದ ಬಹಳ ವಿಸ್ತಾರವಾದ ತಳಹದಿಯ ಸಾಹಿತ್ಯ ಪಂಥ ನವೋದಯದ್ದು. ಲಿಬರಲ್ ಹ್ಯೂಮನಿಸಮ್ (ಉದಾರ ಮಾನವತಾವಾದ) ಇದರ ತಾತ್ವಿಕತೆಯಾಗಿತ್ತು. ಅಂದರೆ ಸಮಾಜದಲ್ಲಿ ಸಮಾನತೆ, ಸರಕಾರದಲ್ಲಿ ಪ್ರಜಾಪ್ರಭುತ್ವ ಮತ್ತು ಧರ್ಮ ನಿರಪೇಕ್ಷತೆಗಳು ಇದರ ತಾತ್ವಿಕ ತಳಹದಿಯಾಗಿದ್ದವು. ಆದರೆ ಈ ಚಳುವಳಿಯ ಕಾಲದಲ್ಲಿ ಬ್ರಿಟಿಷರ ಆಳ್ವಿಕೆ ಇದ್ದುದರಿಂದ ಈ ಅಂಶವನ್ನು (ರಾಜಕೀಯ ಪಾರತಂತ್ರ್ಯವನ್ನು) ನವೋದಯ ಸಾಹಿತ್ಯ ಪ್ರಧಾನವಾಗಿ ಪ್ರಸ್ತಾಪಿಸದೆ ಸಮಾಜಿಕ ಅನಿಷ್ಟಗಳನ್ನು ಖಂಡಿಸತೊಡಗಿತು.

ಈ ಚಳುವಳಿಯ ಕಾಲದಲ್ಲಿ ಸಣ್ಣಕತೆ, ಕಾದಂಬರಿ ಮತ್ತು ಕಿರುಗವನಗಳೆಂಬ ಹೊಸರೂಪಗಳ ಆವಿಷ್ಕರಣವಾಯಿತು. ನವೋದಯದ ಕಾವ್ಯದಲ್ಲಿ ಇಂಗ್ಲೆಂಡಿನ ರೊಮ್ಯಾಂಟಿಕ್ ಸಂಪ್ರದಾಯದ ಭಾವಗೀತಾತ್ಮಕ ಕವಿತೆಗಳು ಪ್ರಧಾನವಾಗಿದ್ದರೆ, ಸಣ್ಣ ಕತೆ ಮತ್ತು ಕಾದಂಬರಿಗಳಲ್ಲಿ ವಾಸ್ತವವಾದ ಮತ್ತು ಸುಧಾರಣಾವಾದಗಳು ಕಾಣಿಸಿಕೊಂಡವು. ಹಾಗಾಗಿ ಈ ಪಂಥದ ಕಾವ್ಯದ ಲಕ್ಷಣಗಳು ಬೇರೆ, ಗದ್ಯದ ಲಕ್ಷಣಗಳು ಬೇರೆ. ಕವಿತೆಯಲ್ಲಿ ವಿಶ್ವಾತ್ಮಕ ತಾತ್ವಿಕತೆ ಮತ್ತು ರಾಷ್ಟ್ರೀಯತೆ ಪ್ರಧಾನವಾದರೆ ಗದ್ಯದಲ್ಲಿ ಪ್ರಾದೇಶಿಕತೆ ಮತ್ತು ಸಮಕಾಲೀನ ಬದುಕಿನ ಪರಿಶೀಲನೆ ಪ್ರಧಾನವಾಗಿದ್ದವು.

ನವೋದಯದಲ್ಲಿ ಸಂವಹನವು ಮುಖ್ಯ ಅಂಶವಾಗಿತ್ತು. ಮುಂದೆ ಬಂದ ನವ್ಯ ಕಾವ್ಯ ಕವಿತೆಯು ಸ್ವಯಂಪೂರ್ಣ ಶಿಲ್ಪವೆಂಬ ನಿಲುವಿಗೆ ಬಂದು ಜಟಿಲವಾದುದನ್ನು ಹೋಲಿಸಿದರೆ, ನವೋದಯ ಕಾವ್ಯದ ನಿಲುವೇ ಆರೋಗ್ಯಕರವಾಗಿತ್ತೇನೋ ಎಂಬ ಚಿಂತನೆ

ಈಗ ಮೂಡುತ್ತಿದೆ (ಡಾ. ಎಚ್.ಎಸ್. ರಾಘವೇಂದ್ರರಾವ್. ಸಾಹಿತ್ಯ ಚಳುವಳಿಗಳು, 2018).

ಪ್ರಗತಿಶೀಲ ಚಳುವಳಿ

ಸುಮಾರು 1943 ರಿಂದ 1950ರ ವರೆಗಿನ ಅಲ್ಪಾವಧಿಯಲ್ಲಿ ಗಮನಸೆಳೆದ ಸಾಹಿತ್ಯ ಚಳುವಳಿ ಪ್ರಗತಿಶೀಲ ಚಳುವಳಿ. ಇದು ಸಮಾಜವಾದೀ ಸಿದ್ಧಾಂತಗಳ ತಾತ್ವಿಕ ನೆಲೆಗಟ್ಟನ್ನು ಹೊಂದಿದ್ದು ಆರ್ಥಿಕ ಅಸಮಾನತೆಯ ಬಗ್ಗೆ ಹೆಚ್ಚು ಚಿಂತನೆ ನಡೆಸಿದ್ದ ಸಾಹಿತ್ಯಿಕ ಚಳುವಳಿಯಾಗಿತ್ತು. ಜನತೆಗೆ ಸರಿಯಾದ ಶಿಕ್ಷಣ ನೀಡುವುದು ಮತ್ತು ಸಮಾಜಕ್ಕೆ ಸ್ಫೂರ್ತಿ ನೀಡುವುದು ಕಲೆ ಮತ್ತು ಸಾಹಿತ್ಯಗಳ ಗುರಿ ಎನ್ನುವುದು ಈ ಪಂಥದ ಚಿಂತನೆಯಾಗಿತ್ತು. ನಿರಂಜನ, ಅನಕೃ, ಕಟ್ಟೀಮನಿ, ಅಡಿಗರಂಥ ಮುಖ್ಯ ಸಾಹಿತಿಗಳು ಈ ಚಿಂತನೆಯಿಂದ ಪ್ರಗತಿಶೀಲ ಸಾಹಿತ್ಯವನ್ನು ರಚಿಸಿದ್ದರು.

ನವ್ಯ ಸಾಹಿತ್ಯ

ಇದು ದೇಶದ ರಾಜಕೀಯ ಅಥವಾ ಸಾಮಾಜಿಕ ಚಳುವಳಿಗಳಿಂದ ಪ್ರೇರಿತವಾದುದಾಗಿರದೆ, ಪಾಶ್ಚಾತ್ಯ modernist movement ಚಳುವಳಿಯಿಂದ ಪ್ರೇರಿತವಾದ ಸಾಹಿತ್ಯ ಚಳುವಳಿ. ಮುಖ್ಯವಾಗಿ ಇದು ನವೋದಯ ಕಾವ್ಯಕ್ಕಿಂತ ಭಿನ್ನವಾದ ಕಾವ್ಯಶಿಲಿಯನ್ನು ಸೂಚಿಸಲು ಬಳಕೆಯಾಗಿರುವ ಶಬ್ದ.

1950 ರಿಂದ 1980 ರವರೆಗೆ ವಿ.ಕೃ. ಗೋಕಾಕ್, ಗೋಪಾಲಕೃಷ್ಣ ಅಡಿಗ, ಯು.ಆರ್. ಅನಂತಮೂರ್ತಿ, ಲಂಕೇಶ್, ಆಲನಹಳ್ಳಿ, ರಾಮಚಂದ್ರ ಶರ್ಮ, ಎ.ಕೆ. ರಾಮಾನುಜನ್ ಮುಂತಾದವರಿಂದ ಬೆಳೆಸಲ್ಪಟ್ಟ ಸಾಹಿತ್ಯ ಪಂಥ ನವ್ಯ ಸಾಹಿತ್ಯ. ಸಮಾಜದಿಂದ ದೂರಸರಿದ ವ್ಯಕ್ತಿತ್ವದ ಕೀರ್ತನೆ ಇದರ ಪ್ರಧಾನ ಲಕ್ಷಣವಾಗಿದೆ.

ತೇಜಸ್ವಿಯವರು 1983ರ ತಮ್ಮ 'ಅಬಚೂರಿನ ಪೋಸ್ಟಾಫೀಸು' ಕಥಾಸಂಕಲನದ ಮುನ್ನುಡಿಯಲ್ಲಿ ನವ್ಯ ಸಾಹಿತ್ಯದ ಮಿತಿಗಳನ್ನು ಹೇಳಿ ಅದರಿಂದ ದೂರ ಸರಿಯುವ ತಮ್ಮ ನಿರ್ಧಾರವನ್ನು ಪ್ರಕಟಿಸಿದರು. ಅದರ ಸಾಂಕೇತಿಕ ಶೈಲಿ, ತಂತ್ರಗಳು ಯಾಂತ್ರೀಕೃತವಾಗಿವೆ, ಅದರ ಕ್ರಾಂತಿಕಾರಕತನ ಸಾಹಿತ್ಯದ ಮಟ್ಟಿಗಷ್ಟೇ ಸೀಮಿತವಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ದಲಿತ ಬಂಡಾಯ

1980 ರಿಂದ 2000 ದವರೆಗಿನ ಕಾಲಾವಧಿಯನ್ನು ಸ್ಥೂಲವಾಗಿ ದಲಿತ ಬಂಡಾಯದ ಕಾಲಘಟ್ಟ ಎಂದು ಕರೆಯಬಹುದು.

ದಲಿತ ಸಾಹಿತ್ಯವು ಜಾತಿ ವೈಷಮ್ಯವನ್ನು ಮುಖ್ಯವಾದ ಸಾಮಾಜಿಕ ಪಿಡುಗಾಗಿ ಪರಿಗಣಿಸಿದರೆ, ಬಂಡಾಯ ಸಾಹಿತ್ಯವು ವರ್ಗವನ್ನು ಮುಖ್ಯ ಪಿಡುಗಾಗಿ ಪರಿಗಣಿಸುವುದರಿಂದ ಇವರ ನಡುವೆ ಹೊಂದಾಣಿಕೆಗೆ ಸಮಾನ ನೆಲೆ ಇಲ್ಲವೆಂದೇ ಹೇಳಬಹುದು.

ಬಂಡಾಯ ಸಾಹಿತ್ಯವು ಎಡಪಂಥೀಯ ದೃಷ್ಟಿಕೋನದ ಬ್ರಾಹ್ಮಣೇತರ ಚಳುವಳಿ. ಬಹುಶಃ ಎಡಪಂಥೀಯ ಚಳುವಳಿಯೇ ಆಗಿದ್ದ ಪ್ರಗತಿಶೀಲಕ್ಕೂ, ಬಂಡಾಯಕ್ಕೂ ಇರುವ ವ್ಯತ್ಯಾಸ ಇದೇ ಆಗಿದೆ. ಪ್ರಗತಿಶೀಲರಲ್ಲಿ ಹೆಚ್ಚಿನವರು ಮೇಲುವರ್ಗದಿಂದ ಬಂದವರೇ ಆಗಿದರು. ಬಂಡಾಯವು ವರ್ಗಭೇದದ ಜತೆಗೆ ಬ್ರಾಹ್ಮಣ್ಯವನ್ನು ಅಂದರೆ ಯಜಮಾನ

ಸಂಸ್ಕೃತಿಯ ಶೋಷಣೆಯನ್ನು ಪ್ರಧಾನವಾಗಿ ವಿರೋಧಿಸುತ್ತದೆ.

ದಲಿತ ಸಾಹಿತ್ಯಕ್ಕೂ, ಮಹಿಳಾ ಸಾಹಿತ್ಯಕ್ಕೂ, ಮುಸ್ಲಿಂ ಸಾಹಿತ್ಯಕ್ಕೂ ಈ ಅಂಶವು ಸಮಾನ ಪ್ರಣಾಳಿಕೆಯಾದ ಕಾರಣ 'ದಲಿತ ಬಂಡಾಯ'ದ ಜತೆಗೆ ಮಹಿಳಾ ಚಳುವಳಿಯೂ, ಮುಸ್ಲಿಂ ಲೇಖಕರೂ ಗುರುತಿಸಿಕೊಂಡರು. ಇಲ್ಲಿ ಬ್ರಾಹ್ಮಣ್ಯ ಅಂದರೆ ಬ್ರಾಹ್ಮಣ ಜಾತಿ ಎಂಬ ಅರ್ಥದಲ್ಲಿ ಬಳಕೆಯಾಗುವ ಪರಿಕಲ್ಪನೆಯಲ್ಲ. ಅಂಬೇಡ್ಕರ್ ಅವರು ಹೇಳಿರುವ ಬ್ರಾಹ್ಮಿನಿಸಂನ ಲಕ್ಷಣಗಳು ಇವು:

1. ಅಸಮಾನತೆಯನ್ನು ನಿರಂತರವಾಗಿ ಪೋಷಿಸಿಕೊಂಡು ಬರುವುದು.
2. ಅಸ್ಪೃಷ್ಯರನ್ನು ಮತ್ತು ಶೂದ್ರರನ್ನು ಸಂಪೂರ್ಣವಾಗಿ ನಿರಾಯುಧರನ್ನಾಗಿಸುವುದು.
3. ಅಧಿಕಾರಸ್ಥಾನಗಳನ್ನು ಶೂದ್ರರು ಮತ್ತು ಅಸ್ಪೃಶ್ಯರು ಹೊಂದದಂತೆ ಷಡ್ಯಂತ್ರಗಳನ್ನು ರಚಿಸುವುದು.
4. ಶೂದ್ರರು ಮತ್ತು ಅಸ್ಪೃಶ್ಯರಿಗೆ ಶಿಕ್ಷಣ ದೊರೆಯದಂತೆ ನಿಷೇಧ ಹೇರುವುದು.
5. ಶೂದ್ರರಿಗೆ ಮತ್ತು ಅಸ್ಪೃಶ್ಯರಿಗೆ ಆಸ್ತಿ ನಿರಾಕರಣೆ ಮಾಡುವುದು.
6. ಮಹಿಳೆಯರಿಗೆ ಸ್ವಾತಂತ್ರ್ಯವನ್ನು ನಿರಾಕರಣೆ ಮಾಡುವುದು.(ಡಾ. ಪುರುಷೋತ್ತಮ ಬಿಳಿಮಲೆ. ಸಾಹಿತ್ಯ ಚಳುವಳಿಗಳು, 2018).)

ದಲಿತ ಸಾಹಿತ್ಯಕ್ಕೆ ಅದರದೇ ಆದ ಸತ್ವ, ಗುಣಗಳಿರುವಂತೆ ಬಂಡಾಯವು ಸಾಹಿತ್ಯ ಕೃತಿಗಳಲ್ಲಿ ಸ್ಥಾಪಿತವಾಗಿರುವುದು ಇದೆಯೆ ಎಂಬ ಪ್ರಶ್ನೆಗಳು ಉದ್ಭವಿಸಿವೆ. ದಲಿತ ಬಂಡಾಯದ ಮಿತಿಯನ್ನು ಡಾ.ಬಿಳಿಮಲೆಯವರ ಈ ಮಾತಿನಲ್ಲಿ ಗುರುತಿಸಬಹುದು: "...ಜೀವನಾನುಭವ ದಿಂದ ಹೇಳಬೇಕಾದ್ದನ್ನು ಸಿದ್ಧಾಂತದ ಸಹಾಯದಿಂದ ಹೇಳಬೇಕಾಯಿತು. ಬಂಡಾಯ–ದಲಿತರಲ್ಲಿ ಅನೇಕರಿಗೆ ಸಾಹಿತ್ಯ ನಿರ್ಮಿತಿಗೆ ಅಗತ್ಯವಾದ ಒಂದು ಸಾಮಾಜಿಕ ಹಿನ್ನೆಲೆಯೆ ತಪ್ಪಿಹೋಯಿತು. 'ಹೊಸ ಎಚ್ಚರವಿಲ್ಲದ ಸಾಮಾಜಿಕ' ಜನರ ಸೈದ್ಧಾಂತಿಕತೆಗೂ ಬಲವಾದ ಬಿರುಕು ಗೋಚರಿಸಿತು. ಈ ಬಿರುಕಿನಿಂದಾಗಿ ಅಕ್ಷರಸ್ಥ ಕ್ರಾಂತಿಕಾರೀ ಬರಹಗಾರರ ವರ್ಗಕ್ಕೂ, ಅನಕ್ಷರಸ್ಥ ಗ್ರಾಮೀಣ ಜನತೆಗೂ ಮಧ್ಯೆ ಯಾವೊಂದು ಗಂಭೀರ ಸಂವಾದವೂ ನಡೆಯದೆ ಹೋಯಿತು."

ಚಳುವಳಿಗಳ ಅವಸಾನ

ಇಪ್ಪತ್ತನೆಯ ಶತಮಾನದ ಕೊನೆಯ ವೇಳೆಗೆ ದಲಿತ ಬಂಡಾಯ ಸಾಹಿತ್ಯ ಚಳುವಳಿಯ ಸತ್ವ ತೀರಿದಂತೆ ಕಾಣುತ್ತದೆ. ಇಪ್ಪತ್ತೊಂದನೆಯ ಶತಮಾನದ ಇದುವರೆಗಿನ ಎರಡು ದಶಕಗಳು ಚಳುವಳಿರಹಿತ ಕಾಲ ಎಂದು ಗುರುತಿಸಲ್ಪಟ್ಟಿದ್ದರೂ (ಶ್ರೀಧರ ಹೆಗಡೆ ಭದ್ರನ್, 2018) ಇದರಲ್ಲಿ ಚಳುವಳಿಗಳ ಅಂಶಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ದಲಿತ ಬಂಡಾಯ ಮತ್ತು ಅವುಗಳ ಜತೆಗಿರುವ ಮಹಿಳಾ ಮತ್ತು ಮುಸ್ಲಿಂ ಸಾಹಿತ್ಯ ಚಳುವಳಿಗಳೇ ಈಗಲೂ ಚಾಲ್ತಿಯಲ್ಲಿರುವ ಸಾಹಿತ್ಯ ಪಂಥ ಎನ್ನುವುದು ಆ ಚಳುವಳಿಗಳ ಜತೆಗೆ ಗುರುತಿಸಿಕೊಂಡು ಬರೆಯುತ್ತಿರುವವರ ನಂಬಿಕೆಯಾದರೆ, ದಲಿತ ಬಂಡಾಯದ ಕಾಲ ಮುಗಿದಿದೆ ಎನ್ನುವ ಅಭಿಪ್ರಾಯ ಹೆಚ್ಚಿನ ಸಾಹಿತ್ಯ ಚಿಂತಕರದು.

"ಚಳುವಳಿ ಎಂದಮೇಲೆ ಅದಕ್ಕೆ ಸಾಂಸ್ಥಿಕ ಸ್ವರೂಪ ಕ್ರಮೇಣವಾಗಿ ಕಾಣಿಸಿಕೊಳ್ಳುತ್ತದೆ. ಈ ಹಂತ ತಲುಪಿದ ಮೇಲೆ ಅವು ಕಾವು ಕಳೆದುಕೊಳ್ಳುತ್ತವೆ, ಕ್ಷೀಣವಾಗುತ್ತವೆ. ಮತ್ತೆ ಚಳುವಳಿ ಮುಂದುವರಿಯುವ ಅವಶ್ಯಕತೆಯಿಲ್ಲ ಎಂದು ಬಹು ಸಂಖ್ಯೆಯ ಸದಸ್ಯರು

ತೀರ್ಮಾನಿಸುತ್ತಾರೆ. ಆದರೆ ಕೆಲವರು ಇದನ್ನು ಒಪ್ಪದೆ ಚಳುವಳಿಯನ್ನು ಮುಂದುವರಿಸುವ ಹಠ ಹಿಡಿಯುತ್ತಾರೆ. ಚಳುವಳಿ ಛಿದ್ರವಾಗುತ್ತದೆ. ಹೊಸ ಸಂಘಟನೆಗಳು, ಹೊಸ ಘೋಷಣೆಗಳು, ಭಿನ್ನ ಕಾರ್ಯಕ್ರಮಗಳು ಅಸ್ತಿತ್ವಕ್ಕೆ ಬರುತ್ತವೆ." (ಶ್ರೀಧರ ಭದ್ರನ್. ಸಾಹಿತ್ಯ ಚಳುವಳಿಗಳು, 2018)

ಚಳುವಳಿಗಳ ಅವಸಾನಕ್ಕೆ ಕೆಲವು ಕಾರಣಗಳಿವೆ. ಅವುಗಳನ್ನು ಹೀಗೆ ಪಟ್ಟಿ ಮಾಡಬಹುದು:

1. ಚಳುವಳಿಗಳನ್ನು ಅಥವಾ ಪಂಥಗಳನ್ನು ಸಾಹಿತ್ಯ ಕೃತಿಗಳ ರಚನೆಯಿಂದಲ್ಲದೆ ಪ್ರಚಾರದಿಂದ ನಿಲ್ಲಿಸಲು ಸಾಧ್ಯವಿಲ್ಲ.
2. ಸೃಜನಶೀಲ ಸಾಹಿತ್ಯರಚನೆ ಕಡಿಮೆಯಾಗಿ ಸಾಹಿತ್ಯ ಚಿಂತನೆಯ ಅಥವಾ ವಿಮರ್ಶೆಯ ಚಟುವಟಿಕೆ ಮಾತ್ರ ಹೆಚ್ಚಾಗುತ್ತಿದ್ದರೆ ಸಾಹಿತ್ಯ ಕ್ಷೇತ್ರ ಬಡವಾಗುತ್ತದೆ. ಸಾಹಿತ್ಯ ವಿಮರ್ಶೆಯ ಜಾಗದಲ್ಲಿ ರಾಜಕೀಯ ಮತ್ತು ಸಮಾಜಶಾಸ್ತ್ರೀಯ ಚರ್ಚೆಗಳೇ ತುಂಬಿಕೊಳ್ಳುತ್ತಿವೆ. ಸಾಹಿತ್ಯ ಸಮಾರಂಭಗಳಲ್ಲಿ ಸಾಹಿತ್ಯ ಕೃತಿಗಳಿಗೆ ಸಾಕಷ್ಟು ಪ್ರಾಧಾನ್ಯ ಕೊಡಿ ಎಂದು ತಿರುಮಲೇಶರು ಹೇಳಿದ್ದಾರೆ.
3. ತಿರುಮಲೇಶರು ಹೇಳುವಂತೆ, 'ಸಾಹಿತ್ಯವನ್ನು ಆಪೋಷನಗೈಯುತ್ತಿರುವ ಇನ್ನೊಂದು ಸರ್ವವ್ಯಾಪಿ ರಾಕ್ಷಸ ಶಕ್ತಿ ರಾಜಕೀಯ. ಸಾಹಿತ್ಯ ಈಗ ರಾಜಕೀಯ ಮತ್ತು ರಾಜಕಾರಣವನ್ನು ಯಾವ ಹಿಂಜರಿಕೆಯೂ ಇಲ್ಲದೆ ಅನುಸರಿಸುವಂತೆ ಅನಿಸುತ್ತದೆ" (ರಾಜಕೀಯ ಮಾಡುವುದು ಎಂಬ ಅರ್ಥದಲ್ಲಿ ಅವರು ಹೇಳಿರುವುದು. ಸಾಹಿತ್ಯ ರಾಜಕಾರಣ ಮಾಡುವುದು; ಸಾಹಿತ್ಯ ಕ್ಷೇತ್ರದ ಪರಿಷತ್ತು, ಪ್ರಾಧಿಕಾರ, ಅಕಾಡೆಮಿಗಳು, ಪ್ರಶಸ್ತಿ ಸಮಿತಿಗಳು ಇಲ್ಲೆಲ್ಲ ಅಧಿಕಾರ ಹಿಡಿಯಲು ರಾಜಕೀಯದವರ ಹಿಂದೆಮುಂದೆ ಸುತ್ತುವುದು; ಪ್ರಶಸ್ತಿಗಳಿಗಾಗಿ ಎಡತಾಕುವುದು ಇತ್ಯಾದಿ ಅರ್ಥಗಳು ಇದಕ್ಕಿವೆ).

ಈಗಿನ ಸಾಹಿತ್ಯ ಸಂದರ್ಭದ ವೈಶಿಷ್ಟ್ಯವೆಂದರೆ ವಿಚ್ಛಿದ್ರೀಕರಣ (ಫ್ರಾಗ್‌ಮೆಂಟೇಷನ್): ನಿರ್ದಿಷ್ಟ ಒಲವಿನ ಸಾಹಿತಿಗಳ ಮತ್ತು ಸಾಹಿತ್ಯಾಸಕ್ತರ ಗುಂಪುಗಳಿಗೆ ಮಾತ್ರ ಆ ಗುಂಪಿನವರ ಕೃತಿಗಳು ಪ್ರಸ್ತುತವಾಗುತ್ತಿರುವುದು. ಇದರ ಹೊರತಾಗಿಯೂ ಪತ್ರಿಕೆಗಳ ವಿಮರ್ಶೆ ಹಾಗೂ ಜಾಲತಾಣಗಳ ಬೆಂಬಲ ಎರಡನ್ನೂ ಗಳಿಸಿಕೊಂಡು, ಪ್ರಶಸ್ತಿಗಳನ್ನೂ ಪಡೆದುಕೊಂಡು ಗಮನ ಸೆಳೆಯುವ ಸಾಹಿತ್ಯ ಕೃತಿಗಳ ಮೂಲಕ ಸಾಹಿತ್ಯ ಚಳುವಳಿಯ ಲಕ್ಷಣಗಳನ್ನು ಗ್ರಹಿಸುವ ಪ್ರಯತ್ನವನ್ನು ಮಾಡಲು ಈ ಪ್ರಬಂಧದಲ್ಲಿ ಪ್ರಯತ್ನಿಸಲಾಗಿದೆ.

*****

ಭಾಗ : ಮೂರು

ಕಳೆದೆರಡು ದಶಕಗಳ ಸಾಹಿತ್ಯ: ನವಚಾರಿತ್ರಿಕ ಚಳುವಳಿ

ಇದುವರೆಗಿನ ನನ್ನ ಮಾತುಗಳ ಸಾರಾಂಶವೆಂದರೆ ಸಾಹಿತ್ಯವನ್ನು ಅಧ್ಯಯನ ಮಾಡಲು ಚಳುವಳಿಗಳನ್ನು ಅಥವಾ ಪಂಥಗಳನ್ನು ಗುರುತಿಸುವುದು ಬಹಳ ಉಪಯುಕ್ತವಾದ ವಿಧಾನವಾಗಿದೆ. ಹಾಗಾದರೆ ಸಮಕಾಲೀನ ಕನ್ನಡ ಸಾಹಿತ್ಯದಲ್ಲಿ ಎದ್ದು ಕಾಣುವ ಲಕ್ಷಣಗಳನ್ನು ಗುರುತಿಸಬೇಕಾದರೆ ಹೇಗೆ ಚಳುವಳಿಯನ್ನಾಗಿ ಗ್ರಹಿಸಬೇಕೆಂದು ಯೋಚಿಸೋಣ. ಕಳೆದ

ಶತಮಾನದ ಚಳುವಳಿಗಳನ್ನು ಗ್ರಹಿಸುವಾಗ ನಾವು ಗಮನಿಸಬಹುದಾದ ಅಂಶಗಳು ಎರಡು.

ಒಂದು : ಒಂದು ಕಾಲಘಟ್ಟದಲ್ಲಿಯೇ, ಒಂದು ಚಳುವಳಿಯ ಒಳಗೆಯೇ, ನವೋದಯದಲ್ಲಿ ಇದ್ದಂತೆ ಕಾವ್ಯದ ಮಾದರಿಯೂ, ಗದ್ಯದ ಮಾದರಿಯೂ ವಿಭಿನ್ನವಾಗಿರುವುದು ಸಾಧ್ಯ. ಒಂದು ಸಮಗ್ರ ಹೆಸರನ್ನು ಬೇಕಾದರೆ ಕೊಡಬಹುದು.

ಎರಡು : ಒಂದೇ ಹೆಸರನ್ನು ಕೊಡಲಾಗದಂತೆ ಎರಡು ಮೂರು ಹೆಸರುಗಳನ್ನು ಜೋಡಿಸಿ ಚಳುವಳಿಗೆ ಹೆಸರನ್ನು ಕೊಡಬೇಕಾಗಬಹುದು. ('ದಲಿತ–ಬಂಡಾಯ' ಚಳುವಳಿಗೆ ಹೆಸರು ಕೊಟ್ಟ ಹಾಗೆ.)

2000ದ ನಂತರದ, ಅಂದರೆ ಇಪ್ಪತ್ತೊಂದನೆಯ ಶತಮಾನದ ಕನ್ನಡ ಸಾಹಿತ್ಯವನ್ನು ಒಂದು ಚಳುವಳಿಯಾಗಿ ಗ್ರಹಿಸುವುದಾದರೆ ಇದನ್ನು 'ನವ ಚಾರಿತ್ರಿಕ ಚಳುವಳಿ' ಎಂದು ಕರೆಯಬಹುದೇನೋ. ನಾನು ಈ ಶಬ್ದವನ್ನು 'New Historicism' ಎನ್ನುವ ವಿಮರ್ಶ ಸಿದ್ಧಾಂತದಿಂದ ಪಡೆದು ಸ್ವಲ್ಪ ಭಿನ್ನವಾಗಿ ಬಳಸಿದ್ದೇನೆ.

'ನವ ಚಾರಿತ್ರಿಕ ಚಳುವಳಿ' ಎನ್ನುವುದನ್ನು ಇಪ್ಪತ್ತೊಂದನೆಯ ಶತಮಾನದಲ್ಲಿ ಬಂದ ಸಮುದಾಯ ಮತ್ತು ಸಂಸ್ಕೃತಿಗಳ ಇತಿಹಾಸವನ್ನು ಕಟ್ಟಿಕೊಡುವ ಕಾದಂಬರಿಗಳನ್ನು ಅನುಲಕ್ಷಿಸಿ ಬಳಸಲಾಗಿದೆ. ಗೋಪಾಲಕೃಷ್ಣ ಪೈ ಅವರ 'ಸ್ವಪ್ನ ಸಾರಸ್ವತ', ಮೊಗಸಾಲೆಯವರ 'ಉಲ್ಲಂಘನೆ ಮತ್ತು ಮುಖಾಂತರ', ಶ್ರೀನಿವಾಸ ವೈದ್ಯರ 'ಹಳ್ಳ ಬಂತು ಹಳ್ಳ', ನಾಗವೇಣಿಯವರ 'ಗಾಂಧಿ ಬಂದ', ನನ್ನ 'ಉತ್ತರಾಧಿಕಾರ', 'ಮೂರುಹೆಜ್ಜೆ ಭೂಮಿ' ಕಾದಂಬರಿಗಳು, ಲತಾ ಗುತ್ತಿ ಅವರ 'ಕರಿನೀರು', ರೇಖಾ ಕಾಖಂಡಕಿ ಅವರ 'ವೈವಸ್ವತ', ಕೃಷ್ಣಮೂರ್ತಿ ಹನೂರು ಅವರ 'ಅಜ್ಞಾತನೊಬ್ಬನ ಆತ್ಮಚರಿತ್ರೆ', ಬೊಳುವಾರು ಅವರ 'ಸ್ವಾತಂತ್ರ್ಯದ ಓಟ', ಕುಂ. ವೀರಭದ್ರಪ್ಪನವರ 'ಅರಮನೆ', ಹೀಗೆ ಬಹಳಷ್ಟು ಕಾದಂಬರಿಗಳು ಸಮುದಾಯಗಳ ಮತ್ತು ನಾಡಿನ ಇತಿಹಾಸವನ್ನು ಮರುಪರಿಶೀಲಿಸುವ, ಮರುಸೃಷ್ಟಿಸುವ ಮತ್ತು ವಿಶ್ಲೇಷಿಸುವ ಉದ್ದೇಶದಿಂದ ರಚಿತವಾದವು.

ಬೊಳುವಾರು ಮಹಮ್ಮದ್ ಕುಂಞ ಅವರ 'ಓದಿರಿ' ಮತ್ತು 'ಉಮ್ಮಾ' ಕಾದಂಬರಿಗಳನ್ನು, ಗಿರೀಶ್ ಕಾರ್ನಾಡರ 'ರಾಕ್ಷಸ ತಂಗಡಿ' ನಾಟಕವನ್ನೂ ಈ ಚಳುವಳಿಯ ಭಾಗವಾಗಿಯೇ ನೋಡಲು ಸಾಧ್ಯವಿದೆ.

ವರ್ತಮಾನ ಕಾಲದಲ್ಲಿ ಇತಿಹಾಸದ ಕಥನಗಳನ್ನು ಮರುಸೃಷ್ಟಿಸುವ ಸಾಹಿತಿಗಳ ಆಶಯ ಬೇರೆ ಬೇರೆ ಆಗಿರುವುದನ್ನು ಗಮನಿಸಬಹುದು. ಆ ವಿವರಗಳಿಗೆ ಈಗ ಹೋಗುತ್ತಿಲ್ಲ.

'ನವ ಚಾರಿತ್ರಿಕ ಚಳುವಳಿ' ಯ ತಾತ್ವಿಕ ಚಿಂತನೆ ಏನೆಂದರೆ –

1. ಅಭಿವ್ಯಕ್ತಿಯ ಹಿಂದೆ ಒಂದು ಚಾರಿತ್ರಿಕ ಕಾರಣ ಇರುತ್ತದೆ. ಅಂದರೆ ಸಾಹಿತ್ಯ ಕೃತಿಯು ಸಾಮಾಜಿಕ ಸಂದರ್ಭದ ಶಿಶುವೇ ಹೊರತು ಲೇಖಕನ ಕಲ್ಪನೆಯಿಂದ ಹುಟ್ಟುವುದಲ್ಲ.
2. ಹಾಗೆಯೇ ರಾಜಕೀಯ ಚಿಂತನೆ ಲೇಖಕನ ಅರಿವಿಲ್ಲದೆಯೂ ಅವನ ಕೃತಿಗಳಲ್ಲಿ ಕಾಣಿಸಿಕೊಳ್ಳುತ್ತದೆ.
3. ಸಾಮಾಜಿಕ, ಚಾರಿತ್ರಿಕ, ರಾಜಕೀಯ ಕಾರಣಗಳಿಂದಾಗಿ ಯಾವುದಾದರೊಂದು ಸಂಗತಿಯನ್ನು ನೇರವಾಗಿ ಹೇಳಲು ಸಾಧ್ಯವಾಗದೆ ಇದ್ದಾಗ ಅದನ್ನು ಲೇಖಕ ಬೇರೊಂದು ರೀತಿಯಲ್ಲಿ ಹೇಳುತ್ತಾನೆ.

ಇದನ್ನು ಅರ್ಥಮಾಡಿಕೊಳ್ಳಲು ಇತ್ತೀಚೆಗೆ ಜನಪ್ರಿಯವಾಗಿದ್ದ ಚಲನಚಿತ್ರ 'ಸರಕಾರಿ

ಹಿರಿಯ ಪ್ರಾಥಮಿಕ ಶಾಲೆ, ಕಾಸರಗೋಡು' ಇದರಲ್ಲಿರುವ ಒಂದು ಸನ್ನಿವೇಶವನ್ನು ಗಮನಿಸೋಣ. ಅಲ್ಲಿ ಪಣಿಕ್ಕರ್ ಕನ್ನಡ ಶಾಲೆಯ ಮಕ್ಕಳ ಮೇಲೆ ದೂರುಕೊಟ್ಟು ತಕ್ಷಣವೇ ಅವರೆಲ್ಲರನ್ನು ಬಂಧಿಸಬೇಕೆಂದು ಬಹಳ ದರ್ಪದಿಂದ ಪೊಲೀಸ್ ಅಧಿಕಾರಿಗೆ ಒತ್ತಡ ಹೇರುತ್ತಿದ್ದಾನೆ. ಅಧಿಕಾರಿಗೆ ಪಣಿಕ್ಕರ್‌ನಿಗೆ ಗದರಿಸಬೇಕಾಗಿದೆ! ಆದರೆ ಪಣಿಕ್ಕರ್‌ನ ಹಿಂದೆ ಒಂದು ಸರಕಾರವೇ ಇರಬಹುದೆಂಬ ಗುಮಾನಿಯೂ ಅವನಿಗಿದೆ. ಅದಕ್ಕಾಗಿ ತನ್ನೆದುರು ಅಂತಹದೇ ಬೇಡಿಕೆಯೊಂದಿಗೆ ಬಂದ ಇನ್ನೊಬ್ಬನ ಮೇಲೆ ಸಿಕ್ಕಾಪಟ್ಟೆ ರೋಷಾವೇಶದಿಂದ ಬೈದು ಬಿಡುತ್ತಾನೆ. ಅವನ ರೌದ್ರಾವೇಶವನ್ನು ಕಂಡು ಹೆದರಿಕೊಂಡು ಪಣಿಕ್ಕರ್ ಮತ್ತೊಂದೂ ಮಾತಾಡದೆ ಎದ್ದು ಹೋಗುತ್ತಾನೆ.

ಸಾಹಿತ್ಯ ಕೃತಿಗಳು ಹೀಗೆ ಪರೋಕ್ಷವಾಗಿ ತಮ್ಮ ಪ್ರತಿಕ್ರಿಯೆಯನ್ನು ತೋರ್ಪಡಿಸುವ ತಂತ್ರವನ್ನು ಅನುಸರಿಸುತ್ತವೆ ಎಂದು 'ನವ ಚಾರಿತ್ರಿಕ' ಸಿದ್ಧಾಂತ ತಿಳಿಯುತ್ತದೆ. ಉದಾಹರಣೆಗೆ, ಕುಮಾರ ವ್ಯಾಸನು ವಚನಕಾರರ ನಂತರ ಬಂದೂ ವಚನ ಚಳುವಳಿಯ ಬಗ್ಗೆ ಯಾವ ಪ್ರತಿಕ್ರಿಯೆಯನ್ನೂ ಯಾಕೆ ತೋರಿಸುವುದಿಲ್ಲ? ಇದಕ್ಕೆ ಉತ್ತರ, 'ನವ ಚಾರಿತ್ರಿಕ ಚಳುವಳಿ' ಮಾರ್ಗದಲ್ಲಿ ಹೀಗಿರಬಹುದು – ಕುಮಾರವ್ಯಾಸ ಪದೇ ಪದೇ ವರ್ಣಸಂಕರ ಆಗಕೂಡದೆಂದು ವಾದಿಸುವುದು ವಚನಕಾರರ ಜಾತಿವಿನಾಶದ ನಿಲುವಿಗೆ ಅವನ ಪ್ರತಿಕ್ರಿಯೆ ಆಗಿರಬಹುದು.

ಇದೇ ರೀತಿ ನಮ್ಮ ಕಾಲದ ಐತಿಹಾಸಿಕ ಸನ್ನಿವೇಶಗಳುಳ್ಳ ಕೃತಿಗಳಿಗೆ ಸಮಕಾಲೀನ ಆಶಯಗಳಿರುವುದು ಸಹಜವಾಗಿದೆ.

ಈ ಸಮಗ್ರ ಚಳುವಳಿಯ ಜತೆಗೆ ಇರುವ ಮೂರು ಉಪ ಚಳುವಳಿಗಳೆಂದರೆ, ಒಂದು, ಮಹಿಳಾ ಸಾಹಿತ್ಯ ಚಳುವಳಿ. ಎರಡು, ದಲಿತ ಚಳುವಳಿ. ಮೂರು, ವಲಸೆ ಬದುಕಿನ ಸಾಹಿತ್ಯ. (ಇದನ್ನು ನಗರ ಸಂವೇದನೆ ಎಂದೂ ಕರೆಯಬಹುದು.) 'ನವ ಚಾರಿತ್ರಿಕ ಚಳುವಳಿ'ಯ ಭಾಗವಾಗಿಯೇ ಇವುಗಳನ್ನು ನೋಡಲು ಸಾಧ್ಯವಿದೆಯೇ ಎಂದು ಚಿಂತನೆ ನಡೆಸಬಹುದು.

ಮಹಿಳಾ ಸಾಹಿತ್ಯ ಚಳುವಳಿ

ಮಹಿಳಾ ವಾದ ಈಗ ಪ್ರಚಲಿತದಲ್ಲಿರುವ ಒಂದು ಬಹುಮುಖ್ಯ ಚಿಂತನಕ್ರಮವಾಗಿದೆ. ಪುರುಷ ಮತ್ತು ಜಗತ್ತು ಮಹಿಳೆಯರನ್ನು ತಮ್ಮ ಖಾಸಗಿ ಆಸ್ತಿಯಂತೆ ಪರಿಗಣಿಸಿ ಶೋಷಿಸಿರುವ – ಶೋಷಿಸುತ್ತಿರುವ ರೀತಿಗೆ ಇತ್ತೀಚಿನ ಮಹಿಳಾ ಸಾಹಿತಿಗಳು ಬಹ ವಿಶಿಷ್ಟವಾದ ಸಾಹಿತ್ಯ ರಚಿಸುವ ಮೂಲಕ ಪ್ರತಿಕ್ರಿಯಿಸುತ್ತಿದ್ದಾರೆ. ಹೆಚ್ಚಾಗಿ ಮಹಿಳೆಯರು ಕಾವ್ಯ ಮಾದ್ಯಮವನ್ನು ಅವಲಂಬಿಸಿರುವುದು ವಿಶೇಷವಾಗಿ ಉಲ್ಲೇಖಿಸಬೇಕಾಗಿದೆ.

ಕನ್ನಡದ ವಿಶೇಷವೆಂದರೆ ವಚನ ಚಳುವಳಿಯ ಕಾಲದಲ್ಲಿಯೇ ಮಹಿಳಾ ಸಾಹಿತ್ಯ ಚಳುವಳಿಯ ಉಗಮವೂ ಆಗಿದ್ದುದು. ಆ ಕಾಲದ ಅಕ್ಕಮಹಾದೇವಿಯೇ ಈಗಲೂ ಸ್ತ್ರೀವಾದದ ಬಹಳ ಸಮರ್ಥ ಪ್ರತಿನಿಧಿಯಾಗಿರುವುದು ಹೆಮ್ಮೆಯ ಸಂಗತಿಯೂ, ವಿಸ್ಮಯದ ಸಂಗತಿಯೂ ಹೌದು. ಅಕ್ಕಮಹಾದೇವಿ ಉಡುತಡಿಯಲ್ಲಿ, ಕಲ್ಯಾಣದಲ್ಲಿ ಮತ್ತು ಕದಳಿಯಲ್ಲಿ ಎದುರಿಸಿದ ಸವಾಲುಗಳು ವಿಭಿನ್ನವಾಗಿವೆ. ಈ ಮೂರು ಆಯಾಮಗಳು – ಅಂದರೆ, ಸಾಮಾಜಿಕ ವೈರುಧ್ಯಗಳು, ತೋರಿಕೆಯ ಬದುಕಿನ ವಿರುದ್ಧ ಬಂಡಾಯ, ದಾಂಪತ್ಯದ ಸೋಗಿನ ಬದುಕಿನ ನಿರಾಕರಣೆ, ಕಪಟ ಭಕ್ತಿಯ ವಿರುದ್ಧ ಶ್ರದ್ಧಾಭಕ್ತಿಯ ಪ್ರತಿಪಾದನೆ,

ನಿಸರ್ಗದ ಜತೆಗೆ ಅನುಸಂಧಾನ – ಮಹಿಳಾ ವಾದಕ್ಕೆ ಹೆಚ್ಚಿನ ಕಸುವನ್ನು ಕೊಡಬಲ್ಲವು.

"ದೇಹಭಾಷೆಯನ್ನು ಆಧ್ಯಾತ್ಮಿಕಕ್ಕೂ, ಆತ್ಮಸಂಗಾತಕ್ಕೂ ಬಹಳಸಬೇಕಾದ ಅನಿವಾರ್ಯತೆಯನ್ನು ಅಕ್ಕನಲ್ಲಿ ಕಾಣಬಹುದು" ಎಂದು ಡಾ. ಗಿರಿಜಾ ಶಾಸ್ತ್ರಿಯವರು ಹೇಳಿರುವ ಮಾತು ನಿಜ. (ಅವಧಿ ಅಂತರ್ಜಾಲ ಪತ್ರಿಕೆ). ಹೆಚ್ಚಿನ ಸ್ತ್ರೀವಾದಿ ಲೇಖಕಿಯರು ಈ ಸಮಸ್ಯೆಯನ್ನು ಎದುರಿಸಿರುವುದನ್ನು ಕಾಣಬಹುದು. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ಸಂಧ್ಯಾರಾಣಿ ಮತ್ತು ಭಾರತಿ ಬಿ.ವಿ. ಅವರ ಕವನ ಸಂಕಲನ, 'ಆನು ನಿನ್ನ ಹಾಡಿದೆನಲ್ಲದೆ ಸೈರಿಸಲಾರೆನಯ್ಯಾ' ಎನ್ನುವುದು. ಇದು ಅಕ್ಕಮಹಾದೇವಿಯ ವಚನದ ಸಾಲೇ ಆಗಿದೆ. ("ಅಯ್ಯಾ ನೀನು ಕೇಳಿದಡೆ ಕೇಳು /ಕೇಳದಿದ್ದರೆ ಮಾಣು/ ಆನು ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯಾ")

ಈಗ ಮಹಿಳೆಯರು ಹೆಚ್ಚಾಗಿ ಕಾವ್ಯ ಮಾಧ್ಯಮವನ್ನು ನೆಚ್ಚಿಕೊಂಡು ಬರೆಯುತ್ತಾರೆ. ದಲಿತ ಬಂಡಾಯದ ಅವಧಿಯಲ್ಲಿ ಬರೆಯಲಾರಂಭಿಸಿದ ಸಾರಾ ಅಬೂಬಕ್ಕರ್, ಅದಕ್ಕಿಂತಲೂ ಹಿಂದೆ ನವೋದಯದಲ್ಲಿಯೇ ಬರೆದ ಗಿರಿಬಾಲೆ, ಕೊಡಗಿನ ಗೌರಮ್ಮ, ಅನುಪಮಾ ನಿರಂಜನ ಮುಂತಾದವರೂ, ನವ್ಯದಲ್ಲಿ ಪ್ರಾರಂಭಿಸಿದ ವೈದೇಹಿ, ಮಿತ್ರಾ ವೆಂಕಟರಾಜ್ ಮುಂತಾದವರೂ, ಗದ್ಯದಲ್ಲಿ ತಮ್ಮ ಅಭಿವ್ಯಕ್ತಿ ಮಾಧ್ಯಮವನ್ನು ಕಂಡುಕೊಂಡಿದ್ದರು. ಈಗಲೂ ವೈದೇಹಿ, ಮಿತ್ರಾ ವೆಂಕಟರಾಜ್, ರೇಖಾ ಕಾಖಂಡಕಿ, ವಸುಮತಿ ಉಡುಪ ಮುಂತಾದವರು ಗದ್ಯದಲ್ಲಿಯೇ ಬರೆಯುತ್ತಾರೆ. ಈಗ ಬರೆಯುವ ಮಹಿಳೆಯರ ಸಂಖ್ಯೆ ದೊಡ್ಡದಿದೆ. ಅವರ ಹೊಸ ಸ್ತ್ರೀಪರ ಚಿಂತನೆ, ಪ್ರತಿಭಟನೆ, ಅನನ್ಯ ಸ್ತ್ರೀ ಅನುಭವದ ದಾಖಲೀಕರಣ ಕನ್ನಡದಲ್ಲಿ ಹೊಸ ಪಂಥವೆಂದು ಗುರುತಿಸುವಷ್ಟು ಪ್ರಭಾವಶಾಲಿಯಾಗಿದೆ. ಮಹಿಳಾ ಸಂವೇದನೆಗೆ ಉದಾಹರಣೆಯಾಗಿ, ತಕ್ಷಣ ಎದುರಿಗೆ ಸಿಕ್ಕಿದ ಸಾಲುಗಳನ್ನು ಉದ್ಧರಿಸುತ್ತಿದ್ದೇನೆ.

ನಿನ್ನ ಸೃಜನಶೀಲತೆಯೆಂದರೆ
ನನ್ನ ಬದುಕಿನ ಮೇಲೆ
ಯಾರಿಗೂ ಕಾಣದಂತೆ
ನೀನೆಳೆಯುವ ಬರೆ
ನನ್ನ ಸೃಜನಶೀಲತೆ ಎಂದರೆ
ನನ್ನ ಗಾಯಗಳು ಯಾರಿಗೂ ಕಾಣದಂತೆ
ಮೇಲೆ ನಾನೆಳೆಯುವ ತೆರೆ

(ಕಾದಂಬಿನಿ ರಾವಿ: 'ಕಲ್ಲೆದೆಯ ಮೇಲೆ ಕೂತ ಹಕ್ಕಿ' ಸಂಕಲನದ 'ಸೃಜನಶೀಲತೆ ಎಂದರೆ' ಕವನದ ಕೊನೆಯ ಸಾಲುಗಳು).

ಮಹಿಳಾ ಸಾಹಿತ್ಯದ ಬೆಳವಣಿಗೆಗೆ ನಾಯಕತ್ವ ವಹಿಸಿರುವ ಪ್ರತಿಭಾ ನಂದಕುಮಾರ್, ಅನುಪಮಾ ಮುಂತಾದವರ ಪ್ರಯತ್ನದಿಂದ ಇದೊಂದು ಗಟ್ಟಿಯಾದ ಪಂಥವಾಗಿ ಬೆಳೆಯುತ್ತಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ 2016 ರಲ್ಲಿ ಕನ್ನಡದ ಪ್ರಾತಿನಿಧಿಕ ಮಹಿಳಾ ಕಾವ್ಯದ ಇಂಗ್ಲಿಷ್ ಅನುವಾದ ಸಂಕಲನವನ್ನು (ಹರ್ ಪೋಯಮ್ಸ್) ತಂದಿದೆ. ಅನುಪಮಾ ಅವರ ಮುತುವರ್ಜಿಯಿಂದ ವಾರ್ಷಿಕ ಆಂಥಾಲಜಿಗಳು ಪ್ರಕಟವಾಗುತ್ತಿವೆ.

ದಲಿತ ಸಾಹಿತ್ಯ

ದಲಿತ ಸಾಹಿತ್ಯವು ಬಂಡಾಯದ ಸಾಹಚರ್ಯದಿಂದ ಬಿಡಿಸಿಕೊಂಡು ಸ್ವತಂತ್ರವಾಗಿ ಬೆಳೆಯುತ್ತಿರುವ ಸಶಕ್ತವಾದ ಸಾಹಿತ್ಯ ಮಾರ್ಗವಾಗಿದೆ. ದಲಿತರಲ್ಲದವರು, ಉದಾಹರಣೆಗೆ

ಬಂಡಾಯದವರು ಎಷ್ಟೇ ಪ್ರಗತಿಪರವಾಗಿ ಬರೆದರೆ ಅದಕ್ಕೆ ರಕ್ತ, ಮಾಂಸಗಳೊಂದಿಗೆ ಬೆರೆತ ಸಾಚಾತನವು ಬರಲಾರದು ಎಂಬ ಚಿಂತನೆಯಿಂದ ಇದನ್ನು ಪ್ರತ್ಯೇಕವಾದ ಚಳುವಳಿಯಾಗಿ ಗುರುತಿಸುವುದು ಅಗತ್ಯವೆನ್ನುವುದು ಕೆಲವರ ವಾದವಾಗಿದೆ. ಅದು ನಿಜವೂ ಹೌದು.

ದಲಿತರು ಭಾಷೆಯನ್ನು ಬಳಸುವ ಕ್ರಮ ಬಹಳ ವಿಶಿಷ್ಟವಾಗಿದೆ. ಇದನ್ನು ತಮ್ಮ ಬರವಣಿಗೆಯ ಅಸ್ಮಿತೆಯನ್ನು ಸ್ಥಾಪಿಸಿಕೊಳ್ಳುವುದಕ್ಕಾಗಿ ಬಳಸುತ್ತಿರಬಹುದು. ಅಥವಾ ದಲಿತ ಲೇಖಕರು ಚಿತ್ರಿಸುವ ಜಗತ್ತು, ಅಲ್ಲಿನ ಸಂಸ್ಕೃತಿ, ಅನುಭವಗಳನ್ನು ಇಂತಹ ಭಾಷೆಯಲ್ಲಿ ಮಾತ್ರ ದಾಖಲಿಸಲು ಸಾಧ್ಯವೆಂದೂ ಕಾಣುತ್ತದೆ.

ನಗರ ಸಂವೇದನೆ – ವಲಸೆ ಬದುಕಿನ ಸಾಹಿತ್ಯ

ಕನ್ನಡದ ಕೆಲವು ಮುಖ್ಯ ಸಾಹಿತಿಗಳು ಮೆಟ್ರೋಪಾಲಿಟನ್ ಎನ್ನಬಹುದಾದ ಸಂವೇದನೆಯನ್ನು ಕನ್ನಡ ಸಾಹಿತ್ಯಕ್ಕೆ ತಂದಿದ್ದಾರೆ. ಇದನ್ನು ನಗರ ಕೇಂದ್ರಿತ, ನಗರ ಸಂವೇದನೆಯ ಅಥವಾ ವಲಸೆ ಬದುಕಿನ ಸಾಹಿತ್ಯ ಎಂದು ಗುರುತಿಸಬಹುದಾಗಿದೆ. ಸೂಕ್ತವಾದ ಬೇರೊಂದು ಶಬ್ದದಿಂದಲೂ ಇದನ್ನು ಗುರುತಿಸಲು ಪ್ರಯತ್ನಿಸಬಹುದು.

ಇದಕ್ಕೆ ಉದಾಹರಣೆಯಾಗಿ ಜಯಂತ್ ಕಾಯ್ಕಿಣಿ ಅವರ ಮುಂಬೈ ನಗರದ ಜನಸಾಮಾನ್ಯರ ಕತೆಗಳನ್ನು ಅಥವಾ ಜೋಗಿ ಅವರ ಬೆಂಗಳೂರು ಬದುಕಿನ ಕಾದಂಬರಿಗಳನ್ನು ಕೊಡಬಹುದು. ವ್ಯಾಸರಾವ್ ನಿಂಜೂರು, ವಿಶ್ವನಾಥ್ ಕಾರ್ನಾಡ್, ಶ್ರೀನಿವಾಸ ಜೋಕಟ್ಟೆ ಮುಂತಾದವರು ಕೂಡ ವಲಸೆ ಬದುಕಿನ ಬಗ್ಗೆ ಬರೆದಿದ್ದಾರೆ.

ನಗರ ಅಥವಾ ಅರ್ಬನ್ ಸಂವೇದನೆ ಎನ್ನಬಹುದಾದ ಕತೆಗಳನ್ನು ವಸುಧೇಂದ್ರ, ನಾಗರಾಜ ವಸ್ತಾರೆ, ಎಸ್. ದಿವಾಕರ್ ಬರೆಯುತ್ತಾರೆ.

ಇನ್ನೂ ವಿಶೇಷವಾಗಿ ಗುರುಪ್ರಸಾದ್ ಕಾಗಿನೆಲೆ ಅವರ 'ಬಿಳಿಯ ಚಾದರ' ಮತ್ತು 'ಹಿಜಾಬ್' ಕಾದಂಬರಿಗಳು, ದತ್ತಾತ್ರಿ ಅವರ 'ದ್ವೀಪವ ಬಯಸಿ' ಕಾದಂಬರಿ ಅಮೇರಿಕಕ್ಕೆ ವಲಸೆ ಹೋದವರ, ಸಾಫ್ಟ್‌ವೇರ್ ಕ್ಷೇತ್ರದ ತಲ್ಲಣಗಳನ್ನು ಕನ್ನಡ ಕಾದಂಬರಿ ಕ್ಷೇತ್ರಕ್ಕೆ ನೀಡಿವೆ. ಕರ್ಕಿ ಕೃಷ್ಣಮೂರ್ತಿಯವರು ಅರಬ್ ಜಗತ್ತಿನ ವಲಸಿಗರ ಕತೆಗಳನ್ನು ಹೇಳಿದವರು.

ಇವರೆಲ್ಲರೂ ಬದುಕನ್ನು ಗ್ರಹಿಸುವ ರೀತಿ, ಅವರ ಆಶಯಗಳು ಭಿನ್ನವಾಗಿವೆ.

ಈ ಮಾದರಿಯಲ್ಲಿ ಎಲ್ಲರಿಗಿಂತ ವಿಶಿಷ್ಟವಾಗಿ ಮತ್ತು ಮುಖ್ಯವಾಗಿ ನಿಲ್ಲುವವರು ಕೆ.ವಿ. ತಿರುಮಲೇಶ್ ಅವರ 'ಅರಬ್ಬಿ' ಕವಿತೆಗಳ ಬೃಹತ್ ಸಂಕಲನವು ಅವರು ಯೆಮನ್ ದೇಶದಲ್ಲಿ ಇದ್ದಾಗಿನ ಸಂವೇದನೆ, ಚಿಂತನೆಗಳ ದಾಖಲೀಕರಣ. ಅವರ 'ಅಕ್ಷಯ ಕಾವ್ಯ'ವು ಈ ಹೊಸ ಸಂವೇದನೆಯ ಮಹಾಕಾವ್ಯ. ಇದಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಬಹುಮಾನವೂ ಸಿಕ್ಕಿದೆ. ಇಂತಹ ಕೃತಿಗಳ ಗಂಭೀರ ಅಧ್ಯಯನ ನಡೆಯಬೇಕಾಗಿದೆ. ಆದರೆ ಇದನ್ನು ಅರ್ಥ ಮಾಡಿಕೊಳ್ಳುವಷ್ಟು ಗಂಭೀರವಾದ ಓದುಗರು ಕನ್ನಡದಲ್ಲಿ ಇದ್ದಾರೆಯೇ, ಇದ್ದರೂ ಅವರು ಇದನ್ನು ಓದಿ ಚರ್ಚಿಸುತ್ತಾರೆಯೇ ಎನ್ನುವ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಇಲ್ಲದಿದ್ದರೆ ಎಲಿಯಟ್‌ನ ವೇಸ್ಟ್ ಲ್ಯಾಂಡಿನಷ್ಟೇ ಮುಖ್ಯವಾದ ಆಧುನಿಕ ಮಹಾಕಾವ್ಯವಾದ ಇದರ ಬಗ್ಗೆ ಚರ್ಚೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಡೆದಿಲ್ಲ.

ಹೊಸ ನಗರ ಸಂವೇದನೆಯ ಸಾಹಿತ್ಯವು ಕ್ಷುಲ್ಲಕವೆನಿಸಬಹುದಾದ ಸಂಗತಿಗಳನ್ನು ಮತ್ತು ಸಾಮಾನ್ಯ ಮನುಷ್ಯರನ್ನು ಚಿತ್ರಿಸುವ ಮೂಲಕ ಈ ಕಾಲದ ಸತ್ಯಗಳನ್ನು ದರ್ಶಿಸುವ ಪ್ರಯತ್ನ ಮಾಡುತ್ತದೆ. ಅಂದರೆ ಸಮಾಜದ ಅಂಚಿನಲ್ಲಿರುವ ಜನರನ್ನು ಕೇಂದ್ರಕ್ಕೆ ತಂದು

ಸಮಾಜದ ಪರಿಸ್ಥಿತಿಯನ್ನು ಗ್ರಹಿಸುವ ಪ್ರಯತ್ನ ಇದು. ಜಯಂತ ಕಾಯ್ಕಿಣಿ ಅವರ ಕತೆಗಳು, ಅಬ್ದುಲ್ ರಶೀದ್ ಅವರ ಕತೆಗಳು (ಉದಾಹರಣೆಗೆ, 'ಪ್ರಾಣಪಕ್ಷಿ'), ವಿಲ್ಸನ್ ಕಟೀಲ್ ಅವರ ಕವನಗಳು (ಉದಾ.:'ಫುಟ್‌ಪಾತು'), ತಿರುಮಲೇಶ್ ಅವರ ಕವಿತೆಗಳು (ಉದಾಹರಣೆಗೆ, 'ಎಚ್ಚೆಹೋಮೋ – ಈ ಮನುಷ್ಯನ್ನ ನೋಡಿ', 'ಕಟ್ಟಿ ಹಾಕಿರಿ' ಇತ್ಯಾದಿ ಕವನಗಳು) – ಇವೆಲ್ಲ ಹೊಸ ಕಾಲದ ಮನುಷ್ಯನ ಸ್ಥಿತಿ ಮತ್ತು ಸಮಾಜದ ವಾಸ್ತವವನ್ನು ಹೊಸಬಗೆಯಲ್ಲಿ ನಮ್ಮ ಅನುಭವಕ್ಕೆ ತಂದುಕೊಡುತ್ತವೆ.

ಕೆಲವೊಮ್ಮೆ ವಚನಕಾರರಂತೆ ಈಗಿನ ಕವಿಗಳು ತಮ್ಮ ಅಭಿಪ್ರಾಯಗಳನ್ನು ನೇರವಾಗಿ ಇಲ್ಲವೆ ವ್ಯಂಗ್ಯ, ವಿಡಂಬನೆಗಳ ಮೂಲಕ ಹೇಳುವುದೂ ಇದೆ. ಅಡಿಗರಂತಹ ದೊಡ್ಡ ಕವಿಗಳೂ ಸಮಾಜ ಸದ್ಯದ ವಿಕೃತಿಗಳನ್ನು ವಿಮರ್ಶೆ ಮಾಡಲು ವಿಡಂಬನೆಯನ್ನು ಬಳಸಿಕೊಂಡದ್ದಿದೆ. ಹಾಗೆಯೇ ತಿರುಮಲೇಶರು, 'ಅರಬ್ಬಿ' ಸಂಕಲನದಲ್ಲಿ 'ಕಟ್ಟಿ ಹಾಕಿರಿ' ಯಂತಹ ವಿಡಂಬನಾತ್ಮಕ ಕವನಗಳನ್ನು ಬರೆಯುತ್ತಾರೆ.

ಗೋಮಾಳವಿಲ್ಲದ್ರೆ ನಾವೇನು ಮಾಡ್ಬೇಕು?
ವಿದೇಶದಿಂದೊಂದನ್ನು ಆಮದು ಮಾಡ್ಬೇಕು
ಅದರಲ್ಲಿ ಯಾವ್ಯಾವ ಹುಲ್ಲು ಬೆಳೀಬೇಕು
ಎಲ್ಲೆಲ್ಲಿ ಎಷ್ಟೆಷ್ಟು ಗಿಡ ಹಾಕಬೇಕು
ಎಷ್ಟೆಷ್ಟು ಗೋವುಗಳ ಸಾಕಬೇಕು
ಇದೆಲ್ಲ ನಮಗೆ ಬಿಟ್ಟದ್ದು

ಎನ್ನುತ್ತಲೇ ಒಬ್ಬ ನಿರಿನ ಪೈಪ್ ತರೋದಕ್ಕೆ ಹೊರಟಾನೆ
ಕಟ್ಟಿಹಾಕಿರಿ ಅವನ ಕಂಭಕ್ಕೆ ಅಷ್ಟೊಂದು ಆತುರ ತರವಲ್ಲ

ಬೆಟ್ಟವಿರದಿದ್ರೆ ನಾವೇನು ಮಾಡ್ಬೇಕು
ಇದ್ದಲ್ಲಿಂದೊಂದನ್ನ ಎತ್ತಿ ತರಬೇಕು
ಅದು ಮೂಡಣಕ್ಕಿರಬೇಕೊ ಪಡುವಣಕ್ಕಿರಬೇಕೊ
ಎಷ್ಟೆತ್ರ ಇರಬೇಕು ಮೋಡವೊಂದು ಬೇಕೊ
ಅದೆಲ್ಲ ನಮಗೆ ಬಿಟ್ಟದ್ದು
ಮುಖ್ಯವೆಂದರೆ ಕವಿಗಳದರ ತುದಿಯಲ್ಲಿ ಕೂತು
ಕವಿತೆ ಬರೆವಂತೆ ಇರಬೇಕು

ಎನ್ನುತ್ತಲೇ ಒಬ್ಬ ಪೆನ್ನು ಕಾಗದ ತರೋದಕ್ಕೆ ಹೊರಟಾನೆ
ಕಟ್ಟಿಹಾಕಿರಿ ಅವನ ಕಂಭಕ್ಕೆ ಅಷ್ಟೊಂದು ಆತುರ ತರವಲ್ಲ

ಒಬ್ಬೊಬ್ಬರನೇ ಕಟ್ಟಿಹಾಕಿದ್ದೇವೆ
ಇನ್ನು ಕಂಭಗಳು ಬಾಕಿಯಿಲ್ಲ.

ಉದಾಹರಣೆಗೆ ಎತ್ತಿಕೊಂಡ ಇನ್ನೊಂದು ಕವನ, ವಿಲ್ಸನ್ ಕಟೀಲ್ ಅವರ 'ಫುಟ್‌ಪಾತು' ಕವನವೂ ಹೀಗೆಯೇ 'ನಗರ ಸಂವೇದನೆ' ಎಂದು ಕರೆಯಬಹುದಾದ ಪಂಥಕ್ಕೇ ಸೇರುತ್ತದೆ.

ಈ ಫುಟ್‌ಪಾತನ್ನು
ಪಾದಗಳಿಗಿಂತಲೂ ಹೆಚ್ಚು
ಬೆನ್ನುಗಳು ಸ್ಪರ್ಶಿಸಿವೆ

ಈ ಫುಟ್‌ಪಾತಿಗೆ
ಕಸಕ್ಕಿಂತಲೂ ಹೆಚ್ಚು
ಕನಸುಗಳನ್ನು ಎಸೆಯಲಾಗಿದೆ!

ಈ ಫುಟ್‌ಪಾತು
ಮಳೆಗಿಂತಲೂ ಹೆಚ್ಚು
ಕಣ್ಣೀರಿನಲ್ಲಿ ತೊಯ್ದಿದೆ!

ಈ ಫುಟ್‌ಪಾತನ್ನು
ನಗರಪಾಲಿಕೆಗಿಂತಲೂ ಹೆಚ್ಚು
ಅನಾಥರು ಪ್ರೀತಿಸಿದ್ದಾರೆ!

ಈ ಕಾಲದ ಹೆಚ್ಚಿನ ಸಾಹಿತಿಗಳು ತೀವ್ರ ವೈಚಾರಿಕ ಸಂಘರ್ಷವನ್ನು ಅನುಭವಿಸಿ ಬರೆಯುತ್ತಿರುವಂತೆ ಕಾಣುತ್ತದೆ. ಜತೆಗೆ ಸಮಾಜ ಮತ್ತು ಪ್ರಭುತ್ವ ಎರಡೂ ಕೂಡ ಯಾಜಮಾನ್ಯವನ್ನು ಸ್ಥಾಪಿಸುವ ಶಕ್ತಿಗಳಂತೆ ಅವರಿಗೆ ಕಾಣುತ್ತಿದೆ ಅನಿಸುತ್ತದೆ. ಈ ಯಾಜಮಾನ್ಯದ ಸ್ವರೂಪವನ್ನು ಗ್ರಹಿಸುವುದು ಬಹಳ ದೊಡ್ಡ ಸವಾಲಾಗಿದೆ. ಮೇಲಿನ ಎರಡು ಕವನಗಳನ್ನೇ ಗಮನಿಸಿದರೂ ಕವಿಗಳ ಅಸಮಾಧಾನವನ್ನು ಗಮನಿಸಬಹುದು. ಎಡ ಮತ್ತು ಬಲ ಎರಡೂ ಪಂಥೀಯರು ಈ ಕವನಗಳನ್ನು ಮೆಚ್ಚುತ್ತಾರೆ; ಆದರೆ ಇಂತಹ ಪರಿಸ್ಥಿತಿ ಯಾರಿಂದ ಉದ್ಭವವಾಯಿತು ಎನ್ನುವ ಪ್ರಶ್ನೆಗೆ ಬಂದರೆ ಅವರು ಪರಸ್ಪರ ದೋಷಾರೋಪ ಮಾಡತೊಡಗುತ್ತಾರೆ. ಇಂತಹ ಕವಿತೆಗಳನ್ನು ಪಾಬ್ಲೋ ನೆರೂದ, ಅಕ್ಟೇವಿಯೋ ಪಾಜ್ ಮುಂತಾದ ಲ್ಯಾಟಿನ್ ಅಮೇರಿಕದ ಕವಿಗಳಲ್ಲಿ; ಬ್ರೆಕ್ಟ್ ಮುಂತಾದ ಎಡಪಂಥೀಯ ಕವಿಗಳಲ್ಲಿ ಕಾಣಬಹುದಾಗಿತ್ತು. ಅಂತಹ ಕವನಗಳು ಕನ್ನಡದ ಈಗಿನ ಸನ್ನಿವೇಶದಲ್ಲಿ ಹೆಚ್ಚು ಹೆಚ್ಚಾಗಿ ಸೃಷ್ಟಿಸಲ್ಪಡುತ್ತಿವೆ.

ಅಂದರೆ ಕಾವ್ಯ ಪ್ರಕಾರ ಸದ್ಯದ ಸಮಸ್ಯೆಗಳಿಗೆ ಧ್ವನಿಯಾಗುತ್ತಿದೆ; ಗದ್ಯ ಪ್ರಕಾರ ಸ್ವಲ್ಪ ದೂರ ನಿಂತು ಈ ಸನ್ನಿವೇಶವನ್ನು ಅರಿಯಲು ಪ್ರಯತ್ನಿಸುತ್ತಿದೆ ಎಂದು ಹೇಳಬಹುದೇನೋ? ಕಾವ್ಯವು ಸಮಾಜದ ಸಮಸ್ಯೆಗಳ ಮುಖವಾಣಿಯಾದರೆ, ಗದ್ಯವು ಮನುಷ್ಯನ ಅಂತರಂಗದ ಭಾವನೆಗಳಿಗೆ ಮುಖವಾಣಿಯಾಗುತ್ತಿರುವುದು, ಮತ್ತು ಸಮಾಜದ ವಿನ್ಯಾಸವನ್ನು ಅರ್ಥಮಾಡಿಕೊಳ್ಳಲು ಚರಿತ್ರೆಗೆ ಮರಳುವುದು, ಸಮಾಜದ ಅಂಚಿನಲ್ಲಿರುವ ಸಾಮಾನ್ಯ ಮನುಷ್ಯರ ಬದುಕಿನ ಸೂಕ್ಷ್ಮಗಳನ್ನು ಅರಿಯುವ ಮೂಲಕ ಸಮಾಜದ ಬೃಹತ್ ವಿನ್ಯಾಸವನ್ನು ಅರಿಯಲು ಪ್ರಯತ್ನಿಸುವುದು – ಇದು ಒಂದು ವಿಶಿಷ್ಟ ವಿದ್ಯಮಾನವಾಗಿದೆ.

ಹೀಗೆ ಈ ಕಾಲದ ಕನ್ನಡ ಸಾಹಿತ್ಯವನ್ನು ಒಂದು ಚಳುವಳಿಯಾಗಿ ಗ್ರಹಿಸುವ ಮೂಲಕ ನಾವು ಇಪ್ಪತ್ತೊಂದನೆಯ ಶತಮಾನದ ಸಾಹಿತ್ಯ ಹೇಗೆ ಹಿಂದಿನ ಸಾಹಿತ್ಯಕ್ಕಿಂತ ಭಿನ್ನವಾಗಿ ಈ ಕಾಲದ ಬದುಕನ್ನು ಗ್ರಹಿಸುತ್ತದೆ ಎಂದು ಅರ್ಥ ಮಾಡಿಕೊಳ್ಳಬಹುದು. ಹಾಗೆಯೇ

ಚೆಲ್ಲಿ ಹೋದಂತಿರುವ ಕೃತಿಗಳನ್ನು ಒಂದು ಚಳುವಳಿಯ, ಒಂದು ಬಗೆಯ ತಾತ್ವಿಕತೆಯ ಭಾಗವಾಗಿ ಗ್ರಹಿಸುವುದು ಅಧ್ಯಯನದ ದೃಷ್ಟಿಯಿಂದಲೂ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದಲೂ ಉಪಯುಕ್ತವಾಗುತ್ತದೆ.

(ಕಣ್ಣೂರು ವಿಶ್ವವಿದ್ಯಾಲಯದ ಭಾರತೀಯ ಭಾಷಾ ಅಧ್ಯಯನಾಂಗದ ಕನ್ನಡ ವಿಭಾಗದ ವತಿಯಿಂದ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ: 21.03.2019 ರಿಂದ 23.03.2019.)

ಗ್ರಂಥ ಋಣ

1. ಸಾಹಿತ್ಯ ಚಳುವಳಿಗಳು. ಸಂಪಾದಕರು: ಶ್ರೀಧರ ಹೆಗಡೆ ಭದ್ರನ್. ಪ್ರ.: ಅಭಿನವ, ಬೆಂಗಳೂರು.2018

2. ಕನ್ನಡಪ್ರಭ ದೈನಿಕ ಪತ್ರಿಕೆ, ಬೆಂಗಳೂರು. 27.1.2019

3. ಪ್ರಬಂಧದಲ್ಲಿ ಉಲ್ಲೇಖಿತ ಪಠ್ಯಗಳು

✠✠✠

ಎಲೆಯಿಂದಿಳಿದ
ಹನಿ ನೀರನು
ಇಳೆ ಮೆಲ್ಲನೆ ತನ್ನೊಳಗಿಳಿಸಿತ್ತು
ಇಳೆಯಿಂದಿಳಿದ
ನೀರನು ಹೀರುತ
ಬೇರದು ಮರವನು ಚಿಗಿಸಿತ್ತು.

ಕನ್ನಡ ಭಾಷಾಂತರ ಸಾಹಿತ್ಯ: ಅಧ್ಯಯನ ವಿಧಾನಗಳು

ಡಾ. ಮೋಹನ ಕುಂಟಾರ್
ಪ್ರಾಧ್ಯಾಪಕರು, ಹಂಪಿ ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ

ಭಾಷಾಂತರ ಎಂದರೆ ಎರಡು ಭಾಷೆಗಳ ನಡುವೆ ನಡೆಯುವ ಪ್ರಕ್ರಿಯೆ. ಹಾಗಾಗಿ ಭಾಷಾಂತರ ಅಧ್ಯಯನವೆಂದರೆ ಎರಡು ಭಾಷೆಗಳು ತಿಳಿದಿರಲೇಬೇಕು ಎಂಬ ತಿಳುವಳಿಕೆ ಈ ಕ್ಷೇತ್ರವನ್ನು ದೂರದಿಂದಲೇ ಪರಿಭಾವಿಸುವವರಲ್ಲಿ ಇದೆ. ಭಾಷಾಂತರ ಅಧ್ಯಯನ ಸಂಶೋಧನೆಗೆ ತೆರೆದುಕೊಳ್ಳುತ್ತಿರುವ ಹೊಸ ಕ್ಷೇತ್ರ. ಅದರಲ್ಲಿಯೂ ಕನ್ನಡವಂತೂ ಈ ಬಗೆಯ ಅಧ್ಯಯನಗಳೆಡೆಗೆ ಇತ್ತೀಚಿಗಷ್ಟೆ ಮೆಲ್ಲಡಿಯಿಡಲಾರಂಭಿಸಿದೆ.

ಯಾವುದೇ ಭಾಷೆಯ ಸಾಹಿತ್ಯ ಚರಿತ್ರೆಯನ್ನು ಬರೆಯುವವರು ಭಾಷಾಂತರ ಸಾಹಿತ್ಯದ ಪ್ರಭಾವವನ್ನು ಗುರುತಿಸಬೇಕಾಗುತ್ತದೆ. ಅನ್ಯಭಾಷಾ ಸಾಹಿತ್ಯವು ಚರಿತ್ರೆಯ ಯಾವುದೇ ಕಾಲಘಟ್ಟದಲ್ಲಿ ಲಕ್ಷ್ಯ ಭಾಷಾ ಸಾಹಿತ್ಯವನ್ನು ಬೆಳೆಸುವಲ್ಲಿ ಪೂರಕವಾಗಿ ಒದಗಿರಬಹುದು. ಇತ್ಮರ್ ಇವನ್ ಜೊಹರ್(Itamar Even Zohar) ಎಂಬ ವಿದ್ವಾಂಸ ಗುರುತಿಸುವಂತೆ ಲಕ್ಷ್ಯಭಾಷಾ ಸಾಹಿತ್ಯವು ಶೈಶವಾವಸ್ಥೆಯಲ್ಲಿದ್ದಾಗ, ದುರ್ಬಲವಾಗಿದ್ದು ಸಶಕ್ತ ಸಾಹಿತ್ಯವನ್ನು ಉತ್ಪಾದಿಸಲು ಅಸಮರ್ಥವಾದಾಗ ಹಾಗೂ ಸಾಹಿತ್ಯ ಜಡವಾಗಿದ್ದು ಹೊಸ ವಿಚಾರಗಳತ್ತ ತುಡಿಯುತ್ತಿರುವಾಗ ಈ ಮೂರು ಸಂದರ್ಭಗಳಲ್ಲಿ ಭಾಷಾಂತರಗಳ ಮೊರೆಹೋಗುತ್ತದೆ. ಆಗೆಲ್ಲ ಭಾಷಾಂತರ ಸಾಹಿತ್ಯ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಈ ಭಾಷಾಂತರ ಸಾಹಿತ್ಯ ರೂಪುಗೊಂಡ ಪ್ರಕ್ರಿಯೆಗಳ ಅಧ್ಯಯನವನ್ನು ಭಾಷಾಂತರ ಅಧ್ಯಯನವೆಂದು ಗುರುತಿಸ ಲಾಗುತ್ತದೆ.

ಆಂದ್ರೆ ಲೆಫೆವೆರ್(Andre Lefevere)ನ ಪ್ರಕಾರ ಭಾಷಾಂತರ ಪ್ರಕ್ರಿಯೆ ಮತ್ತು ಅದರಿಂದ ಹುಟ್ಟಿಕೊಳ್ಳುವ ಸಮಸ್ಯೆಗಳ ಬಗೆಗಿನ ಎಲ್ಲಾ ಅಧ್ಯಯನಗಳನ್ನು ಭಾಷಾಂತರ ಅಧ್ಯಯನಗಳ ವ್ಯಾಪ್ತಿಯಲ್ಲಿ ಗುರುತಿಸಬಹುದು. ಇದನ್ನು ತೌಲನಿಕ ಅಧ್ಯಯನದ ಸ್ವತಂತ್ರವಾದ ಭಾಗವೆಂದೋ, ಭಾಷಾ ವಿಜ್ಞಾನದ ಭಾಗವೆಂದೋ ಪರಿಗಣಿಸದೆ ಸ್ವತಂತ್ರವಾದ ಅಧ್ಯಯನಶಿಸ್ತು ಎಂಬ ನೆಲೆಯಲ್ಲಿ ಅನೇಕ ವಿದ್ವಾಂಸರು ಪರಿಭಾವಿಸಿ ಅಧ್ಯಯನಗಳನ್ನು ನಡೆಸಿದ್ದಾರೆ. ಕನ್ನಡದಲ್ಲಿಯೂ ಇಂತಹ ಅಧ್ಯಯನಗಳನ್ನು ವಿಸ್ತರಿಸಲು ವಿಪುಲ ಅವಕಾಶಗಳಿವೆ.

ಕನ್ನಡದಲ್ಲಿ ಭಾಷಾಂತರ ಅಧ್ಯಯನ ಕ್ಷೇತ್ರವೆಂದರೆ ಮಾರು ದೂರ ಸರಿಯುವವರೇ ಹೆಚ್ಚು. ಕನ್ನಡ ಬಿಟ್ಟರೆ ಬೇರೆ ಭಾಷೆ ತಿಳಿದಿಲ್ಲ ಎಂಬ ಕಾರಣ ನೀಡಿ ಅನೇಕರು ಈ ಕ್ಷೇತ್ರದ ಕಡೆಗೆ ಮುಖ ಮಾಡುವುದಿಲ್ಲ. ಭಾಷಾಂತರ ಎಂದರೆ ಕನ್ನಡ ಸಾಹಿತ್ಯ ಅಧ್ಯಯನಕ್ಕಿಂತಲೂ ಬೇರೆಯೇ ಆದ ಕ್ಷೇತ್ರವೆಂದು ಪಿಎಚ್.ಡಿ. ಸಂಶೋಧನೆಗೆ ಬರುವ ವಿದ್ಯಾರ್ಥಿಗಳು ತಿಳಿದು ಕೊಂಡಿದ್ದಾರೆ. ಕನ್ನಡ ಸಾಹಿತ್ಯದ ವ್ಯಾಪ್ತಿಯಲ್ಲಿಯೇ ಭಾಷಾಂತರ ಅಧ್ಯಯನವೂ

ಒಳಗೊಳ್ಳುತ್ತದೆ ಎಂಬ ಅರಿವು ವ್ಯಾಪಕವಾಗಿ ಸಂಶೋಧನ ಕ್ಷೇತ್ರದಲ್ಲಿ ವಿಸ್ತರಿಸಲಿಲ್ಲ. ಹಾಗಾಗಿ ಅನೇಕ ವಿದ್ಯಾರ್ಥಿಗಳು ಕನ್ನಡ ಸಾಹಿತ್ಯ ಅಧ್ಯಯನಾಪೇಕ್ಷಿಗಳಾಗಿ ಅಧ್ಯಯನಕ್ಕೆ ಬರುತ್ತಾರೆ. ಆದರೆ ಭಾಷಾಂತರ ಅಧ್ಯಯನವೆಂದರೆ ಹಿಂಜರಿಯುತ್ತಾರೆ. ಸಾಹಿತ್ಯ ಕೃತಿಗಳು ಏಕ ವ್ಯಕ್ತಿ(Single Author) ರಚನೆಗಳಾದರೆ ಭಾಷಾಂತರ ಕೃತಿಗಳು ಇಬ್ಬರು ಲೇಖಕರಿಂದ(Duel Author) ರೂಪುಗೊಂಡವುಗಳು. ಈ ಪರಿಗ್ರಹಿಕೆಯ ನೆಲೆಯಲ್ಲಿ ಭಿನ್ನ ದೃಷ್ಟಿಕೋನಗಳಿಂದ ಅಧ್ಯಯನ ಗಳನ್ನು ರೂಪಿಸಬೇಕಾಗುತ್ತದೆ. ಈ ಗ್ರಹಿಕೆಯೇ ಭಾಷಾಂತರ ಅಧ್ಯಯನವನ್ನು ಸಾಹಿತ್ಯ ಅಧ್ಯಯನದಿಂದ ಪ್ರತ್ಯೇಕವಾಗಿಸುತ್ತದೆ.

ಸಂಶೋಧನ ಕ್ಷೇತ್ರದಲ್ಲಿ ಭಾಷಾಂತರ ಅಧ್ಯಯನಗಳನ್ನು ಉತ್ತೇಜಿಸಬೇಕಾಗಿದೆ. ಸಂಶೋಧನೆಯಲ್ಲಿ ಈ ಕ್ಷೇತ್ರ ಇನ್ನೂ ಎಳಸು ನೆಲ. ಅನೇಕ ಭಾಷಾಂತರ ಕೃತಿಗಳು ಕನ್ನಡವನ್ನು ಬೆಳೆಸಿವೆ, ಪೋಷಿಸಿವೆ; ಮಾರ್ಗದರ್ಶನ ಮಾಡಿವೆ. ಭಾಷಾಂತರ ಕೃತಿಗಳು ಯಾವುದೇ ಭಾಷೆಯಲ್ಲಿ ಸ್ವತಂತ್ರವಾಗಿ ರೂಪುಗೊಂಡು ಸ್ವತಂತ್ರ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳು ವುದಿಲ್ಲ. ಅವು ಆಯಾ ಸಾಹಿತ್ಯ ಪ್ರವೃತ್ತಿಗಳ ಭಾಗವಾಗಿಯೇ ರೂಪು ಪಡೆದಿರುತ್ತವೆ. ಹಾಗೆಯೇ ಸಮಕಾಲೀನ ಸಾಹಿತ್ಯ ಪಂಥ, ಧೋರಣೆಗಳ ಬೆಳವಣಿಗೆಯಲ್ಲಿ ಪೂರಕವಾಗಿ ಒದಗಿರುತ್ತವೆ. ಇದಕ್ಕೆ ಕನ್ನಡ ಸಾಹಿತ್ಯವೂ ಹೊರತಲ್ಲ.

ಕನ್ನಡ ಸಾಹಿತ್ಯದಲ್ಲಿ ಭಾಷಾಂತರ ಪ್ರಕ್ರಿಯೆಯ ಮೂಲಕವೇ ಸ್ವತಂತ್ರ ಸೃಜನಶೀಲ ಕೃತಿಗಳು ರೂಪುಗೊಂಡಿರುವುದನ್ನು ಕಾಣಬಹುದು. ಅವುಗಳನ್ನು ಆಧುನಿಕ ಅರ್ಥದಲ್ಲಿ ಭಾಷಾಂತರ -Translation- ಎಂದು ವಿವರಿಸಿಕೊಳ್ಳುವುದು ಕಷ್ಟವಾಗಬಹುದು. ಆದರೆ ಕನ್ನಡ ಸೃಜನಶೀಲ ಪ್ರಕ್ರಿಯೆಯ ಹಿಂದೆ ಅನ್ಯಭಾಷಾ ಪ್ರೇರಣೆ, ಪ್ರಭಾವಗಳ ರೂಪದಲ್ಲಿ ಭಾಷಾಂತರ ಪ್ರಕ್ರಿಯೆಯಿರುವುದನ್ನು ಅಲ್ಲಗಳೆಯುವಂತಿಲ್ಲ.

ಅನ್ಯಭಾಷಾ ಸಾಹಿತ್ಯದ ಓದು ಯಾವುದೇ ಭಾಷೆಯ ಲೇಖಕರ ಸೃಜನಶೀಲ ಪ್ರತಿಭೆಯನ್ನು ಉತ್ತೇಜಿಸಬಹುದು. ಪ್ರೇರಣೆರೂಪದ ಉತ್ತೇಜನವು ಅನ್ಯಭಾಷಾ ಕೃತಿಗಳ ರಚನೆಯ ಮಾದರಿಗಳನ್ನು ತಮ್ಮ ತಮ್ಮ ಭಾಷೆಗಳಲ್ಲಿಯೂ ಮರುರೂಪಿಸುವುದಕ್ಕೆ ಕಾರಣವಾಗಿರಬಹುದು. ಈ ಹಿನ್ನೆಲೆಯಲ್ಲಿ ಕನ್ನಡ ಸಾಹಿತ್ಯವನ್ನು ಪ್ರಾಕೃತ, ಸಂಸ್ಕೃತ, ಗ್ರೀಕ್, ಇಂಗ್ಲಿಷ್‌ನಂತಹ ಭಾಷೆಗಳ ಪ್ರಭಾವ ವಲಯದಲ್ಲಿ ರೂಪುಗೊಂಡ ಬಗೆಯ ಶೋಧವೂ ಭಾಷಾಂತರ ಅಧ್ಯಯನದ ವ್ಯಾಪ್ತಿಯಲ್ಲಿ ಬರುತ್ತದೆ. ಹಾಗಾದಾಗ ಕನ್ನಡ ಸಾಹಿತ್ಯದ ಅಧ್ಯಯನವು ಒಂದಲ್ಲ ಒಂದು ರೀತಿಯಲ್ಲಿ ಭಾಷಾಂತರ ಅಧ್ಯಯನವೂ ಆಗಿಬಿಡುವ ಸಾಧ್ಯತೆಯನ್ನೂ ನಿರಾಕರಿಸುವಂತಿಲ್ಲ. ಬಹುತೇಕ ಕನ್ನಡ ಸೃಜನಶೀಲ ಬರಹಗಳು ಮೂಲ ಆಕರಗಳ ಮಾದರಿಗಳನ್ನು ಇರಿಸಿಕೊಂಡೇ ಕನ್ನಡದಲ್ಲಿ ಮರು ರೂಪಿಸಿರುವುದನ್ನು ಗುರುತಿಸಬಹುದು. ಸೃಜನಶೀಲ ಪ್ರಕ್ರಿಯೆ ಎನ್ನುವುದೂ ಕೂಡಾ ಶೂನ್ಯದ ಸೃಷ್ಟಿಯಲ್ಲ. ಸೃಜನಶೀಲತೆಗೆ ಆಕರವಾಗಿ ಅನುಭವ, ಓದು, ಪ್ರೇರಣೆ, ಸ್ಫೂರ್ತಿ ಒತ್ತಾಯಗಳ ಅಮೂರ್ತ ನೆಲೆಯ ಪ್ರಚೋದನೆಗಳೂ ಇದ್ದೇ ಇರುತ್ತವೆ. ಆಕರಗಳ ಅಮೂರ್ತ ಸ್ವರೂಪವನ್ನು ಸೃಜನಶೀಲ ಕೃತಿಗಳ ನೆಲೆಯಿಂದ ಶೋಧಿಸುವುದೂ ಭಾಷಾಂತರ ಅಧ್ಯಯನದ ಭಾಗವೇ ಆಗಬಹುದು.

ಕನ್ನಡದಲ್ಲಿ ಕವಿರಾಜಮಾರ್ಗ ಕೃತಿಯು ದಂಡಿಯ ಕಾವ್ಯಾದರ್ಶದ ಭಾಷಾಂತರವೆಂದು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಬಹುತೇಕ ಪದ್ಯಗಳು ಯಥಾವತ್ತಾದ ಭಾಷಾಂತರಗಳು ಎಂಬುದನ್ನು ಸ್ಪಷ್ಟಪಡಿಸಲಾಗಿದೆ (ನೋಡಿ: ಸಿ.ಪಿ.ಕೆ. ಭಾಷಾಂತರ

ಭಾರತಿ). ವಿಕ್ರಮಾರ್ಜುನ ವಿಜಯವನ್ನು ಬರೆದ ಪಂಪನಿಗೆ ವ್ಯಾಸಕೃತ ಮಹಾಭಾರತ ಆಕರವಾಗಿತ್ತು. ಆದಿಪುರಾಣ ಕೃತಿಗೆ ಜಿನಸೇನಾಚಾರ್ಯರು ಸಂಸ್ಕೃತದಲ್ಲಿ ಬರೆದ ಪೂರ್ವ ಪುರಾಣವೇ ಆಕರ. ಹೀಗಿರುವಾಗ ಅವುಗಳನ್ನು ನೇರವಾಗಿ ಭಾಷಾಂತರ ಕಾವ್ಯಗಳೆಂದು ಹೇಳುವಂತಿಲ್ಲ ವಾದರೂ ಅವುಗಳು ಭಾಷಾಂತರ ಪ್ರಕ್ರಿಯೆಯ ಸಂದರ್ಭದ ಉತ್ಪನ್ನಗಳು ಎಂದೇ ಹೇಳ ಬೇಕಾಗುತ್ತದೆ. ಕನ್ನಡ ಸಾಹಿತ್ಯದ ಆಧುನಿಕ ಪೂರ್ವದ ಅನೇಕ ಕೃತಿಗಳು ಅನ್ಯಭಾಷಾ ಆಕರಗಳ ಆಧಾರ ಹಾಗೂ ಸ್ವೀಕಾರಗಳ ನೆಲೆಯಲ್ಲಿ ಭಾಷಾಂತರ ಪ್ರಕ್ರಿಯೆಯ ಪರಿಣಾಮವಾಗಿ ರೂಪು ಪಡೆದಿವೆ. ಕವಿಗಳೇ ತಮ್ಮ ಕಾವ್ಯಾರಂಭದಲ್ಲಿ ತಮ್ಮ ಆಕರಗಳನ್ನು ಉಲ್ಲೇಖಿಸುವುದು ಆಕರ ಕೃತಿಗಳ ಕರ್ತೃಗಳನ್ನು ನೆನೆಯುವುದು ಇತ್ಯಾದಿಗಳ ಮೂಲಕ ಭಾಷಾಂತರ ಪ್ರಕ್ರಿಯೆಯ ಭಾಗ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಹಾಗೆ ಹೇಳಿಕೊಳ್ಳದೆ ಇದ್ದರೂ ಕಾವ್ಯ ಅಧ್ಯಯನಕಾರರು ಅವುಗಳ ಆಕರಗಳನ್ನು ಪತ್ತೆ ಹಚ್ಚಿದ್ದಾರೆ. ರನ್ನನ ಗದಾಯುದ್ಧ ಕಾವ್ಯಕ್ಕೆ ಪಂಪನ ವಿಕ್ರಮಾರ್ಜುನ ವಿಜಯ, ಭಟ್ಟನಾರಾಯಣನ ವೇಣಿ ಸಂಹಾರ, ಹರಿಹರನ ರಗಳೆಗಳಿಗೆ ತಮಿಳಿನ ಪೆರಿಯ ಪುರಾಣ ಹೀಗೆ ಆಕರ ಶೋಧಗಳನ್ನು ವಿದ್ವಾಂಸರು ಮಾಡಿದ್ದಾರೆ.

ಹಾಗೆಯೇ ಪಂಪ, ಪೊನ್ನ, ನಾಗಚಂದ್ರ ಮೊದಲಾದ ಕವಿಗಳು ಸಂಸ್ಕೃತದ ಕಾಳಿದಾಸನೇ ಮೊದಲಾದವರ ಕಾವ್ಯಗಳನ್ನು ಆಕರಗಳಾಗಿ ಬಳಸಿಕೊಂಡಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ. ಹೀಗೆ ಕನ್ನಡ ಕವಿಗಳು ಪುರಾತನರ ಕೃತಿಗಳಿಂದ ತಮ್ಮ ಕಾವ್ಯ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳುವುದು ಕೇವಲ ಸೃಜನ ಪ್ರಕ್ರಿಯೆಯ ಕಾರಣಕ್ಕೆ ಮಾತ್ರ ಇರಬಹುದೋ ಅಥವಾ ತಮ್ಮ ಕಾಲದಲ್ಲಿ ಆಯಾ ಆಕರ ಕೃತಿಗಳಿಗೆ ಇದ್ದ ಮಹತ್ತರ ಸ್ಥಾನದ ಪರಿಣಾಮವಾಗಿ ಸ್ವೀಕರಿಸಿರಬಹುದೇ? ಇಲ್ಲಿ ಸಮಕಾಲೀನ ಸಂದರ್ಭದಲ್ಲಿ ತಮ್ಮ ಕಾವ್ಯಕೃತಿಗಳ ಮನ್ನಣೆ ಪಡೆಯಬೇಕೆಂಬ ಉದ್ದೇಶದಿಂದ ಮಹತ್ವದ ವಸ್ತುವನ್ನು ಆಶ್ರಯಿಸಿದ ಪರಿಣಾಮವಿರಬಹುದೇ? ಕನ್ನಡ ಕವಿಗಳು ಆಕರಗಳಾಗಿ ಬಳಸಿಕೊಂಡ ಕೃತಿಗಳ ಪ್ರಭಾವಕ್ಕೆ ಸಿಲುಕಿಕೊಂಡುದರ ಕಾರಣ ವಿರಬಹುದೇ? ಇವೆಲ್ಲ ಕಾರಣಗಳಿಗಿಂತಲೂ ಮಿಗಿಲಾಗಿ ಆಯಾ ಕನ್ನಡ ಕವಿಗಳು ಆಕರ ಕೃತಿಗಳಿಗಿಂತಲೂ ಭಿನ್ನವಾದ ಧ್ಯೇಯ ಧೋರಣೆಗಳನ್ನು ಸಮಕಾಲೀನವಾಗಿ ಪುನರ್ ರಚಿಸಲು ಮಾಡಿದ ಪ್ರಯತ್ನದ ಭಾಗವಾಗಿರಬಹುದೇ? ಎಂಬಿತ್ಯಾದಿಗಳ ನೆಲೆಯಿಂದ ಅಧ್ಯಯನ ಮಾಡಲು ಸಾಕಷ್ಟು ಅವಕಾಶಗಳಿವೆ. ಇಂತಹ ಪ್ರಶ್ನೆಗಳನ್ನು ಎಲ್ಲಾ ಕಾಲದ ಅನುವಾದ ಕೃತಿಗಳ ಬಗೆಗೆ ಕೇಳಿಕೊಂಡು ಅಧ್ಯಯನ, ವಿಶ್ಲೇಷಣೆ ಮಾದರಿಯ ಅಧ್ಯಯನ ಗಳನ್ನು ರೂಪಿಸಲು ಆಸ್ಪದವಿದೆ. ಇಂತಹ ಅಧ್ಯಯನದ ವಿಧಾನಗಳನ್ನು ಕೆಲವು ಪ್ರಮುಖ ವಿಧಾನಗಳಲ್ಲಿ ಸ್ಪಷ್ಟವಾಗಿ ಗುರುತಿಸಿಕೊಂಡು ವಿಸ್ತರಿಸಲು ಸಾಧ್ಯವಿದೆ. ಭಾಷಾಂತರ ಕ್ಷೇತ್ರ ವಿಶಾಲವಾಗಿದೆ. ಈ ಕ್ಷೇತ್ರದಲ್ಲಿ ಅಗಣಿತ ಸಂಖ್ಯೆಯ ಬಹುಬಗೆಯ ಭಾಷಾಂತರಗಳು ಶತಮಾನಗಳ ಅವಧಿಯಲ್ಲಿ ಬಂದಿವೆ. ಅವುಗಳ ಸಮಗ್ರ ಮಾಹಿತಿಗಳೆಲ್ಲ ಒಂದೆಡೆ ಲಭ್ಯವಿಲ್ಲ. ಕನ್ನಡ ಭಾಷಾಂತರ ಸಾಹಿತ್ಯ ಕ್ಷೇತ್ರವನ್ನು ಅಧ್ಯಯನದ ಅನುಕೂಲಕ್ಕಾಗಿ ಪ್ರಮುಖವಾಗಿ ಮೂರು ವಿಭಾಗಗಳಾಗಿ ವರ್ಗೀಕರಿಸಬಹುದು. ಅವುಗಳನ್ನು ವಸ್ತುಕೇಂದ್ರಿತ ಅಥವಾ ಆಶಯ ಕೇಂದ್ರಿತ, ವ್ಯಕ್ತಿಕೇಂದ್ರಿತ ಹಾಗೂ ಕಾಲಕೇಂದ್ರಿತ ಭಾಷಾಂತರಗಳೆಂದು ಸ್ಥೂಲವಾಗಿ ಹೆಸರಿಸಬಹುದು.

ವಸ್ತುಕೇಂದ್ರಿತ ಅಥವಾ ಆಶಯಕೇಂದ್ರಿತ

ವಸ್ತುಕೇಂದ್ರಿತ ಭಾಷಾಂತರಗಳೆಂದರೆ ಒಂದು ನಿರ್ದಿಷ್ಟ ವಿಷಯಕ್ಕೆ –ವಸ್ತು ವಿಷಯಕ್ಕೆ– ಸಂಬಂಧಪಟ್ಟ ಭಾಷಾಂತರಗಳನ್ನು ಒಂದು ಗುಂಪಾಗಿ ಗುರುತಿಸಿ ಅವುಗಳನ್ನು ಆಧರಿಸಿ ಅಧ್ಯಯನ ಮಾಡುವುದು ಶಕ್ಯವಿದೆ. ರಾಷ್ಟ್ರೀಯ ಪ್ರಜ್ಞೆಯ ಭಾಷಾಂತರಗಳೆಂದೋ, ಸಾಮಾಜಿಕ ಪ್ರಜ್ಞೆಯ ಭಾಷಾಂತರಗಳೆಂದೋ, ಸ್ತ್ರೀ ಪರ ನಿಲುವಿನ ಭಾಷಾಂತರಗಳೆಂದೋ, ದಲಿತ ಸಂವೇದನೆಯ ಭಾಷಾಂತರಗಳೆಂದೋ ಹೀಗೆ ವಸ್ತುವಿಗೆ ಅನುಗುಣವಾಗಿ ಇವುಗಳಲ್ಲಿ ವಿಂಗಡಿಸಿ ಅಧ್ಯಯನಕ್ಕೆ ಅಳವಡಿಸಬಹುದು. ಹಾಗೆಯೇ ರಾಮಾಯಣ, ಮಹಾಭಾರತ, ಭಾಗವತ ಮೊದಲಾದ ಪುರಾಣ ವಸ್ತುಗಳು, ಶಾಸ್ತ್ರ ವಿಚಾರಗಳು ಇತ್ಯಾದಿಗಳನ್ನು ಈ ವಿಭಾಗದಲ್ಲಿ ಅಧ್ಯಯನ ಮಾಡಬಹುದು.

ಮೂಲ ಕೃತಿಯ ಓದಿನಿಂದ ಗ್ರಹಿಸಿಕೊಂಡ ಆಶಯ ಅಥವಾ ಭಾಷಾಂತರ ಪಠ್ಯದ ಲಕ್ಷ್ಯ ಭಾಷೆಯ ಸಂದರ್ಭದ ಓದಿನಿಂದ ಗ್ರಹಿಸಿದ ಆಶಯಗಳನ್ನು ಅಧ್ಯಯನಕ್ಕೆ ಅಳವಡಿಸ ಬಹುದು. ಕೆಲವೊಮ್ಮೆ ಮೂಲ ಪಠ್ಯದ ಆಶಯ ಹಾಗೆಯೇ ಭಾಷಾಂತರ ಪಠ್ಯದ ಆಶಯ ಬೇರೆ ಬೇರೆಯಾಗಿ ಗ್ರಹಿಕೆಗೆ ನಿಲುಕಬಹುದು.

ಕೆಲವೊಮ್ಮೆ ಭಾಷಾಂತರ ಪಠ್ಯ ಹಾಗೂ ಮೂಲ ಪಠ್ಯದ ವಸ್ತು ಒಂದೇ ಆಗಿ ಗ್ರಹಿಕೆಗೆ ನಿಲುಕುವ ಸಂದರ್ಭವೂ ಇರಬಹುದು. ಆಗ ಭಾಷೆಗಳ ನಡುವಿನ ಗೆರೆ ಅಳಿಸಿ ಹೋಗಿ ಅಧ್ಯಯನವು ಕ್ರಿಯಾಶೀಲವಾಗಬಹುದು.

ವ್ಯಕ್ತಿಕೇಂದ್ರಿತ

ಭಾಷಾಂತರಕಾರರು ಹಾಗೂ ಮೂಲ ಲೇಖಕರು ಎಂಬೀ ಎರಡು ನೆಲೆಗಳಲ್ಲಿ ವ್ಯಕ್ತಿ ಕೇಂದ್ರಿತ ಅಧ್ಯಯನಗಳನ್ನು ಮಾಡಲು ಅವಕಾಶವಿದೆ.

ಭಾಷಾಂತರಕಾರರ ಒಲವು, ನಿಲುವುಗಳಿಗೆ ಬದ್ಧರಾದ ಲೇಖಕರ ಭಾಷಾಂತರಗಳು ಎಂಬ ನೆಲೆಯಲ್ಲಿ ಒಂದು ಗುಂಪಾಗಿ ಪರಿಗಣಿಸಿ ಅಧ್ಯಯನ ಮಾಡಬಹುದು. ಸಮಾನ ಧ್ಯೇಯ ಧೋರಣೆಗಳ ಭಾಷಾಂತರಕಾರರ ಕೃತಿಗಳನ್ನು ಒಂದು ಗುಂಪಿನಲ್ಲಿ ಗುರುತಿಸಿ ಅಧ್ಯಯನ ಮಾಡುವ ಅವಕಾಶವಿದೆ. ಇದರಲ್ಲಿಯೂ ಮಹಿಳೆಯರ ಭಾಷಾಂತರಗಳು, ಪುರುಷರು ರೂಪಿಸಿದ ಭಾಷಾಂತರಗಳು, ನಿರ್ದಿಷ್ಟ ರಾಜಕೀಯ ಪಕ್ಷದ ಪರವಾಗಿರುವ ಭಾಷಾಂತರಕಾರರು, ಎಡಪಂಥೀಯ ಸಿದ್ಧಾಂತಗಳಿಗೆ ಬದ್ಧರಾದ ಭಾಷಾಂತರಕಾರರು ಎಂಬಿತ್ಯಾದಿಯಾಗಿ ವಿಂಗಡಿಸಿಕೊಂಡು ಅಧ್ಯಯನ ಕೈಗೊಳ್ಳಬಹುದು. ಬಿ. ವೆಂಕಟಾಚಾರ್ಯ, ಗಳಗನಾಥ, ನಿರಂಜನ, ಬಿ.ಕೆ. ತಿಮ್ಮಪ್ಪ ಇತ್ಯಾದಿ ಲೇಖಕರ ಭಾಷಾಂತರಗಳನ್ನು ಅಧ್ಯಯನ ವಿಷಯವಾಗಿಸಬಹುದು.

ಮೂಲ ಲೇಖಕರೊಬ್ಬರ ಹಲವು ಕೃತಿಗಳ ಅನುವಾದಗಳನ್ನು ಇಲ್ಲಿ ಪರಿಗಣಿಸಬಹುದು. ಉದಾಹರಣೆಗೆ ಕನ್ನಡದಲ್ಲಿ ಕಾಳಿದಾಸನ ಭಾಷಾಂತರಗಳು, ಷೇಕ್ಸ್‌ಪಿಯರ್‌ನ ಭಾಷಾಂತರಗಳು, ಶರಶ್ಚಂದ್ರರ ಭಾಷಾಂತರಗಳು, ಟಾಗೋರ್ ಭಾಷಾಂತರಗಳು, ಟಾಲ್‌ಸ್ಟಾಯ್ ಭಾಷಾಂತರಗಳು ಹೀಗೆ ವ್ಯಕ್ತಿಕೇಂದ್ರಿತವಾಗಿ ಅಧ್ಯಯನಗಳನ್ನು ರೂಪಿಸಬಹುದು.

ಕಾಲಕೇಂದ್ರಿತ

ಒಂದು ನಿರ್ದಿಷ್ಟ ಕಾಲದಲ್ಲಿ ಬಂದ ಭಾಷಾಂತರಗಳನ್ನು ಒಂದು ವಿಭಾಗದಲ್ಲಿ

ಗುರುತಿಸಿ ಅಧ್ಯಯನಗಳನ್ನು ರೂಪಿಸಬಹುದು. ಭಾಷಾಂತರಗಳು ಪ್ರಕಟಗೊಂಡ ಕಾಲಕ್ಕೆ ಭಾಷಾಂತರ ಕೃತಿಗಳ ಆಶಯಕ್ಕೆ ಪರಸ್ಪರ ಪೂರಕ ಸಂಬಂಧವಿರುತ್ತದೆ. ಭಾಷಾಂತರಗಳನ್ನು ಪ್ರಕಟಿಸಿದ ಪ್ರಕಾಶನ ಸಂಸ್ಥೆಗಳು ತಮ್ಮ ಸಾಂಸ್ಥಿಕ ಬದ್ಧತೆಯನ್ನು ಭಾಷಾಂತರಗಳ ಮೂಲಕ ಅನಾವರಣ ಗೊಳಿಸುವ ಪ್ರಯತ್ನಗಳನ್ನು ಮಾಡುತ್ತಿರಬಹುದು. ಆಯಾ ಕಾಲಘಟ್ಟದಲ್ಲಿ ನಿರ್ದಿಷ್ಟ ಪ್ರಕಾಶಕರು ಈ ತೆರನ ಭಾಷಾಂತರಗಳನ್ನು ಕನ್ನಡದಲ್ಲಿ ರೂಪಿಸಿದ್ದಾರೆ. ಭಾಷಾಂತರ ಕೃತಿಗಳು ಅವು ಲಕ್ಷ್ಯ ಭಾಷೆಯಲ್ಲಿ ಪ್ರಕಟಗೊಂಡ ಕಾಲದ ಬೇಡಿಕೆಗಳನ್ನು ಪೂರೈಸಿರುತ್ತವೆ. ಈ ನೆಲೆಯಲ್ಲಿ ಭಾಷಾಂತರಗಳ ಕಾಲವು ವಸ್ತು ಮತ್ತು ಭಾಷೆಯ ದೃಷ್ಟಿಯಿಂದ ಬಹಳ ಮುಖ್ಯವಾಗಿರುತ್ತದೆ.

ಕನ್ನಡದಲ್ಲಿ 19ನೆಯ ಶತಮಾನದ ಉತ್ತರಾರ್ಧದ ಭಾಷಾಂತರಗಳು 20ನೆಯ ಶತಮಾನದ ಪೂರ್ವಾರ್ಧದ ಭಾಷಾಂತರಗಳು 20ನೆಯ ಶತಮಾನದ ಉತ್ತರಾರ್ಧದ ಭಾಷಾಂತರಗಳು 21ನೆಯ ಶತಮಾನದ ಭಾಷಾಂತರಗಳು ಎಂದು ಸ್ಥೂಲವಾಗಿ ವರ್ಗೀಕರಣವನ್ನು ಮಾಡಿಕೊಳ್ಳಬಹುದು. ಹಾಗೆಯೇ ಆಧುನಿಕಪೂರ್ವ ಭಾಷಾಂತರಗಳು ಅಥವಾ ವಸಾಹತುಪೂರ್ವ ಭಾಷಾಂತರಗಳು, ವಸಾಹತುಕಾಲದ ಭಾಷಾಂತರಗಳು, ಮತ್ತು ವಸಾಹತೋತ್ತರ ಕಾಲದ ಭಾಷಾಂತರಗಳು ಎಂಬಿತ್ಯಾದಿಯಾಗಿ ವರ್ಗಿಕರಿಸಿ ಅಧ್ಯಯನವನ್ನು ಮಾಡಬಹುದು. ಈ ಮೇಲೆ ಉಲ್ಲೇಖಿತ ಕಾಲಘಟ್ಟಗಳಲ್ಲಿ ಆಯಾ ಕಾಲದ ಧ್ಯೇಯ ಧೋರಣೆಗಳಿಗೆ ಅನುಗುಣವಾಗಿಯೇ ಭಾಷಾಂತರಗಳು ರೂಪುಗೊಂಡಿವೆ ಎಂಬುದನ್ನು ಸಾಧಿಸಿ ತೋರಿಸುವ ಕೆಲವೊಂದು ಅಧ್ಯಯನಗಳು ಕನ್ನಡದಲ್ಲಿ ಪ್ರಕಟವಾಗಿವೆ. ವಸ್ತುಕೇಂದ್ರಿತ ಅಥವಾ ಆಶಯ ಕೇಂದ್ರಿತ, ವ್ಯಕ್ತಿಕೇಂದ್ರಿತ ಹಾಗೂ ಕಾಲಕೇಂದ್ರಿತ ಎಂಬೀ ವರ್ಗೀಕರಣವು ಏಕಕಾಲಕ್ಕೆ ಅಧ್ಯಯನ ಕ್ಷೇತ್ರವೂ ಹೌದು. ಹಾಗೆಯೇ ಅಧ್ಯಯನ ದೃಷ್ಟಿಕೋನವೂ ಹೌದು. ಇವುಗಳ ಪರಿಧಿಯಲ್ಲಿ ಕೆಲವೊಂದು ಅಧ್ಯಯನ ವಿಧಾನಗಳನ್ನು ಕಂಡುಕೊಳ್ಳಬಹುದು. ಅವುಗಳಲ್ಲಿ ಪ್ರಮುಖವಾದವುಗಳನ್ನು ತೌಲನಿಕ ಅಧ್ಯಯನ, ಪ್ರೇರಣೆ ಪ್ರಭಾವಗಳ ಅಧ್ಯಯನ, ಭಾಷಾಂತರ ಬಗೆಗಳ ಅಧ್ಯಯನ, ಭಾಷಾಂತರಗಳ ಸಮೀಕ್ಷಾ ಅಧ್ಯಯನ, ಭಾಷಾಂತರ ಸಾಹಿತ್ಯ ಬೆಳವಣಿಗೆಯ ಅಧ್ಯಯನ, ಭಾಷಾಂತರ ಭಾಷೆಯ ಅಧ್ಯಯನ, ತಾತ್ವಿಕತೆಗಳ ಅಧ್ಯಯನ, ಆನ್ವಯಿಕ ನೆಲೆಗಳ ಅಧ್ಯಯನ ಮತ್ತು ಸಾಂಸ್ಕೃತಿಕ ಅಧ್ಯಯನಗಳು ಎಂದು ಗುರುತಿಸಬಹುದು. ಹಾಗೆ ನೋಡಿದರೆ ಇವುಗಳಲ್ಲಿ ತೌಲನಿಕ ಅಧ್ಯಯನ ಕ್ರಮವನ್ನು ಉಳಿದೆಲ್ಲ ಅಧ್ಯಯನ ವಿಧಾನಗಳ ಸಂದರ್ಭದಲ್ಲಿಯೂ ಅನ್ವಯಿಸಿ ಕೊಳ್ಳಬಹುದು.

ಅಧ್ಯಯನ ವಿಧಾನಗಳು

ಪ್ರಸ್ತುತ ಕೆಲವೊಂದು ಪ್ರಮುಖ ಅಧ್ಯಯನ ಸಾಧ್ಯತೆಗಳ ಮಾದರಿಗಳನ್ನು ಗುರುತಿಸಲು ಪ್ರಯತ್ನಿಸಲಾಗಿದೆ. ಈ ಎಲ್ಲಾ ಅಧ್ಯಯನ ಕ್ರಮಗಳಲ್ಲಿ ಭಾಷಾಂತರ ಪಠ್ಯಗಳನ್ನೇ ಪ್ರಾಥಮಿಕ ಆಕರಗಳಾಗಿ ಪರಿಗಣಿಸಲಾಗಿದೆ.

ತೌಲನಿಕ ಅಧ್ಯಯನ

ಭಾಷಾಂತರ ಅಧ್ಯಯನಗಳ ಸಂದರ್ಭದಲ್ಲಿ ಪ್ರಮುಖವಾದ ಅಧ್ಯಯನ ವಿಧಾನವಿದು. ತೌಲನಿಕ ಎಂಬುದು ಯಾವುದೇ ಅಧ್ಯಯನದ ಮೂಲಧಾತು ಎಂದೇ ಹೇಳಬಹುದು. ತೌಲನಿಕವಾದ ಪರಿಶೀಲನೆಗೆ ಎರಡು ಮುಖ್ಯ ನೆಲೆಗಳಿರಬೇಕಾಗುತ್ತದೆ. ಭಾಷಾಂತರ

ಎಂಬುದು ಮೂಲತಃ ಆಕರ ಮತ್ತು ಲಕ್ಷ್ಯ ಪಠ್ಯಗಳ ನಡುವೆ ನಡೆಯುವ ಅನುಸಂಧಾನ ಎಂಬ ಕಾರಣಕ್ಕೆ ಇಲ್ಲಿಂದಲೇ ತೌಲನಿಕ ಅಧ್ಯಯನವು ಆರಂಭವಾಗುತ್ತದೆ. ಹೀಗೆ ತೌಲನಿಕ ಅಧ್ಯಯನಕ್ಕೆ ಚಾಲನೆ ಕೊಡುವ ಸಂದರ್ಭದಲ್ಲಿ ಇವುಗಳನ್ನು ಎರಡು ಒಳಬಗೆಗಳನ್ನು ಗುರುತಿಸಬಹುದು.

1. ಆಕರ ಮತ್ತು ಲಕ್ಷ್ಯ ಪಠ್ಯಗಳ ತೌಲನಿಕ ಮಾದರಿ: ಅಧ್ಯಯನಗಳ ಆಕರ ಪಠ್ಯ ಮತ್ತು ಲಕ್ಷ್ಯ ಪಠ್ಯಗಳು ಎರಡು ಭಿನ್ನ ಭಾಷಿಕ ಸಂದರ್ಭದಲ್ಲಿರುತ್ತವೆ. ಆಗ ಅನ್ಯಭಾಷಾ ಆಕರ ಪಠ್ಯವೊಂದು ಲಕ್ಷ್ಯಭಾಷೆಯಲ್ಲಿ ರೂಪುಗೊಳ್ಳುವಾಗಿನ ಸಾದೃಶ್ಯ ಸಂಬಂಧಗಳು ವೈದೃಶ್ಯ ಸಂಬಂಧಗಳು ಇವೆರಡನ್ನೂ ಮೀರಿ ಹೊಸ ಆವಿಷ್ಕಾರದ ಮೂಲಕ ಲಕ್ಷ್ಯ ಭಾಷೆಯಲ್ಲಿ ಅನುಸಂಧಾನಗೊಂಡುದರ ಪರಿಶೀಲನೆಯೇ ಇಲ್ಲಿ ಮುಖ್ಯವಾಗಬಹುದು. ಸಮಕಾಲೀನ ಸಾಮಾಜಿಕ, ರಾಜಕೀಯ ಪ್ರಭಾವ ಪರಿಣಾಮಗಳ ಮೂಲಕ ಲಕ್ಷ್ಯಪಠ್ಯವು ಹೊಸ ಚಹರೆಯನ್ನು ಪಡೆದು ದಾಖಲುಗೊಳ್ಳುವ ಸಂದರ್ಭಗಳನ್ನು ಗುರುತಿಸುವುದಕ್ಕೂ ಇಲ್ಲಿ ಅವಕಾಶವಿರುತ್ತದೆ. ಇಂತಹ ಅಧ್ಯಯನಗಳನ್ನು ಕೈಗೊಳ್ಳಲು ಅಧ್ಯಯನಕಾರರಿಗೆ ಕೃತಿಯ ಆಕರ ಹಾಗೂ ಲಕ್ಷ್ಯ ಭಾಷೆಗಳ ಅರಿವು ಕಡ್ಡಾಯವಾಗಿ ಇರಬೇಕಾಗುತ್ತದೆ. ಕನ್ನಡದಲ್ಲಿ ಬಂದ ಪುನರ್ಲೇಖನ ಅಲ್ಲದೆ ರೂಪಾಂತರ ಕೃತಿಗಳನ್ನು ಸಹ ಈ ನೆಲೆಯಲ್ಲಿ ಅಧ್ಯಯನ ಮಾಡಬಹುದು.

2. ಭಾಷಾಂತರಗಳ ಬಹು ಆವೃತ್ತಿಗಳ ತೌಲನಿಕ ಮಾದರಿ: ಆಕರ ಭಾಷೆಯ ಏಕ ಪಠ್ಯವು ಲಕ್ಷ್ಯಭಾಷೆಯಲ್ಲಿ ಹಲವು ಭಾಷಾಂತರಗಳನ್ನು ಕಂಡಿರಬಹುದು. ಅಂತಹ ಸಂದರ್ಭಗಳಲ್ಲಿ ಭಾಷಾಂತರ ಪಠ್ಯಗಳ ಪರಸ್ಪರ ತೌಲನಿಕ ಪರಿಶೀಲನೆಯನ್ನು ಮಾಡಲು ಸಾಧ್ಯವಿದೆ. ಒಂದೇ ಪಠ್ಯ ಲಕ್ಷ್ಯಭಾಷೆಯಲ್ಲಿ ಬೇರೆ ಬೇರೆ ಕಾಲಘಟ್ಟದಲ್ಲಿ ಅಥವಾ ಒಂದೇ ಕಾಲಘಟ್ಟದಲ್ಲಿ ಬೇರೆ ಬೇರೆ ಲೇಖಕರು ಭಾಷಾಂತರ ಮಾಡಲು ಇರುವ ಕಾರಣಗಳನ್ನು ಶೋಧಿಸುವುದರ ಮೂಲಕ ತೌಲನಿಕ ವಿಶ್ಲೇಷಣೆಗಳನ್ನು ಮಾಡಬಹುದು. ಷೇಕ್ಸ್‌ಪಿಯರನ ಅದರಲ್ಲಿಯೂ ಮ್ಯಾಕ್‌ಬೆತ್‌ನಂತಹ ನಾಟಕಗಳ ಹಲವು ಭಾಷಾಂತರ ಆವೃತ್ತಿಗಳ ತೌಲನಿಕ ಅಧ್ಯಯನವನ್ನು ಮಾಡಬಹುದು.

ಮೃಚ್ಛಕಟಿಕ, ಉತ್ತರರಾಮ ಚರಿತ, ಅಭಿಜ್ಞಾನ ಶಾಕುಂತಲವೇ ಮೊದಲಾದ ಬಹು ಭಾಷಾಂತರಗಳ ಪರಿಶೀಲನೆಯನ್ನು ಮಾಡಬಹುದು. ಒಂದಕ್ಕಿಂತ ಹೆಚ್ಚು ಭಾಷಾಂತರಗಳಿರುವ ಕಾದಂಬರಿಗಳು, ಬಿಡಿಕತೆಗಳು, ಕಾವ್ಯಗಳು ಸಹ ಪ್ರಧಾನ ಆಕರಗಳಾಗಬಹುದು.

ಈ ಎಲ್ಲಾ ಬಗೆಯ ತೌಲನಿಕ ಅಧ್ಯಯನಗಳನ್ನು ವಸ್ತು ಯಾ ಆಶಯಕೇಂದ್ರಿತ, ವ್ಯಕ್ತಿಕೇಂದ್ರಿತ, ಕಾಲಕೇಂದ್ರಿತ ನೆಲೆಗಳಿಂದ ವಿಭಿನ್ನವಾಗಿ ರೂಪಿಸುವುದಕ್ಕೆ ಅವಕಾಶಗಳಿವೆ. ಇವುಗಳನ್ನು ವಿಶ್ಲೇಷಣ ಮಾದರಿ, ಐತಿಹಾಸಿಕ ಮಾದರಿ ವಿವರಣಾತ್ಮಕ ಮಾದರಿಗಳಾಗಿಯೂ ರೂಪಿಸಲು ಸಾಧ್ಯತೆ ಗಳಿವೆ.

ಇಲ್ಲಿ ಆಕರ ಮತ್ತು ಲಕ್ಷ್ಯಭಾಷೆ ಎಂಬೆರಡು ಭಾಷೆಗಳು ಪರಸ್ಪರ ಅನ್ಯಭಾಷೆಗಳೇ ಆಗಿರಬೇಕಾಗಿಲ್ಲ. ಒಂದೇ ಭಾಷೆಯ ಎರಡು ಅವಸ್ಥಾ ಭೇದಗಳ ನಡುವೆ ಕೃತಿಗಳ ಭಾಷಾಂತರ ನಡೆಯಬಹುದು. ಎರಡೂ ಪ್ರಾದೇಶಿಕ ಭಾಷಾ ಪ್ರಭೇದಗಳ ನಡುವೆಯೂ ಭಾಷಾಂತರ ನಡೆಯಬಹುದು. ಎರಡು ಭಾಷಿಕ ಧ್ರುವಗಳ ನಡುವೆ ಅನುಸಂಧಾನ ಪ್ರಕ್ರಿಯೆಗೆ ಭಾಷಾಂತರದ ಮೂಲಕ ಚಾಲನೆ ದೊರೆಯುತ್ತದೆ.

ಕನ್ನಡದಲ್ಲಿ ಹಳಗನ್ನಡ ಕಾವ್ಯಗಳ ಹೊಸಗನ್ನಡ ಸರಳಾನುವಾದ, ಪದ್ಯದಿಂದ ಗದ್ಯ

ಭಾಷಾಂತರ, ಒಂದು ಪ್ರದೇಶದ ಭಾಷೆಯಿಂದ ಇನ್ನೊಂದು ಪ್ರದೇಶದ ಭಾಷೆಗೆ ಮಾಡುವ ಭಾಷಾಂತರಗಳು, ಇವೆಲ್ಲವುಗಳನ್ನು ತೌಲನಿಕ ಪರಿಶೀಲನೆಗೆ ಒಳಪಡಿಸುವುದು ಸಾಧ್ಯವಿದೆ.

ಒಂದೇ ಪಠ್ಯದ ವಿಭಿನ್ನ ಭಾಷಾಂತರಕಾರರ ಹಾಗೆ ವಿಭಿನ್ನ ಕಾಲಘಟ್ಟದ ಭಾಷಾಂತರಗಳ ತೌಲನಿಕ ಪರಿಶೀಲನೆಯೂ ಸಾಧ್ಯ. ಈ ಬಗೆಯ ತೌಲನಿಕ ಅಧ್ಯಯನಗಳಲ್ಲಿ ಭಾಷಾಂತರಕಾರರ ವಿಭಿನ್ನ ದೃಷ್ಟಿಕೋನಗಳು, ಆದ್ಯತೆಗಳು, ವಿಭಿನ್ನ ವ್ಯಾಖ್ಯಾನಗಳು, ಹಾಗೆಯೇ ವಿಭಿನ್ನ ಕಾಲ ಘಟ್ಟಗಳಲ್ಲಿ ಭಾಷಾಂತರಗಳನ್ನು ಪ್ರಭಾವಿಸಿದ ಘಟಕಗಳು ಹಾಗೂ ಭಾಷಾಂತರಗಳ ಭಾಷೆ ಅಧ್ಯಯನದವರೆಗೂ ವಿಸ್ತರಿಸಲು ಅವಕಾಶವಿದೆ.

ಮೂಲ ಪಠ್ಯದ ಜೊತೆಗೆ ತೌಲನಿಕ ಅಧ್ಯಯನ ಮಾಡುವಲ್ಲಿ ಮಧ್ಯವರ್ತಿ ಭಾಷೆಯ ಸಂದರ್ಭವನ್ನು ಪ್ರತ್ಯೇಕವಾಗಿ ಪರಿಶೀಲಿಸಬಹುದು. ಮೂಲ ರಷ್ಯನ್ ಭಾಷೆಯ ಕೃತಿಯೊಂದು ಇಂಗ್ಲಿಷ್ ಎಂಬ ಮಧ್ಯವರ್ತಿ ಭಾಷೆಯ ಮೂಲಕ ಲಕ್ಷ್ಯಭಾಷೆಗೆ ಬಂದಾಗ ತೌಲನಿಕ ಅಧ್ಯಯನವು ಲಕ್ಷ್ಯಭಾಷೆಯ ಪಠ್ಯ ಮತ್ತು ಮೂಲಭಾಷೆಯ ಪಠ್ಯದ ಜೊತೆಗೆ ತುಲನೆ ಮಾಡುವುದು ಒಂದು ಬಗೆಯಾದರೆ ಭಾಷಾಂತರಕ್ಕೆ ಮೂಲವಾದ ಮಧ್ಯವರ್ತಿ ಭಾಷೆಯ ಪಠ್ಯವನ್ನು ಸಹ ಅಧ್ಯಯನದಲ್ಲಿ ಆಕರಗಳಾಗಿ ಬಳಸಿಕೊಳ್ಳಬಹುದು. ಮೂರು ಪಠ್ಯಗಳ ಪರಸ್ಪರ ಸಂಬಂಧಗಳನ್ನು ತೌಲನಿಕವಾಗಿ ಪರಿಶೀಲಿಸಿ ಅಧ್ಯಯನದ ಹೊಸ ಪರಿಕ್ರಮವನ್ನು ಹುಟ್ಟು ಹಾಕಬಹುದು.

ಪ್ರೇರಣೆ ಪ್ರಭಾವಗಳ ಅಧ್ಯಯನ

ಲಕ್ಷ್ಯಭಾಷೆಯಲ್ಲಿ ಭಾಷಾಂತರಗಳು ರೂಪಿಸಿದ ನಿರ್ದಿಷ್ಟ ಪ್ರೇರಣೆಗಳನ್ನು ಗುರುತಿಸುವುದು ಈ ಮಾದರಿಯ ಅಧ್ಯಯನಗಳ ಮುಖ್ಯ ಲಕ್ಷ್ಯ. ಪ್ರೇರಣೆಗಳು ಆಕರ ಪಠ್ಯವು ಆ ಭಾಷೆಯ ಸಂದರ್ಭದಲ್ಲಿ ರೂಪಿಸಿದ ಪ್ರಭಾವ, ಪ್ರಚೋದನೆಗಳ ಸ್ವರೂಪದಲ್ಲಿರಬಹುದು. ಅದನ್ನು ಆಕರ ಭಾಷೆಯ ಸಾಹಿತ್ಯ ಚರಿತ್ರೆಯ ಹಿನ್ನೆಲೆಯಿಂದ ಅರಿತುಕೊಳ್ಳುವ ಪ್ರಯತ್ನ ಮಾಡ ಬಹುದು. ಹಾಗೆಯೇ ಭಾಷಾಂತರ ಪಠ್ಯವು ಲಕ್ಷ್ಯಭಾಷೆಯ ಸಂದರ್ಭದಲ್ಲಿ ಮಾಡಿದ ಪ್ರೇರಣೆ ಹಾಗೂ ಪ್ರಭಾವಗಳನ್ನು ಸಹ ಪರಿಶೀಲಿಸಿ ಅಧ್ಯಯನ ಮಾಡುವುದು ಒಂದು ಬಗೆಯಾಗಬಹುದು. ಯಾವುದೇ ಸಾಹಿತ್ಯದ ಬೆಳವಣಿಗೆಯ ಹಿಂದೆ ಅನ್ಯಭಾಷಾ ಪ್ರಭಾವವಿದೆ ಎಂಬ ಪೂರ್ವಪ್ರಮೇಯದಿಂದ ಇಂತಹ ಅಧ್ಯಯನವನ್ನು ಸೈದ್ಧಾಂತೀಕರಿಸಬಹುದು. ಅಂತಹ ಅನ್ಯಭಾಷಾ ಪ್ರಭಾವವು ಭಾಷಾಂತರ ಪಠ್ಯಗಳ ಮೂಲಕ ಆಗಿದೆ ಎಂಬ ತರ್ಕವನ್ನು ಮುನ್ನೆಲೆಗೆ ತಂದು ಸೋದಾಹರಣವಾಗಿ ವಿವರಿಸುತ್ತ ಇಂತಹ ಅಧ್ಯಯನಗಳನ್ನು ವಿಸ್ತರಿಸಲು ಅವಕಾಶವಿದೆ. ಲಕ್ಷ್ಯಭಾಷೆಯ ಭಾಷಾಂತರ ಪಠ್ಯ ಮತ್ತು ಸೃಜನಶೀಲ ಪ್ರಕ್ರಿಯೆಯ ಸ್ವರೂಪ ವನ್ನು ಅನುಸಂಧಾನಗೊಳಿಸುವ ಅಧ್ಯಯನ ಕ್ರಮವಿದು. ಇಲ್ಲಿ ಸೃಜನಶೀಲ ಪ್ರಕ್ರಿಯೆಗಳಿಗೆ ಬಿಡಿ ಬಿಡಿ ಪಠ್ಯಗಳಾಗಿಯೋ ಒಟ್ಟಂದದಲ್ಲಿ ಭಾಷಾಂತರ ಪಠ್ಯಗಳ ರಚನೆ ಹಾಗೂ ಆಶಯಗಳ ನೆಲೆಯಿಂದಲೂ ಅಧ್ಯಯನದ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳಲು ಸಾಧ್ಯವಿದೆ.

ಕನ್ನಡ ದುರಂತ ನಾಟಕಗಳ ರಚನೆಗೆ ಗ್ರೀಕ್ ದುರಂತ ನಾಟಕಗಳ ಪ್ರೇರಣೆ, ದಲಿತ ಸಾಹಿತ್ಯಕ್ಕೆ ತೆಲುಗು ದಿಗಂಬರ ಸಾಹಿತ್ಯದ ಪ್ರಭಾವ, ಪ್ರಗತಿಶೀಲ ಸಾಹಿತ್ಯ ರಚನೆಯಲ್ಲಿ ಪ್ರೇಮ್‌ಚಂದರ ಅನುವಾದಗಳ ಪ್ರಭಾವ ಇತ್ಯಾದಿ ಅಧ್ಯಯನಗಳನ್ನು ಕೈಗೊಳ್ಳಲು ಅವಕಾಶವಿದೆ.

ಮರಾಠಿಯ ದಲಿತ ಆತ್ಮಕತೆಗಳು ಕನ್ನಡದ ದಲಿತ ಆತ್ಮಕತೆಗಳಿಗೆ ದಾರಿ ಮಾಡಿ

ಕೊಟ್ಟುದೂ ಪ್ರಸ್ತುತ ಸಂದರ್ಭದಲ್ಲಿ ಅಧ್ಯಯನ ಯೋಗ್ಯ ವಿಷಯವಾಗಬಹುದು.

ಭಾಷಾಂತರಗಳ ಸಮೀಕ್ಷಾ ಅಧ್ಯಯನ

ಭಾಷಾಂತರ ಪಠ್ಯಗಳನ್ನು ಸಮೀಕ್ಷಾ ರೂಪದಲ್ಲಿ ಮಂಡಿಸುವ ಐತಿಹಾಸಿಕ ಅಧ್ಯಯನ ಕ್ರಮವಿದು. ವರ್ಷವಾರು, ಭಾಷಾಂತರ ಪಠ್ಯಗಳನ್ನು ಗುರುತಿಸಿ ಅವುಗಳಲ್ಲಿ ಐತಿಹಾಸಿಕ ಬೆಳವಣಿಗೆಯನ್ನು ಗುರುತಿಸುವ ಚಾರಿತ್ರಿಕ ಮಾದರಿಯ ಅಧ್ಯಯನವನ್ನು ರೂಪಿಸುವುದು ಸಾಧ್ಯವಿದೆ. ನಿರ್ದಿಷ್ಟ ಆಕರ ಭಾಷೆಯ ಪಠ್ಯಗಳನ್ನು ಲಕ್ಷ್ಯವಾಗಿರಿಸಿ ಸಮೀಕ್ಷಿಸುವುದು ಒಂದು ಬಗೆ. ನಿರ್ದಿಷ್ಟ ಪ್ರಕಾರಗಳ ಭಾಷಾಂತರ ಪಠ್ಯಗಳನ್ನು ಸಮೀಕ್ಷಿಸುತ್ತಲೇ ಪ್ರಕಾರಗಳ ಬೆಳವಣಿಗೆಯನ್ನು ಐತಿಹಾಸಿಕವಾಗಿ ಗುರುತಿಸುವುದು ಪ್ರಸ್ತುತ ಅಧ್ಯಯನ ಮಾದರಿಯ ಕೇಂದ್ರ ಪ್ರಜ್ಞೆಯಾಗಿರುತ್ತದೆ. ಇಂತಹ ಅಧ್ಯಯನ ಮಾದರಿಗಳ ಮೂಲಕ ಅನ್ಯ ಭಾಷೆ ಹಾಗೂ ಪ್ರಕಾರವೊಂದರ ಪಠ್ಯಗಳ ಸಮಗ್ರ ಚಿತ್ರ ದೊರೆಯುವುದರೊಂದಿಗೆ ಆಯಾ ಭಾಷಾ ಪಠ್ಯಗಳು ಹಾಗೂ ಪ್ರಕಾರಗಳು ಲಕ್ಷ್ಯಭಾಷೆಯ ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಮಾಡಿದ ಪ್ರೇರಣೆ ಪ್ರಭಾವಗಳನ್ನು ಸಹ ಅಧ್ಯಯನ ವ್ಯಾಪ್ತಿಯಲ್ಲಿ ವಿಸ್ತರಿಸುವುದಕ್ಕೆ ಅವಕಾಶವಿರುತ್ತದೆ. ಇಂತಹ ಅಧ್ಯಯನಗಳು ಭಾಷಾಂತರಗಳ ಚರಿತ್ರೆಯನ್ನು ರೂಪಿಸಲು ನೆರವಾಗಬಹುದು. ಒಂದು ರೀತಿಯಲ್ಲಿ ಆಯಾ ಭಾಷೆ ಹಾಗೂ ಪ್ರಕಾರಗಳ ಭಾಷಾಂತರ ಪಠ್ಯಗಳ ಸಮಗ್ರ ಶೋಧ ಹಾಗೂ ಸಂಗ್ರಹ ಇಲ್ಲಿನ ಮುಖ್ಯ ಚಟುವಟಿಕೆಯಾಗಿರುತ್ತದೆ. ಇನ್ನೊಂದು ರೀತಿಯಲ್ಲಿ ಭಾಷಾಂತರಗಳ ಮಾಹಿತಿ ಕ್ರೋಡೀಕರಣ ಹಾಗೂ ವಿಶ್ಲೇಷಣೆಯ ಸ್ವರೂಪದಲ್ಲಿಯೂ ಇಂತಹ ಅಧ್ಯಯನಗಳನ್ನು ವಿಸ್ತರಿಸಿಕೊಳ್ಳಬಹುದು.

ಭಾಷಾಂತರ ಕೃತಿಗಳ ಪರಿಚಯಾತ್ಮಕ ಬರವಣಿಗೆಯೊಡನೆ ಐತಿಹಾಸಿಕವಾಗಿ ಭಾಷಾಂತರ ಗಳು ಬೆಳೆದು ಬಂದ ಕ್ರಮವನ್ನು ಅಧ್ಯಯನ ಮಾಡಬಹುದು. ಕನ್ನಡಕ್ಕೆ ಬಂದ ಇತರೆ ಭಾಷೆಗಳ ಕೃತಿಗಳನ್ನು ಭಾಷೆಯನ್ನು ಆಧರಿಸಿ ಅಥವಾ ಪ್ರಕಾರವನ್ನು ಆಧರಿಸಿ ಅಧ್ಯಯನ ಮಾಡಲು ಆಸ್ಪದವಿದೆ.

ಭಾಷಾಂತರ ಸಾಹಿತ್ಯ ಬೆಳವಣಿಗೆಯ ಅಧ್ಯಯನ

ಭಾಷಾಂತರ ಸಾಹಿತ್ಯ ಲಕ್ಷ್ಯಭಾಷೆಯಲ್ಲಿ ಬೆಳವಣಿಗೆಯಾದ ಬಗೆಯನ್ನು ಪರಿಶೀಲಿಸುವ ಅಧ್ಯಯನವಿದು. ಲಕ್ಷ್ಯಭಾಷೆಯಲ್ಲಿ ಬೇರೆ ಬೇರೆ ಭಾಷೆಗಳಿಂದ ಬಂದ ಭಾಷಾಂತರಗಳು ಒಂದು ಇನ್ನೊಂದರ ಮುಂದುವರಿಕೆಯಾಗಿ ರೂಪುಗೊಂಡುದು ಈ ಕುರಿತು ಅಧ್ಯಯನ ಮಾಡುವುದಕ್ಕೆ ಅವಕಾಶವಿದೆ. ಒಂದು ನಿರ್ದಿಷ್ಟ ಆಕರ ಭಾಷೆಯ ಭಾಷಾಂತರಗಳ ಬೆಳವಣಿಗೆ ಯನ್ನು ಗುರುತಿಸುವುದರ ಮೂಲಕ ಅಧ್ಯಯನವನ್ನು ಭಾಷಾನಿಷ್ಠವಾಗಿ ವಿಸ್ತರಿಸಬಹುದು. ಹಾಗೆಯೇ ನಿರ್ದಿಷ್ಟ ಪ್ರಕಾರ ಕೇಂದ್ರಿತವಾಗಿಯೂ ಅಧ್ಯಯನವನ್ನು ವಿಸ್ತರಿಸಬಹುದು.

ನಿರ್ದಿಷ್ಟ ಕಾಲಘಟ್ಟವೊಂದರಲ್ಲಿ ಬೇರೆ ಬೇರೆ ಭಾಷೆಗಳಿಂದ ಬಂದ ಸಾಹಿತ್ಯಾನುವಾದಗಳು ಅವುಗಳ ವಿಭಿನ್ನ ಉದ್ದೇಶಗಳು, ಧೋರಣೆಗಳ ಕುರಿತ ಅಧ್ಯಯನವನ್ನು ಮಾಡಬಹುದು. ಇದರಿಂದ ಒಂದೇ ಕಾಲಘಟ್ಟದಲ್ಲಿ ಅನ್ಯಭಾಷಾ ಸಾಹಿತ್ಯವನ್ನು ಲಕ್ಷ್ಯಭಾಷೆಯಲ್ಲಿ ಸ್ವೀಕರಿಸುವುದಕ್ಕೆ ಕಾರಣವಾದ ಸಾಂದರ್ಭಿಕ ಇತಿಹಾಸದ ಶೋಧವೂ ಸಾಧ್ಯವಿದೆ.

ಕನ್ನಡದಲ್ಲಿ ಇಂಗ್ಲಿಷ್‌ನಿಂದ ಬಂದ ಭಾಷಾಂತರಗಳು, ಬಂಗಾಳಿಯಿಂದ ಬಂದ ಭಾಷಾಂತರಗಳು, ಒಂದರ ನಂತರ ಇನ್ನೊಂದು ಭಾಷೆಯ ಭಾಷಾಂತರಗಳು ಆಯಾ ಆಕರ

ಭಾಷೆಯ ಕೃತಿಗಳನ್ನು ಪರಿಚಯಿಸುವುದರ ಮೂಲಕ ಆಕರ ಭಾಷೆಯ ಬಗೆಗಿನ ಕಲ್ಪನೆಯನ್ನು ರೂಪಿಸುವ ಬಗೆಯನ್ನು ಅಧ್ಯಯನ ಮಾಡಬಹುದು. ಷೇಕ್ಸ್‌ಪಿಯರ್ ಅನುವಾದಗಳು ಒಂದು ಇನ್ನೊಂದರಿಂದ ವಿಸ್ತೃತಗೊಳ್ಳುತ್ತ ಲಕ್ಷ್ಯಭಾಷೆಯಲ್ಲಿ ಸ್ವೀಕಾರ ಗೊಳ್ಳುತ್ತಿರುವುದನ್ನು ಕುರಿತು ಅಧ್ಯಯನ ಮಾಡಬಹುದು. ಪ್ರಕಾರನಿಷ್ಠವಾಗಿ ಬಿ.ಎಂ.ಶ್ರೀಯವರ ಇಂಗ್ಲಿಷ್ ಗೀತಗಳು ಪ್ರಕಟವಾದ ನಂತರ ಹಾಗೂ ಅದಕ್ಕೂ ಮೊದಲು ಕಾವ್ಯಾನುವಾದಗಳು ರೂಪುಗೊಂಡ ಬಗೆಯನ್ನು ಪರಿಶೀಲಿಸುವ ಅಧ್ಯಯನವನ್ನು ರೂಪಿಸಬಹುದು.

ಭಾಷಾಂತರ ಭಾಷೆಯ ಅಧ್ಯಯನ

ಭಾಷಾಂತರ ಭಾಷೆಗಳ ಬಗೆಗೆ ವಿಭಿನ್ನವಾಗಿ ಅಧ್ಯಯನಗಳನ್ನು ರೂಪಿಸಬಹುದು. ಆಕರ ಪಠ್ಯವೊಂದು ಲಕ್ಷ್ಯಭಾಷೆಯ ವಿಭಿನ್ನ ಕಾಲಘಟ್ಟಗಳಲ್ಲಿ ಹಲವು ಬಾರಿ ಬೇರೆ ಬೇರೆ ಯವರಿಂದ ಭಾಷಾಂತರವಾಗಿ ಪ್ರಕಟವಾಗಿರುತ್ತವೆ. ಮೂಲ ಕೃತಿ ಹಾಗೂ ಲಕ್ಷ್ಯಭಾಷೆ ಒಂದೇ ಆಗಿದ್ದರೂ ಲಕ್ಷ್ಯಭಾಷೆಯಲ್ಲಿ ಬೇರೆ ಬೇರೆ ಅನುವಾದಕರು ಬೇರೆ ಬೇರೆ ಕಾಲಘಟ್ಟದಲ್ಲಿ ಬಳಸಿದ ಭಾಷೆಯೂ ಅಧ್ಯಯನ ಯೋಗ್ಯವಾದ ವಿಷಯ. ಒಂದೇ ಕಾಲಘಟ್ಟದಲ್ಲಿ ಪ್ರಕಟವಾದ ಭಾಷಾಂತರಗಳಲ್ಲಿಯೂ ವಿಭಿನ್ನ ಭಾಷಾ ಪ್ರಯೋಗಗಳಿರಬಹುದು. ಅವುಗಳ ಕಾರಣ ಶೋಧಗಳನ್ನು ಅಧ್ಯಯನದ ಮುಖ್ಯ ಲಕ್ಷ್ಯವಾಗಿಟ್ಟುಕೊಳ್ಳಬಹುದು. ವಿಭಿನ್ನ ಭಾಷಾ ಪ್ರಯೋಗಗಳೇ ಕಾರಣವಾಗಿ ಸಂವಹನದಲ್ಲಿ ಆಗುವ ಇತಿಮಿತಿಗಳು ಹಾಗೆಯೇ ಸಮಕಾಲೀನ ವಾಗಿ ಅನುಸಂಧಾನಗೊಳ್ಳುವ ಭಾಷೆ ಮೂಲ ಕೃತಿಯನ್ನು ಲಕ್ಷ್ಯಭಾಷೆಯಲ್ಲಿ ಮರುಮಂಡನೆ ಮಾಡುವಲ್ಲಿ ಭಾಷೆಯ ಪಾತ್ರವನ್ನು ಕಂಡುಕೊಳ್ಳುವುದು ಸಹ ಅಧ್ಯಯನದ ಕೇಂದ್ರ ದೃಷ್ಟಿಯಾಗಬಹುದು. 19ನೆಯ ಶತಮಾನದ ಉತ್ತರಾರ್ಧದಲ್ಲಿ 20ನೆಯ ಶತಮಾನದ ಪೂರ್ವಾರ್ಧದಲ್ಲಿ ಹಾಗೂ ಉತ್ತರಾರ್ಧದಲ್ಲಿ ಷೇಕ್ಸ್‌ಪಿಯರನ ನಾಟಕಗಳು ಭಾಷಾಂತರ ವಾಗಿವೆ. ಇವುಗಳ ಭಾಷೆಯೂ ಭಿನ್ನವಾಗಿವೆ. ಇವುಗಳಿಗೆ ಕಾರಣವನ್ನು ಸಾಂಸ್ಕೃತಿಕವಾಗಿ ಪರಿಶೀಲಿಸಲೂಬಹುದು. ಕನ್ನಡದಲ್ಲಿ ಒಂದಕ್ಕಿಂತಲೂ ಹೆಚ್ಚು ಅನುವಾದಗಳನ್ನು ಕಂಡ ಕೃತಿಗಳನ್ನು ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಪ್ರಾಥಮಿಕ ಆಕರಗಳಾಗಿ ಬಳಸಿಕೊಳ್ಳಬಹುದು. ಭಗವದ್ಗೀತೆ, ಅಭಿಜ್ಞಾನ ಶಾಕುಂತಲ, ಮೃಚ್ಛಕಟಿಕ, ಉತ್ತರರಾಮ ಚರಿತೆ, ಮ್ಯಾಕ್‌ಬೆತ್ ಮೊದಲಾದ ಕೃತಿಗಳು ಶತಮಾನಗಳ ಸುದೀರ್ಘವಾದ ಅವಧಿಯಲ್ಲಿ ಹಲವು ಭಾಷಾಂತರಗಳನ್ನು ಕಂಡಿವೆ. ಎಲ್ಲಾ ಕಾಲದಲ್ಲಿ ಆಕರನಿಷ್ಠವಾದ ಭಾಷಾಂತರಗಳು ಭಾಷೆಯ ದೃಷ್ಟಿಯಿಂದ ಸಮಕಾಲೀನ ನಿಷ್ಠವಾಗಿಯೂ ಭಾಷಾಂತರವಾಗಿರುತ್ತದೆ.

ಭಾಷಾಂತರ ತಾತ್ವಿಕತೆಗಳ ಅಧ್ಯಯನ

ಭಾಷಾಂತರ ಕೃತಿಗಳನ್ನು ರೂಪಿಸುವ ಸಂದರ್ಭದಲ್ಲಿ ಭಾಷಾಂತರಕಾರರ ದೃಷ್ಟಿಯಲ್ಲಿದ್ದ ತತ್ವ ಸಿದ್ಧಾಂತಗಳ ಶೋಧ ಪ್ರಸ್ತುತ ಅಧ್ಯಯನ ಮಾದರಿಗಳ ಮುಖ್ಯ ಉದ್ದೇಶವಾಗಬಹುದು. ಯಾವುದೇ ಭಾಷಾಂತರವನ್ನು ಶೋಧಿಸುವಾಗ ಕೃತಿಯ ವಸ್ತುನಿಷ್ಠವಾದ ತಾತ್ವಿಕತೆಯಾಗಿರ ಬಹುದು. ಅಥವಾ ಭಾಷಾಂತರಕಾರರ ವ್ಯಕ್ತಿನಿಷ್ಠವಾದ ಅಥವಾ ತರ್ಕಬದ್ಧವಾದ ವಿವೇಚನೆ ಗಳಾಗಿರಬಹುದು. ಅವುಗಳನ್ನು ಒಂದು ನಿರ್ದಿಷ್ಟವಾಗಿ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಪರಿಶೀಲಿಸು ವುದಕ್ಕೆ ಅವಕಾಶವಿದೆ. ಭಾಷಾಂತರಕ್ಕೆ ಆಯ್ಕೆ ಮಾಡಿಕೊಂಡ ಆಕರ ಪಠ್ಯವೊಂದು ಸಮಕಾಲೀನ ಸಾಂಸ್ಕೃತಿಕ ಪರಿಸರದಲ್ಲಿ ರೂಪುಗೊಳ್ಳುವ ಸಂದರ್ಭದಲ್ಲಿ

ಒಂದು ನಿರ್ದಿಷ್ಟ ತಾತ್ವಿಕತೆಗೆ ಬದ್ಧವಾಗಿಯೇ ಇರಬಹುದು. ಅದು ಭಾಷಾಂತರ ಮಾಡಿದ ಲೇಖಕರ ಬದ್ಧತೆಯಾಗಿರ ಬಹುದು. ಕೆಲವೊಮ್ಮೆ ಭಾಷಾಂತರವನ್ನು ಯೋಜಿಸಿದ ಸಂಸ್ಥೆಯ ಧ್ಯೇಯ ಧೋರಣೆಗಳಿಗೆ ಅನುಗುಣವಾದ ತಾತ್ವಿಕ ಬದ್ಧತೆಯಾಗಿರಬಹುದು. ಭಾಷಾಂತರ ಕೃತಿಗಳ ತತ್ವ ಸಿದ್ಧಾಂತಗಳು ಆಕರ ಭಾಷೆಯ ಸಂದರ್ಭಕ್ಕಿಂತ ಬೇರೆಯೇ ಆದ ರೀತಿಯಲ್ಲಿ ಪುನರ್ರಚನೆಯಾಗಿ ಲಕ್ಷ್ಯ ಭಾಷೆಯಲ್ಲಿ ಪ್ರಕಟವಾಗಬಹುದು. ಇಂತಹ ಪುನರ್ರಚನೆಯ ವೇಳೆ ಲಕ್ಷ್ಯಭಾಷೆಯ ಸಮಾಜ, ಸಮುದಾಯ, ಧರ್ಮ, ರಾಜಕೀಯಗಳು ತಾತ್ವಿಕವಾಗಿ ನಿಯಂತ್ರಿಸಬಹುದು. ಅದು ಭಾಷಾಂತರ ಲಕ್ಷ್ಯ ಓದುಗರನ್ನು ದೃಷ್ಟಿಯಲ್ಲಿರಿಸಿಕೊಂಡ ತಾತ್ವಿಕ ಬದ್ಧತೆಯೂ ಆಗಿರಬಹುದು. ಹಾಗಾಗಿ ಭಾಷಾಂತರ ಕೃತಿಯೊಂದು ಲಕ್ಷ್ಯಭಾಷೆಯಲ್ಲಿ ಸಮಕಾಲೀನವಾಗಿ ಪ್ರಸ್ತುತಗೊಳ್ಳುವುದು ಹಾಗೆಯೇ ಪ್ರಚಾರ ಪಡೆಯುವುದು ಅದರ ಸೈದ್ಧಾಂತಿಕ ನಿಲುವುಗಳ ಕಾರಣಕ್ಕೇ ಆಗಿರಬಹುದು. ಕೃತಿ ಪ್ರತಿಪಾದಿಸುವ ನಿಲುವುಗಳು ಲಕ್ಷ್ಯಭಾಷೆಯಲ್ಲಿ ಅಪ್ರಸ್ತುತವಾಗುವ ಸಂದರ್ಭದಲ್ಲಿ ಮತ್ತೆ ಅದು ಕಾಲದ ಮರೆಗೆ ಸಂದುಬಿಡಬಹುದು. ಲಕ್ಷ್ಯಭಾಷೆಯಲ್ಲಿ ಓದುಗರು ಕೃತಿಯ ನಿಲುವುಗಳನ್ನು ಬೆಂಬಲಿಸುವಷ್ಟು ಕಾಲದವರೆಗೆ ಅದಕ್ಕೆ ಪ್ರಚಾರ ದೊರೆಯಬಹುದು. ಆಕರ ಕೃತಿಯ ನಿಲುವುಗಳು ಕಾಲಾತೀತವಾಗಿ ಒಪ್ಪಿಗೆಯಾಗದ ಕಾರಣಕ್ಕಾಗಿಯೇ ಅವುಗಳು ಭಾಷಾಂತರವಾಗುವುದಿಲ್ಲ. ಆಕರ ಕೃತಿಯ ನಿಲುವುಗಳಾಗಲಿ, ಲಕ್ಷ್ಯಭಾಷೆಯಲ್ಲಿ ಭಾಷಾಂತರ ಪಠ್ಯದ ನಿಲುವುಗಳಾಗಲಿ ಸಮಕಾಲೀನ ಒಲವು ತೋರುವವರೆಗೆ ಅವುಗಳು ಮತ್ತೆ ಮತ್ತೆ ಪುನರ್ ನಿರೂಪಣೆಗಳಿಗೊ, ಪುನರ್‌ವ್ಯಾಖ್ಯಾನಗಳಿಗೋ ಕಾರಣವಾಗುತ್ತದೆ. ಭಾಷಾಂತರ ಕೃತಿಯೊಂದರ ಪ್ರಚಾರ, ಜನಪ್ರಿಯತೆ ಮತ್ತು ಬಹುಭಾಷಾಂತರಗಳು ರೂಪುಗೊಳ್ಳಲು ಕೆಲವೊಂದು ಸಂದರ್ಭದಲ್ಲಿ ಕೃತಿಯ ಸೈದ್ಧಾಂತಿಕ ನಿಲುವುಗಳೇ ಕಾರಣವಾಗಬಹುದು. ಅದೆಲ್ಲದರಲ್ಲಿಯೂ ಕೃತಿ, ವಸ್ತು, ಸಾಹಿತ್ಯಕ ಗುಣ ಇತ್ಯಾದಿಗಳಿಂದ ಓದುಗ ಪ್ರಿಯವಾಗಿರುವ ಸಾಧ್ಯತೆಗಳೂ ಇರುತ್ತವೆ. ಭಾಷಾಂತರಗಳನ್ನು ರೂಪಿಸುವ ಕಾಲಘಟ್ಟದ ರಾಜಕೀಯ, ಸಾಮಾಜಿಕ ವಿದ್ಯಮಾನಗಳು ಸಹ ಅನೇಕ ಸಂದರ್ಭಗಳಲ್ಲಿ ಕೃತಿಗಳ ತಾತ್ವಿಕತೆಯನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಅಂದರೆ ಭಾಷಾಂತರ ಕೃತಿಗಳ ತಾತ್ವಿಕತೆಯ ಅಧ್ಯಯನ ಎಂಬುದು ಭಾಷಾಂತರಗಳ ಸಮಕಾಲೀನ ಸಾಂಸ್ಕೃತಿಕ ಇತಿಹಾಸದ ಭಾಗವೂ ಆಗಿಬಿಡುತ್ತದೆ. ಭಾಷಾಂತರ ಪಠ್ಯಗಳು ಕಾಲದ ಪ್ರತಿಸ್ಪಂದಿಯಾಗಿ ಲಕ್ಷ್ಯಭಾಷೆಯಲ್ಲಿ ಅನಾವರಣ ಗೊಳ್ಳುತ್ತವೆ ಎಂಬುದನ್ನು ಇದು ಸ್ಪಷ್ಟಪಡಿಸುತ್ತದೆ.

ಅನ್ವಯಿಕ ಅಧ್ಯಯನ

ಸಿದ್ಧಾಂತಗಳನ್ನು ಭಾಷಾಂತರ ಕೃತಿಗಳಿಗೆ ಅನ್ವಯಿಸಿ ಮಾಡುವ ಅಧ್ಯಯನವಿದು. ಮೂಲ ಕೃತಿಯ ಲೇಖಕರು ಏನನ್ನು ಹೇಳಿದ್ದಾರೆ? ಏಕೆ ಹೇಳಿದ್ದಾರೆ? ಹೇಗೆ ಹೇಳಿದ್ದಾರೆ? ಎಂದು ಪ್ರಶ್ನಿಸಿಕೊಂಡು ಅನುವಾದಕರು ಅವುಗಳನ್ನು ವಸ್ತು, ಶೈಲಿ, ಭಾಷೆಗಳ ಮೂಲಕ ಮರುನಿರೂಪಣೆ ಮಾಡುವಲ್ಲಿ ಅನುಸರಿಸಿದ ಸೈದ್ಧಾಂತಿಕ ನೆಲೆಗಳನ್ನು ಕಂಡುಕೊಳ್ಳಬಹುದು. ಹಾಗೆಯೇ ಮೂಲ ಪಠ್ಯದ ಗೊಡವೆಗೆ ಹೋಗದೆಯೇ ಭಾಷಾಂತರ ಪಠ್ಯವನ್ನು ಕುರಿತು ಈ ಪ್ರಶ್ನೆಗಳನ್ನು ಕೇಳಿ ಅಧ್ಯಯನಕಾರರು ಕೃತಿಯ ಸೈದ್ಧಾಂತಿಕ ನೆಲೆಗಳನ್ನು ಗುರುತಿಸಬಹುದು. ಮೂಲನಿಷ್ಠವೇ ಭಾಷಾಂತರದ ಮೂಲತತ್ವ ಎಂಬ ನಿಲುವನ್ನು ಇರಿಸಿಕೊಂಡು ಲಕ್ಷ್ಯಪಠ್ಯವನ್ನು ಪರಿಶೀಲಿಸಬಹುದು. ಅಲ್ಲದೆ, ಈಗಾಗಲೇ ಭಾಷಾಂತರ ತತ್ವಗಳಲ್ಲಿ ಪ್ರಮುಖ

ವಾದುದೆಂದು ಗುರುತಿಸಲಾದ ವಿಧೇಯತೆಯ ತತ್ತ್ವ, ಆನಂದದ ತತ್ತ್ವ, ಮೂಲ ಆಭಾಸದ ತತ್ತ್ವ, ಅನುರೂಪದ ತತ್ತ್ವ, ಪರಿಹಾರದ ತತ್ತ್ವ ಇತ್ಯಾದಿಗಳನ್ನು ಭಾಷಾಂತರ ಪಠ್ಯಗಳ ಸಂದರ್ಭದಲ್ಲಿ ಅನ್ವಯಿಸಿಕೊಂಡು ಅಧ್ಯಯನವನ್ನು ವಿಸ್ತರಿಸಬಹುದು.

ಸಾಂಸ್ಕೃತಿಕ ಅಧ್ಯಯನಗಳು

ಸಾಂಸ್ಕೃತಿಕ ಅಧ್ಯಯನಗಳು ಈ ಕ್ಷೇತ್ರದಲ್ಲಿ ಇಂದು ಹೆಚ್ಚು ಚಾಲ್ತಿಗೆ ಬರಲಾರಂಭಿಸಿವೆ. ಭಾಷಾಂತರ ಕೃತಿಗಳ ಸಾಂಸ್ಕೃತಿಕ ಸಮಸ್ಯೆಗಳು, ಭಾಷಾಂತರಗಳ ಸಾಂಸ್ಕೃತಿಕ ರಾಜಕಾರಣ, ಭಾಷಾಂತರಗಳಲ್ಲಿ ಸಾಂಸ್ಕೃತಿಕ ಪಲ್ಲಟಗಳು, ಭಾಷಾಂತರಗಳಲ್ಲಿ ದೇಸಿ ಸಂಸ್ಕೃತಿಗಳು ಭಾಷಾಂತರಗಳಲ್ಲಿ ಭಾಷಿಕ ಸಂಸ್ಕೃತಿಗಳು ಇತ್ಯಾದಿ ಸಂಸ್ಕೃತಿನಿಷ್ಠ ಅಧ್ಯಯನಗಳು ಇತ್ತೀಚಿನ ದಿನಗಳಲ್ಲಿ ಮುಂಚೂಣಿಗೆ ಬರುತ್ತಿರುವುದನ್ನು ಕಾಣಬಹುದು. ಹಾಗೆಯೇ ಮೂಲ ಹಾಗೂ ಲಕ್ಷ್ಯಪಠ್ಯಗಳ ಸಂಸ್ಕೃತಿಗಳ ತೌಲನಿಕ ಪರಿಶೀಲನೆಯ ನೆಲೆಯಿಂದಲೇ ಈ ತೆರನ ಅಧ್ಯಯನ ಗಳನ್ನು ವಿಸ್ತರಿಸಬಹುದು. ಭಾಷಾಂತರಗಳ ಸಂಸ್ಕೃತಿ ಅಧ್ಯಯನವು ಏಕ ಸಂಸ್ಕೃತಿಯ ಅಧ್ಯಯನವಾಗಿರದೆ ಬಹುಸಂಸ್ಕೃತಿಗಳ ಅಂತರ್ ಸಂಸ್ಕೃತಿ ಅಧ್ಯಯನವಾಗಿ ಉಪಯುಕ್ತವಾಗಿ ಬೆಳೆಸಬಹುದು. ಎರಡು ಸಂಸ್ಕೃತಿಗಳಲ್ಲಿ ಷೇಕ್ಸ್‌ಪಿಯರ್‌ನಂತಹ ಕೃತಿಗಳು ಈ ಮಾದರಿಯ ಅಧ್ಯಯನಕ್ಕೆ ದೃಷ್ಟಾಂತಗಳಾಗಬಹುದು.

ಭಾಷಾಂತರ ಬಗೆಗಳ ಅಧ್ಯಯನ

ಪುನರ್ಲೇಖನ, ರೂಪಾಂತರ, ನೇರಾನುವಾದ, ಭಾವಾನುವಾದ, ಸಂಗ್ರಹಾನುವಾದ, ವಿಸ್ತೃತಾನುವಾದ, ಸರಳಾನುವಾದ ಇವೆಲ್ಲಾ ಭಾಷಾಂತರ ಬಗೆಗಳು.

ಸಮಕಾಲೀನ ಅಗತ್ಯದ ಕಾರಣಕ್ಕಾಗಿಯೇ ಭಾಷಾಂತರದ ಬಗೆಗಳು ಲಕ್ಷ್ಯಭಾಷೆಯಲ್ಲಿ ರೂಪುಗೊಳ್ಳುತ್ತವೆ ಎಂಬ ಸಾಮಾನ್ಯ ತತ್ವದ ನೆಲೆಯಲ್ಲಿ ಅಧ್ಯಯನವನ್ನು ರೂಪಿಸಬೇಕಾಗಿದೆ. ಭಾಷಾಂತರದ ಬಗೆಗಳು ರೂಪುಗೊಳ್ಳಲು ಇರುವ ಕಾರಣಗಳ ಶೋಧ ಅಧ್ಯಯನದ ಮುಖ್ಯಪ್ರಜ್ಞೆಯಾಗಬಹುದು. ಹಾಗೆಯೇ ಅವುಗಳನ್ನು ರೂಪಿಸುವಲ್ಲಿ ಬಳಸಿದ ಕೌಶಲ್ಯಗಳ ಕುರಿತ ಅಧ್ಯಯನದ ವರೆಗೂ ವಿಸ್ತರಿಸಬಹುದು.

ಆಕರ ಭಾಷೆಯ ಪಠ್ಯವೊಂದು ತನ್ನ ಅನ್ಯದೇಶೀಯತೆಯನ್ನು ನಿರಾಕರಿಸಿ ಲಕ್ಷ್ಯ ಭಾಷೆಯಲ್ಲಿ ಸ್ಥಳೀಕರಣಗೊಳ್ಳುವುದರ ಮೂಲಕವೇ ಪ್ರಸ್ತುತಗೊಳ್ಳುವುದು ಇಲ್ಲಿನ ಮುಖ್ಯ ಕಾಳಜಿಯಾಗಿರು ತ್ತದೆ. ಆದರೆ ಪ್ರತಿಯೊಂದು ಆಕರ ಪಠ್ಯವು, ಸಮಕಾಲೀನವಾದ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ, ರಾಜಕೀಯ ಪ್ರಭಾವಕ್ಕೆ ಒಳಗಾಗಿ ಪುನರ್ಲೇಖನಗೊಳ್ಳುವ ಸಾಧ್ಯತೆಗಳಿರುತ್ತದೆ. ಅಥವಾ ಭಾಷಾಂತರಕಾರರೇ ಆಕರ ಪಠ್ಯವನ್ನು ಲಕ್ಷ್ಯಭಾಷೆಯ ಸಾಂಸ್ಕೃತಿಕ ಆವರಣಕ್ಕೆ ಅನುಗುಣವಾಗಿ ಹೊಂದಿಸಿ ರೂಪಿಸುವ ಪಠ್ಯವಾಗಿ ಪರಿವರ್ತಿಸುವುದಕ್ಕೆ ಇರುವ ಕಾರಣಗಳನ್ನು ಶೋಧಿಸುವುದು ಅಧ್ಯಯನದ ಮುಖ್ಯ ಕಾಳಜಿಯಾಗಿಯೂ ರೂಪಿಸಬಹುದು. ಅಲ್ಲದೆ ಪುನರ್ಲೇಖನ ಅಥವಾ ರೂಪಾಂತರಗಳು ಆಕರ ಪಠ್ಯಕ್ಕಿಂತಲೂ ಭಿನ್ನವಾಗಿ ಸ್ಥಳೀಕರಣ ಗೊಳ್ಳುವುದರ ಮೂಲಕ ಹೊರಡಿಸಬಹುದಾದ ಹೊಸ ಧ್ವನಿಗಳನ್ನು ಗುರುತಿಸುವ ಶೋಧವೂ ಆಗಬಹುದು.

ಹನ್ನೆರಡನೆಯ ಶತಮಾನದ ಕ್ರಾಂತಿಯನ್ನು ಆಧರಿಸಿದ ನಾಟಕಗಳು, ಬಸವಣ್ಣ, ಅಕ್ಕ ಮಹಾದೇವಿ ಮೊದಲಾದ ಶರಣರ ಜೀವನವನ್ನಾಧರಿಸಿದ ಕಾದಂಬರಿಗಳು, ಪುರಾಣ,

ಇತಿಹಾಸಗಳ ಪಾತ್ರಗಳನ್ನಾಧರಿಸಿದ ಕಾದಂಬರಿ, ನಾಟಕಗಳನ್ನು ಪುನರ್ಲೇಖನದ ವ್ಯಾಪ್ತಿಯಲ್ಲಿ ಅಧ್ಯಯನ ಕೈಗೊಳ್ಳಬಹುದು.

ಭಾಷಾಂತರವನ್ನು ಭಾಷಾಂತರವಾಗಿಯೇ ಪರಿಗಣಿಸಿ ಅಧ್ಯಯನ ಮಾಡಲು ಇಲ್ಲಿ ಅವಕಾಶವಿದೆ. ಇದು ಭಾಷಾಂತರಗಳ ಆಕೃತಿಗಳ ನೆಲೆಯ ಅಧ್ಯಯನವಾಗಬಹುದು. ರಕ್ತಾಕ್ಷಿ (ರೂಪಾಂತರ), ಕನ್ನಡ ಮೇಘದೂತ(ಭಾವಾನುವಾದ), ಬೊಮ್ಮನಹಳ್ಳಿಯ ಕಿಂದರಿ ಜೋಗಿ (ಪುನರ್ಲೇಖನ) ಕಾದಂ ಕಥೆಗಳು(ಸಂಕ್ಷಿಪ್ತಾನುವಾದ) ಕೆಂಪುಮೀನು(ನೇರಾನುವಾದ) ಇತ್ಯಾದಿಗಳನ್ನು ಆಕರಗಳಾಗಿ ನೆನಪಿಸಿಕೊಳ್ಳಬಹುದು. ಇವುಗಳ ರಚನೆಯ ಹಿಂದಿನ ತಾತ್ವಿಕ ಬದ್ಧತೆ, ಲಕ್ಷ್ಯಭಾಷಾ ನಿಷ್ಠೆ, ಭಾಷಾಂತರ ಕೌಶಲ್ಯ, ಪ್ರಯೋಜನ ಇತ್ಯಾದಿಗಳ ಬಗೆಗೂ ದೃಷ್ಟಿ ಹಾಯಿಸಬಹುದು. ಈ ಎಲ್ಲಾ ಅಧ್ಯಯನ ಕ್ರಮಗಳಲ್ಲಿಯೂ ತೌಲನಿಕ ಪರಿಶೀಲನೆಗೆ ಅವಕಾಶ ಇದ್ದೇ ಇರುತ್ತದೆ. ತೌಲನಿಕ ಅಧ್ಯಯನ ಎನ್ನುವುದು ಈ ಬಗೆಯ ಆಕರಗಳ ಮೌಲ್ಯಮಾಪನದ ಭಾಗವೂ ಆಗಿರುತ್ತದೆ.

ಮುಖ್ಯ ಪ್ರಮೇಯಗಳು

ಭಾಷಾಂತರ ಅಧ್ಯಯನಗಳ ಸಂದರ್ಭದಲ್ಲಿ ಅನುವಾದ ಕೃತಿಗಳೇ ಪ್ರಮುಖ ಆಕರಗಳು. ಅವುಗಳನ್ನು ನಿರ್ದಿಷ್ಟವಾಗಿ ಖಚಿತಪಡಿಸಿಕೊಂಡ ಮೇಲೆ ಸಂಶೋಧಕರು ಅಧ್ಯಯನದ ಮುಖ್ಯ ಪ್ರಮೇಯವನ್ನು ಗುರುತಿಸಿಕೊಳ್ಳಬಹುದು. ಈಗಾಗಲೇ ಮೇಲೆ ಹೇಳಿದ ಮಾದರಿಗಳಲ್ಲಿ ಅನೇಕ ಅಧ್ಯಯನಗಳನ್ನು ಆಶಯಗಳ ನೆಲೆಯಲ್ಲಿ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ. ಅದು ಭಾಷಾಕೇಂದ್ರಿತ, ಸಮುದಾಯ ಕೇಂದ್ರಿತ, ವೈದಿಕಪರ, ವೈದಿಕ ವಿರೋಧಿ, ಎಡಪಂಥೀಯ, ಲಿಂಗಾಧಾರಿತ, ಪ್ರಕಾರಾಧಾರಿತ, ಸಾಹಿತ್ಯಕೇಂದ್ರಿತ, ಜನಪರ, ಸ್ತ್ರೀವಾದಿ, ದಲಿತಪರ, ನಗರಕೇಂದ್ರಿತ, ಗ್ರಾಮೀಣ ಕೇಂದ್ರಿತ ಹೀಗೆ ಆಶಯಗಳನ್ನು ಹಾಗೂ ಅನುವಾದ ಕೃತಿಗಳನ್ನು ಆಧರಿಸಿ ಅಧ್ಯಯನ ಕೈಗೊಳ್ಳಬಹುದು. ಅಧ್ಯಯನ ಕ್ಷೇತ್ರ ಹಾಗೂ ಅಧ್ಯಯನದ ಆಕರಗಳ ವ್ಯಾಪ್ತಿ ಇವಿಷ್ಟನ್ನು ಖಚಿತಪಡಿಸಿಕೊಂಡು ಅಲ್ಲಿನ ಆಶಯಗಳನ್ನು ಆಧರಿಸಿ ವಿಷಯವನ್ನು ರೂಪಿಸಬೇಕಾಗುತ್ತದೆ. ಹಾಗೆಯೇ ಮೊದಲು ಅಧ್ಯಯನದ ವಿಷಯವನ್ನು ರೂಪಿಸಿ ಅದಕ್ಕೆ ಆಕರಗಳನ್ನು ಗುರುತಿಸಿ ಅವುಗಳ ವ್ಯಾಪ್ತಿಯಲ್ಲಿ ಖಚಿತಪಡಿಸಿ ಕೊಳ್ಳುವುದಕ್ಕೂ ಅವಕಾಶವಿದೆ.

ಅನುವಾದ ಕೃತಿಗಳನ್ನು ಓದುವಾಗಿನ ಉದ್ದೇಶವನ್ನು ಖಚಿತಪಡಿಸಿಕೊಂಡು ಅಧ್ಯಯನದ ವಿಷಯವನ್ನು ಸ್ಪಷ್ಟಪಡಿಸಿಕೊಳ್ಳುವುದು ಒಂದು ಕ್ರಮವಾಗಬಹುದು. ಹಾಗೆಯೇ ಕೃತಿಗಳನ್ನು ಅನುವಾದ ಮಾಡಿ ಪ್ರಕಟ ಮಾಡಿದವರ ಉದ್ದೇಶವನ್ನು ಆಧರಿಸಿಯೂ ಅಧ್ಯಯನ ವಿಷಯಗಳನ್ನು ರೂಪಿಸಬಹುದು. ಮೊದಲನೆಯದು ಆಕರಗಳ ಆಂತರ್ಯದಿಂದ ಹೊರಡುವ ಶೋಧವಾದರೆ ಎರಡನೆಯದು ಆಕರಗಳ ಬಾಹ್ಯ ಚಹರೆಗಳಿಂದ ನಡೆಯುವ ಶೋಧ ವಾಗಿರುತ್ತವೆ. ಮೊದಲನೆಯದರಲ್ಲಿ ಅನುವಾದ ಮತ್ತು ಅಧ್ಯಯನಕಾರರ ಮೂಲಕ ಪ್ರಮೇಯಗಳು ಮುಂಚಿತವಾಗಿ ಬರುತ್ತದೆ. ಎರಡನೆಯ ಕ್ರಮದಲ್ಲಿ ಭಾಷಾಂತರಕಾರರು ಮತ್ತೆ ಕೃತಿಗಳ ಸಂಬಂಧಿತ ನೆಲೆಯಿಂದ ಅಧ್ಯಯನದ ಆರಂಭವಾಗುತ್ತದೆ. ಹೀಗೆ ಮೂಲ ಕರ್ತೃ, ಅನುವಾದಕ ಹಾಗೂ ಮಧ್ಯವರ್ತಿ –ಓದುಗ, ಸಂಶೋಧಕ–ಇವರ ನಡುವಿನ ಅನುಸಂಧಾನವು ಲಕ್ಷ್ಯಭಾಷೆಯ ಸಮಕಾಲೀನ ಸಾಂಸ್ಕೃತಿಕ ಪರಿಸರದಲ್ಲಿ ಅರ್ಥವತ್ತಾಗುವುದರ ಶೋಧವೇ ಅಧ್ಯಯನದ ಮುಖ್ಯ ನೆಲೆಯಾಗಿ ಪರಿಣಮಿಸುತ್ತದೆ.

ಯಾವುದೇ ಕೃತಿಗಳು ಭಾಷಾಂತರವಾಗಲು ಲಕ್ಷ್ಯಭಾಷೆಯ ಸಮಕಾಲೀನ ಬೇಡಿಕೆಯೇ ಕಾರಣವಾಗಿರುತ್ತದೆ. ಸಮಕಾಲೀನ ಬೇಡಿಕೆ ಎಂಬುದು ಓದುಗರು, ಸಮಾಜ, ಭಾಷಾಂತರ ಕಾರರು ಇವರಲ್ಲಿ ಯಾವುದಾದರೂ ಒಂದು ವರ್ಗದ ಬೇಡಿಕೆ, ಕುತೂಹಲಗಳ ಕಾರಣದಿಂದ ನಿರ್ಧಾರವಾಗುತ್ತದೆ.

ಕನ್ನಡದಲ್ಲಿ ಮಹಾತ್ಮ ಗಾಂಧಿ, ರಾಮಮನೋಹರ ಲೋಹಿಯಾ, ಬಿ.ಆರ್. ಅಂಬೇಡ್ಕರ್ ಅವರ ಬರವಣಿಗೆಗಳು ಭಾಷಾಂತರಗೊಂಡಿದ್ದು ಸಮಕಾಲೀನ ಸಾಮಾಜಿಕ, ರಾಜಕೀಯ ಸಂದರ್ಭಗಳಲ್ಲಿ ಎಂಬುದನ್ನು ಗಮನಿಸಿದರೆ ಭಾಷಾಂತರ ಬೇಡಿಕೆಗಳ ಸ್ವರೂಪ ತಿಳಿಯ ಬಹುದು. ಹೀಗೆ ಯಾವುದೇ ಭಾಷಾಂತರ ಪಠ್ಯವು ರೂಪುಗೊಳ್ಳುವ ಸಂದರ್ಭದಲ್ಲಿ ಯಾವುದೇ ಬಗೆಯ ಸಾಂಸ್ಕೃತಿಕ ಒತ್ತಡಗಳು ಇರುತ್ತವೆ. ಪೆರಿಯಾರ್ ರಾಮಸ್ವಾಮಿ ನಾಯ್ಕರ್ ಅವರ ವಿಚಾರಧಾರೆಗಳು ಕನ್ನಡದಲ್ಲಿ ಅನುವಾದ ಮಾಡಿ ಪ್ರಕಟವಾಗಲು ಸಾಂಸ್ಕೃತಿಕ ಒತ್ತಡಗಳೇ ಕಾರಣವಾಗಿರುತ್ತದೆ. ಬಂಗಾಳಿ ಭಾಷೆಯಿಂದ ದೇಶ ಪ್ರೇಮದ ಕಾರಣಕ್ಕಾಗಿ ಶರಚ್ಚಂದ್ರರಂತಹ ಬರಹಗಾರರ ಕಾದಂಬರಿಗಳನ್ನು ಬಿ.ವೆಂಕಟಾಚಾರ್ಯರು ಅನುವಾದ ಮಾಡಿದರು. ಹೀಗೆ ಭಾಷಾಂತರಕಾರರು ಲಕ್ಷ್ಯಭಾಷೆಯಲ್ಲಿ ತಮ್ಮ ಕಾಲದ ಸಾಂಸ್ಕೃತಿಕ ಪರಿಸರದ ಬೇಕು ಬೇಡಗಳ ಬಗೆಗೆ ಅರಿವುಳ್ಳವರೇ ಆಗಿರುತ್ತಾರೆ. ಹಾಗೆಯೇ ಲಕ್ಷ್ಯ ಭಾಷೆಯ ಸಮಕಾಲೀನ ಸಾಹಿತ್ಯ ಸಂದರ್ಭದ ಇತಿಮಿತಿಗಳನ್ನು ಹಾಗೂ ಕೊರತೆಗಳ ಬಗೆಗೆ ಅನ್ಯಭಾಷಾ ಸಂಪರ್ಕದ ಕಾರಣಕ್ಕೆ ಹೆಚ್ಚು ಪ್ರಜ್ಞೆಯುಳ್ಳವರಾಗಿರುತ್ತಾರೆ.

ಅನ್ಯಭಾಷಾ ಕೃತಿಯೊಂದು ಲಕ್ಷ್ಯಭಾಷಾ ಪರಿಸರದಲ್ಲಿ ಕಾಲಾತೀತವಾಗಿ ಭಾಷಾತೀತವಾಗಿ ಹೊಸ ಚೈತನ್ಯವನ್ನು ಮೂಡಿಸು ವುದಕ್ಕೆ ಕಾರಣವಾಗಬಹುದು ಎಂಬುದನ್ನು ಭಾಷಾಂತರಕಾರರು ತಿಳಿದೇ ಭಾಷಾಂತರವನ್ನು ನಿರ್ವಹಿಸಿರುತ್ತಾರೆ. ಇಲ್ಲಿ ಹೊಸ ಚೈತನ್ಯ ಎಂಬುದು ಅರಿವು, ದರ್ಶನ, ಪ್ರೇರಣೆ, ಪ್ರಭಾವಗಳ ರೂಪದಲ್ಲಿ ಲಕ್ಷ್ಯಭಾಷೆಯ ಸಾಂಸ್ಕೃತಿಕ ಪರಿಸರದಲ್ಲಿ ಅನಾವರಣಗೊಳ್ಳಬಹುದು. ತನ್ನ ಕಾಲದ್ದಲ್ಲದ ಮೂಲ ಭಾಷಾ ಪಠ್ಯಗಳು ಭಾಷಾಂತರಕಾರರಿಗೆ ಸಮಕಾಲೀನವಾಗಿಯೇ ಒದಗುತ್ತದೆ ಎಂಬ ತಿಳಿವಳಿಕೆಯಿರಬೇಕಾಗುತ್ತದೆ. ಭಾಷಾಂತರದ ಸಮಕಾಲೀನವನ್ನು ಬಿಟ್ಟು ಮೂಲಪಠ್ಯದ ಸಮಕಾಲೀನತೆಯೆಂಬುದು ಕೆಲವೊಂದು ಸಂದರ್ಭದಲ್ಲಿ ಲಕ್ಷ್ಯಭಾಷೆಯಲ್ಲಿ ಅಪ್ರಸ್ತುತವಾಗುವ ಸಾಧ್ಯತೆಯಿರುತ್ತದೆ. ಕೃತಿಯೊಂದು ರೂಪುಗೊಳ್ಳುವುದು ಲೇಖಕರ ಸಮಕಾಲೀನ ಸಾಂಸ್ಕೃತಿಕ ಸಂದರ್ಭದಲ್ಲಿ. ಹಾಗೆಯೇ ಭಾಷಾಂತರ ಕೃತಿ ರೂಪುಗೊಳ್ಳು ವಲ್ಲಿಯೂ ಭಾಷಾಂತರಕಾರರ ಸಮಕಾಲೀನ ಸಾಂಸ್ಕೃತಿಕ ಸಂದರ್ಭವೊಂದು ಇರುತ್ತದೆ. ಭಾಷಾಂತರ ಅಧ್ಯಯನಕಾರರು ಇದನ್ನು ಅಧ್ಯಯನ ಸಂದರ್ಭದಲ್ಲಿ ಪ್ರಮುಖವಾಗಿ ಗಮನ ದಲ್ಲಿರಿಸಿಕೊಳ್ಳಬೇಕಾಗುತ್ತದೆ.

ಕನ್ನಡದಲ್ಲಿ ಭಾಷಾಂತರ ಕೃತಿಗಳನ್ನು ಕುರಿತು ಬರೆಯುವ ವಿಮರ್ಶೆ, ಸಂಶೋಧನ ಬರವಣಿಗೆಗಳು ಮೂಲ ಲೇಖಕರೊಡನೆ ಪಠ್ಯಕೇಂದ್ರಿತವಾದ ಚರ್ಚೆಯಲ್ಲಿಯೇ ವಿಸ್ತಾರ ಗೊಳ್ಳುತ್ತವೆ. ಭಾಷಾಂತರವು ಕನ್ನಡದ ಸ್ವತಂತ್ರ ಕೃತಿಯಂತೆ ಸರಳವಾಗಿ ಓದಿಸಿಕೊಂಡು ಹೋಗುತ್ತದೆ ಎಂಬಿತ್ಯಾದಿಯಾಗಿ ಮೆಚ್ಚುಗೆಯ ನುಡಿಗಳನ್ನು ಹೇಳುವುದಿದೆ. ಇಲ್ಲಿ ಭಾಷಾಂತರ ಕಾರರೇ ಮರೆಯಾಗಿ ಬಿಡುತ್ತಾರೆ ಎಂಬ ವಾಸ್ತವ ಬರೆಯುವವರಿಗಾಗಲೀ, ಓದುಗರಿಗಾಗಲೀ ಹೊಳೆಯುವುದಿಲ್ಲ. ಭಾಷಾಂತರ ಕೃತಿಯ ವಸ್ತು, ಆಶಯ, ಭಾಷೆ ಇತ್ಯಾದಿಗಳು ಲಕ್ಷ್ಯಭಾಷೆಯ ಸಾಂಸ್ಕೃತಿಕ ಪರಿಸರದಲ್ಲಿ ಪ್ರಸ್ತುತಗೊಳ್ಳುವುದನ್ನು ಹಾಗೂ ಅವುಗಳ ಸಾಂಸ್ಥಿಕ ಅಥವಾ ಭಾಷಾಂತರಕಾರರ ವೈಯಕ್ತಿಕ ಧ್ಯೇಯ ಧೋರಣೆಗಳು ಮತ್ತು

ನಿಲುವುಗಳ ನೆಲೆಯಿಂದ ವಿವರಿಸಿಕೊಳ್ಳಬೇಕಾಗಿದೆ. ಆಗ ಮಾತ್ರ ಭಾಷಾಂತರ ಕೃತಿ ಯೊಂದು ಲಕ್ಷ್ಯಭಾಷಾ ಪರಿಸರದ ಪರಿಣಾಮಕಾರಿ ಉತ್ಪನ್ನವಾಗಿ ಪರಿಣಮಿಸಬಹುದು.

ಹೀಗೆ ಭಾಷಾಂತರ ಅಧ್ಯಯನ ಸಾಹಿತ್ಯಾಧ್ಯಯನವೇ ಆಗಿದೆ. ಆದರೂ ಸಾಹಿತ್ಯಾಧ್ಯಯನ ಕ್ಕಿಂತಲೂ ವಿಭಿನ್ನವಾದ ದೃಷ್ಟಿಕೋನಗಳಿಂದ ಅಧ್ಯಯನ ಮಾಡಲು ಅವಕಾಶವನ್ನು ತೆರೆದಿರಿಸಿದೆ. ಭಾಷಾಂತರ ಕ್ಷೇತ್ರವು ವಿಶಾಲವಾಗಿ ಸಂಶೋಧನೆಗೆ ಇನ್ನೂ ಹೊಸ ನೆಲವಾಗಿಯೇ ಉಳಿದಿದೆ. ಆಧುನಿಕ ಪೂರ್ವ ಕನ್ನಡ ಸಾಹಿತ್ಯದ ಕಾಲಘಟ್ಟ ಹಾಗೂ 1847ರ ನಂತರದ ಆಧುನಿಕ ಭಾಷಾಂತರಗಳ ಕಾಲಘಟ್ಟ ಎಂಬ ಎರಡು ಪ್ರಮುಖ ಘಟ್ಟಗಳಲ್ಲಿ ಬಂದ ಭಾಷಾಂತರ ಕೃತಿಗಳ ಸಂಖ್ಯೆ ಅಪಾರವಾಗಿದೆ. ಸ್ವತಂತ್ರ ಸಾಹಿತ್ಯ ಅಧ್ಯಯನ ಎಂಬ ನೆಲೆಯ ಅಧ್ಯಯನ ಗಳಿಗಿಂತ ಮೂಲಪಠ್ಯ–ಲಕ್ಷ್ಯಪಠ್ಯ ಎಂಬ ಎರಡು ಸಾಂಸ್ಕೃತಿಕ ಧ್ರುವಗಳ ಅನುಸಂಧಾನ ಹಾಗೂ ಸಮನ್ವಯದ ನೆಲೆಯನ್ನು ಕಂಡುಕೊಳ್ಳುವುದೇ ಭಾಷಾಂತರ ಅಧ್ಯಯನದ ಕೇಂದ್ರ ಪ್ರಜ್ಞೆಯಾಗಿರುತ್ತದೆ.

ಮುಕ್ತಾಯ

ಕನ್ನಡ ಭಾಷಾಂತರ ಕೃತಿಗಳು ಅಧ್ಯಯನಕಾರರ ಕೊರತೆಯಿಂದ ಕ್ರೋಡೀಕರಣವಾಗದೆ ಅಲ್ಲಿ ಇಲ್ಲಿ ಹರಿದು ಹಂಚಿ ನಾಶವಾಗಿ ಹೋಗಿವೆ. ಅವುಗಳ ಮಾಹಿತಿಗಳು, ವ್ಯವಸ್ಥಿತ ಜೋಡಣೆಗಳು ಹಾಗೂ ಅಧ್ಯಯನಗಳ ಕೊರತೆ ಇತ್ಯಾದಿಗಳಿಂದೆಲ್ಲ ಭಾಷಾಂತರ ಪಠ್ಯಗಳು ಕಾಲದ ಮರೆಯಲ್ಲಿ ಸಂದು ಹೋಗಿವೆ. ಭಾಷಾಂತರ ಕೃತಿಗಳನ್ನು ರೂಪಿಸುವಲ್ಲಿ ಭಾಷಾಂತರರಿಗೆ ಇದ್ದಿರಬಹುದಾದ ಉದ್ದೇಶಗಳು ಈಡೇರಿ ಅದು ತನ್ನ ಕಾಲದಲ್ಲಿ ಲಕ್ಷ್ಯಭಾಷಾ ಸಾಹಿತ್ಯವನ್ನು ಪ್ರೇರಿಸಿಯೋ ಪ್ರಭಾವಿಸಿಯೋ, ಕಾಲದ ಮರೆಗೆ ಹೋಗಿವೆ. ಕಾಲದ ಮರೆಗೆ ಸರಿದುಹೋದ ಮೂಲ ಪಠ್ಯಗಳ ಹೆಸರಿನಲ್ಲಿ ಉಳಿಸಿಕೊಟ್ಟಿರುವ ಭಾಷಾಂತರಗಳೂ ಕನ್ನಡದಲ್ಲಿವೆ. ಭಾಷಾಂತರಗಳು ಮೂಲ ಹಾಗೂ ಲಕ್ಷ್ಯಭಾಷೆಗಳೆರಡನ್ನು ಏಕಕಾಲಕ್ಕೆ ಅನುಸಂಧಿಸುತ್ತದೆ. ಹಾಗೂ ಭಾಷಾಂತರ ಅಧ್ಯಯನಗಳೂ ಸಹ ಮೂಲ ಹಾಗೂ ಲಕ್ಷ್ಯ ಭಾಷಾ ಪರಿಸರದ ಅನುಸಂಧಾನದ ಜೊತೆಗೆ ಭಾಷಾಂತರಗಳ ಸಮಕಾಲೀನ ಸಾಂಸ್ಕೃತಿಕ ಪರಿಸರ ಅನುಸಂಧಾನಗಳ ಅಧ್ಯಯನವೂ ಆಗಿ ಮಹತ್ವವನ್ನು ಪಡೆಯುತ್ತದೆ.

ಪರಾಮರ್ಶನ ಗ್ರಂಥಗಳು

ಉಷಾ ಎಂ.(ಡಾ) (2014) ಭಾಷಾಂತರ ಪ್ರವೇಶಿಕೆ: ಇತಿಹಾಸ, ಸಿದ್ಧಾಂತ ಮತ್ತು ಪರಿಭಾಷೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಪ್ರಧಾನ ಗುರುದತ್ತ(ಡಾ) (1989) ಭಾಷಾಂತರ ಕಲೆ, ಬಿ.ಎಂ.ಶ್ರೀ. ಪ್ರತಿಷ್ಠಾನ, ಬೆಂಗಳೂರು

ಮೋಹನ ಕುಂಟಾರ್(ಡಾ)(2014) ಕನ್ನಡ ಮಲಯಾಳಂ ಭಾಷಾಂತರ ಪ್ರಕ್ರಿಯೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೋಹನ ಕುಂಟಾರ್(ಡಾ)(2015) ಭಾಷಾಂತರ ಪ್ರಕ್ರಿಯೆ ಪ್ರೇರಣೆಗಳು ಪ್ರಭಾವಗಳು, ಯಾಜಿ ಪ್ರಕಾಶನ, ಹೊಸಪೇಟೆ

ಸಿ.ಪಿ.ಕೆ.(ಡಾ)(2009) ಭಾಷಾಂತರ ಭಾರತಿ, ಶ್ರೀ ಲಲಿತಾ ಬುಕ್ ಬ್ಯೂರೋ, ಮೈಸೂರು

✠✠✠

ಅಕಟಕಟ ಸಂಸಾರವನು ನೆಚ್ಚಿಕೆಡಬ್ಯಾಡ

ಡಾ. ಶ್ರೀಪಾದ ಭಟ್
ಸಹಾಯಕ ಪ್ರಾಧ್ಯಾಪಕ
ಡಾ.ಡಿ.ವಿ. ಗುಂಡಪ್ಪ ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಶ್ರೀಪಾದರಾಜರು(1404–1502) ಹರಿದಾಸ ಸಾಹಿತ್ಯದ ಪ್ರಮುಖ ಕೀರ್ತನಕಾರರಲ್ಲಿ ಒಬ್ಬರು. ಚನ್ನಪಟ್ಟಣ ಬಳಿಯ ಅಬ್ಬೂರಿನವರಾದ ಇವರನ್ನು ಪುರಾಣೋಕ್ತ ಹರಿಭಕ್ತ ಧ್ರುವನ ಅವತಾರ ಎಂದು ಹೇಳಲಾಗುತ್ತದೆ. ವಿಜಯನಗರ ಅರಸರ ರಾಜಗುರುಗಳಾಗಿದ್ದ ಇವರು ಪುರಂದರ, ಕನಕರ ಗುರುಗಳಾಗಿದ್ದ ವ್ಯಾಸತೀರ್ಥರ ಗುರುಗಳೂ ಹೌದು. ಭ್ರಮರಗೀತ, ವೇಣುಗೀತ, ಗೋಪಿಗೀತ, ಮಧ್ವನಾಮ ಇವರ ಪ್ರಮುಖ ರಚನೆಗಳು. ರಂಗವಿಠಲ ಎಂಬ ಅಂಕಿತದಲ್ಲಿ ಇವರು ಕೀರ್ತನೆಗಳನ್ನೂ ರಚಿಸಿದ್ದಾರೆ. 'ನೀ ಇಟ್ಟಹಂಗೆ ಇರುವೆನೋ ಹರಿಯೇ'; 'ಕಣ್‌ಗಳಿದ್ಯಾತಕೋ ಕಾವೇರಿರಂಗನ ನೋಡದಾ'; 'ಭೂಷಣಕೆ ಭೂಷಣ...' ಮೊದಲಾದವು ಅವರ ಅತ್ಯಂತ ಜನಪ್ರಿಯ ಕೀರ್ತನೆಗಳಾಗಿ ಜನಮನದಲ್ಲಿ ನೆಲೆನಿಂತಿವೆ. 'ಅಕಟಕಟ ಸಂಸಾರವನು ನೆಚ್ಚಿಕೆಡಬ್ಯಾಡ' ಎಂಬುದು ಅವರ ಅನೇಕಾನೇಕ ಕೀರ್ತನೆಗಳಲ್ಲೊಂದು.

ಹರಿದಾಸರ ರಚನೆಗಳು ಕನ್ನಡಕ್ಕೇ ವಿಶಿಷ್ಟವಾದವು. ಇವು ಅನುಭವ ಸಾರದಿಂದ ಉತ್ಪನ್ನವಾದ ಅಧ್ಯಾತ್ಮತತ್ತ್ವ ಹೇಳುವ ರಚನೆಗಳಾಗಿವೆ. ಮೇಲ್ನೋಟದಲ್ಲಿ ಇವುಗಳ ಅರ್ಥತೀರಾ ಲೌಕಿಕ ಅನ್ನುವಂತಿದ್ದರೆ, ಆಳದಲ್ಲಿ ಅವು ಲೋಕದ ಆತ್ಯಂತಿಕ ಸತ್ಯ ಹೇಳುವ ಪಾರಮಾರ್ಥಿಕ ಸಂಗತಿಗಳು ಅನ್ನುವಂತಿವೆ. ಸಾಮಾನ್ಯವಾಗಿ ಕನ್ನಡ ಸಾಹಿತ್ಯವನ್ನು ಪಾಶ್ಚಾತ್ಯ ದೃಷ್ಟಿಕೋನದ ದೃಷ್ಟಿಯಲ್ಲಿ ವಿವಿಧ ಮತಗಳ ದೃಷ್ಟಿಯಿಂದ ವಿಭಜಿಸಿ ನೋಡಲಾಗುತ್ತದೆ. ಈ ದೃಷ್ಟಿಯಿಂದ ನೋಡುತ್ತ ಹೋದರೆ ಈ ಪಠ್ಯಗಳು ಅರ್ಥವಾಗಲಾರವು. ಪಂಪ ರನ್ನಾದಿಗಳನ್ನು ಜೈನ ಸಾಹಿತ್ಯದಲ್ಲೂ ವಚನಕಾರರು, ಹರಿಹರ, ರಾಘವಾಂಕರನ್ನು ಶೈವ ಸಾಹಿತ್ಯದಲ್ಲೂ, ಶ್ರೀಪಾದರಾಜರನ್ನೊಳಗೊಂಡಂತೆ ಕನಕ ಪುರಂದರ ಮೊದಲಾದ ದಾಸರನ್ನು ವೈಷ್ಣವ ಅಥವಾ ವೈದಿಕ ಸಾಹಿತ್ಯದಲ್ಲೂ ಗುರುತಿಸುವ ಪರಿಪಾಠವಿದೆ. ಇಂಥ ದೃಷ್ಟಿಕೋನ ಸಾಹಿತ್ಯದ ಅಧ್ಯಯನಕ್ಕೆ ಮತ ಪ್ರೇಮ ಅಥವಾ ದ್ವೇಷದ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಸಂಕುಚಿತ ನೋಟವನ್ನು ತಂದಿಟ್ಟಿರುವುದು ಸುಳ್ಳಲ್ಲ. ಇಂಥ ಸಂಕುಚಿತತೆಯನ್ನು ಇಟ್ಟುಕೊಂಡು ಸಾಹಿತ್ಯದ ಅಧ್ಯಯನ ನಡೆಸಿದರೆ ಕನ್ನಡ ಸಾಹಿತ್ಯ ನಿಜವಾಗಿಕೊಡುವ ಒಟ್ಟು ನೋಟವನ್ನಾಗಲೀ ವಿಶಾಲ ಮನೋಧರ್ಮವನ್ನಾಗಲೀ ಹೊಂದುವುದು ಸಾಧ್ಯವಿಲ್ಲ. ಇಂಥ ಸಂಕುಚಿತ ದೃಷ್ಟಿಯ ಫಲವಾಗಿಯೇ ಹರಿದಾಸರ ಕೀರ್ತನೆಗಳು ಹೊಸಗನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಉಳಿದ 'ಮತ' ಸಾಹಿತ್ಯಗಳು ಪಡೆದ ಮಹತ್ತ್ವವನ್ನು ಪಡೆದಿಲ್ಲ. ಇದರಿಂದ ಅಧ್ಯಯನಕಾರರಿಗೆ ನಷ್ಟವೇ ವಿನಾ ಸಾಹಿತ್ಯಕ್ಕಾಗಲೀ ಹರಿದಾಸರಿಗಾಗಲೀ ಅಲ್ಲ. ಅದೇನೇ ಇದ್ದರೂ ಸಾಹಿತ್ಯವನ್ನು 'ಸಂತೋಷ ನೀಡುವ ಮಾಧ್ಯಮವಾಗಿ' ಮಾತ್ರ ನೋಡುವ ನೈಜ

ಅಧ್ಯಯನಕಾರರಿಗೆ ಇವೆಲ್ಲ ಮತದ ಕಾರಣಕ್ಕಾಗಿ ಮುಖ್ಯವೂ ಆಗುವುದಿಲ್ಲ, ಅಮುಖ್ಯವೂ ಆಗುವುದಿಲ್ಲ.

ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆಗಳಲ್ಲಿ 'ಹರಿದಾಸ ಸಾಹಿತ್ಯ ಕೇವಲ ದ್ವೈತ ಮತವನ್ನು, ವೈದಿಕ ದೃಷ್ಟಿಯನ್ನು ಪ್ರತಿಪಾದಿಸುತ್ತದೆ' ಎಂಬ ಹಣೆಪಟ್ಟಿಯನ್ನು ಹಚ್ಚಿ ದೂರವಿಡಲಾಗಿದೆ. ವಸಾಹತುಶಾಹಿ ಕಾಲದಚಿಂತನೆಯ ಈ ಬಗೆಯ ವಿಭಜನೆಯ ದೃಷ್ಟಿಯಿಂದ ಮಾತ್ರ ನೋಡಿದರೆ ಇವು ಹಾಗೆಯೇ ಕಾಣಬಹುದು. ಯಾಕೆಂದರೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಯಾವ ಕೃತಿಕಾರನೂ ನಾನು ಜೈನ, ನಾನು ಶೈವ ಅಥವಾ ನಾನು ವೈದಿಕ ವರ್ಗಕ್ಕೆ ಸೇರುವ ಸಾಹಿತ್ಯ ರಚಿಸುತ್ತಿದ್ದೇನೆಂದು ಹೇಳಿಲ್ಲ. ಇವು ಅಪೂರ್ವ ಸಾಹಿತ್ಯಕ್ಕೂ ಸೇರಿವೆ. ಕೀರ್ತನೆಗಳಿಂದ ಮತವನ್ನೂ ಸಾಹಿತ್ಯವನ್ನೂ ಬೇರ್ಪಡಿಸಲಾಗದು. ಜನಸಾಮಾನ್ಯರಿಗೆ ಬದುಕಿನ ಆತ್ಯಂತಿಕ ಆನಂದವನ್ನು ನೀಡುವುದು ಇವುಗಳ ಮೂಲ ಉದ್ದೇಶ ಎಂಬುದನ್ನು ಮನಗಂಡಾಗ ಕೀರ್ತನೆಗಳ ಅರ್ಥವ್ಯಾಪ್ತಿಯೇ ಬೇರೆಯಾಗುತ್ತದೆ. ಕೇವಲ ಲೌಕಿಕ ನಿತ್ಯಜೀವನದದೃಷ್ಟಿಯಿಂದ ಇವುಗಳನ್ನು ಅಳೆದಾಗ ಇವುಗಳಿಗೆ ಹಣೆಪಟ್ಟಿ ಹಚ್ಚುವುದೂ ಸುಲಭ; ಇವುಗಳಿಗೆ ಅರ್ಥವೇ ಇಲ್ಲವೆಂದು ದೂರ ತಳ್ಳುವುದೂ ಸುಲಭ. ಸಮಾಜದಲ್ಲಿರುವ ಬಗೆಬಗೆಯ ಜನರಿಗೆ ಕೇಳಿದ್ದನ್ನು ಇವು ಕೊಡುತ್ತವೆ. ರಸಿಕರಿಗೆ ಸಾಹಿತ್ಯವನ್ನೂ ಶ್ರದ್ಧಾಳುಗಳಿಗೆ ಮತವನ್ನೂ ತಾರ್ಕಿಕರಿಗೆ ತತ್ತ್ವವನ್ನೂ ಅನ್ಯಾನ್ಯ ಜೀವನೋಪಾಯದಲ್ಲಿರುವ ಸಾಮಾನ್ಯ ಜನರಿಗೆ ಸಂತೋಷವನ್ನೂ ನೀಡುತ್ತವೆ. ಇದೇ ನಮ್ಮ ಪರಂಪರೆ ನೀಡುವ ಕ್ರಿಯಾಜ್ಞಾನ. ನಮ್ಮೆಲ್ಲ ಸಾಹಿತ್ಯವೂ ಇಂಥ ಜ್ಞಾನದ ಭಾಗಗಳು. ಈ ದೃಷ್ಟಿಯಿಂದ ಇವು ಭಾರತೀಯ ಜ್ಞಾನ ಪರಂಪರೆಯ ಅಮೂಲ್ಯ ಭಾಗಗಳು. ಈ ಹಿನ್ನೆಲೆಯಲ್ಲಿಯೇ ಶ್ರೀಪಾದರಾಜರ ಕೀರ್ತನೆಯೊಂದನ್ನು ಇಲ್ಲಿ ಗಮನಿಸಲಾಗಿದೆ. ಕೀರ್ತನೆಯ ಪೂರ್ಣಪಾಠ ಹೀಗಿದೆ:

ಅಕಟಕಟ ಸಂಸಾರವನು ಮೆಚ್ಚಿಕೆಡಬ್ಯಾಡ
ವಿಕಟದಲಿ ಮಾನವರುಕೆಟ್ಟರೆಲ್ಲರು ನಿಜ

ಮುನ್ನ ನರಕಾಸುರನು ಬಡಿದುಚಿಂತಾಮಣಿಯ
ತನ್ನ ಮನೆಯಲ್ಲಿತಂದು ನಿಲ್ಲಿಸಿ ನೃಪರ
ಕನ್ನೆಯರ ಷೋಡಶ ಸಹಸ್ರವನೆತಂದಾತ
ಹೆಣ್ಣನೊಬ್ಬಳನೊಯ್ದುದಿಲ್ಲವೊ ನೋಡೊ

ಸಾವಿರಕರ ಪಡೆದಕಾರ್ತವೀರ್ಯಾರ್ಜುನನು
ಭೂವಲಯದೊಳಗೊಬ್ಬನೇ ವೀರನೆನಿಸಿ
ರಾವಣನ ಸೆರೆಯಿಟ್ಟುಕಾಮಧೇನುವ ಬಯಸಿ
ಸಾವಾಗ ಏನ ಕೊಂಡೊಯ್ದನೋ ನೋಡೊ

ಕೌರವನುಧರೆಯೆಲ್ಲತನಗಾಗಬೇಕೆಂದು
ವೀರಪಾಂಡವರೊಡನೆಕದನಮಾಡಿ
ಮಾರಿಯ ವಶವೈದಿ ಹೋಹಾಗ ತನ್ನೊಡನೆ
ತ್ಯಾರೆ ಭೂಮಿಯಒಯ್ದುದಿಲ್ಲವೊ ನೋಡೊ

ವರಯಜ್ಞಗಳ ಮಾಡಿ ನಹುಷ ಸುರಪತಿಯೆನಿಸಿ
ಪರಮಮುನಿಗಳ ಕೈಲೆ ದಂಡಿಗೆಯ ಹೊರಿಸಿ
ಉರಗಜನುಮವನೈದಿ ಹೋದಾಗತನ್ನೊಡನೆ
ಸುರಲೋಕದೊಳಗೇನ ಕೊಂಡ್ಹೋದ ನೋಡೊ

ತುಂಗಗುಣಧ್ರುವ ವಿಭೀಷಣ ಹನುಮಾದಿಗಳು
ಮಂಗಳಾತ್ಮಕ ಹರಿಯನರಿತು ಭಜಿಸಿ
ಭಂಗವಿಲ್ಲದೆ ಹೊರೆದರೈ ಸಕಲ ಭಾಗ್ಯವನು
ರಂಗವಿಠಲರೇಯನ ನೆರೆ ನಂಬಿರೋ

ನಾಲ್ಕು ಪಾದಗಳ ಐದು ಚರಣಗಳುಳ್ಳ ಗೇಯಗುಣದಲ್ಲಿರುವ, ಆದರೆ ಯಾವುದೇ ಛಂದೋರೂಪಕ್ಕೂ ಬದ್ಧವಾಗದ ಕೀರ್ತನೆ ಇದು. ಸಂಸಾರವನ್ನು ಅಂದರೆ ಪ್ರಾಪಂಚಿಕ ಸುಖವನ್ನು ನೆಚ್ಚಿ ಮನುಷ್ಯರು ಇನ್ನಿಲ್ಲದಂತೆ ಹಾಳಾಗಿ ಹೋಗುತ್ತಾರೆ. ಘಟಾನುಘಟಿಗಳೇ ಹೀಗೆ ಹಾಳಾಗಿ ಹೋಗಿದ್ದಾರೆ, ಇನ್ನು ಸಾಮಾನ್ಯ ಮನುಷ್ಯರು ಯಾವ ಲೆಕ್ಕ; ಹೀಗಾಗಿ ಅನಂತ ಶಕ್ತಿಯಾದ ಹರಿಯನ್ನು ಮಾತ್ರ ನೆಚ್ಚಿ ಎಂದು ನಿದರ್ಶನ ಸಹಿತವಾಗಿ ಶ್ರೀಪಾದರಾಜರು ಐದು ಚರಣಗಳ ಈ ಕೀರ್ತನೆಯಲ್ಲಿ ಪುರಾಣ ಹಾಗೂ ಲೋಕೋತ್ತರ ಕಥೆಗಳ ಆಧಾರದಲ್ಲಿ ಜನತೆಗೆ ಹೇಳಿದ್ದಾರೆ.

ಮೊದಲನೆಯ ಚರಣದಲ್ಲಿ ಭಾಗವತ ಪುರಾಣದಲ್ಲಿ ಬರುವ ನರಕಾಸುರನ ಪ್ರಕರಣವನ್ನು ಉಲ್ಲೇಖಿಸುತ್ತ ಆತ ದೈವಾನುಗ್ರಹದಿಂದ ಸರ್ವಶಕ್ತಿಯನ್ನು ಪಡೆದು ಏಕಮೇವಾದ್ವಿತೀಯನೆಂಬಂತೆ ಮೆರೆಯುತ್ತ ಲೋಕಕಂಟಕನಾಗಿದ್ದ. ಆತ ಪ್ರಾಗ್ಜ್ಯೋತಿಷಪುರವನ್ನು ಆಳುತ್ತ ಅದಿತಿದೇವಿಯ ಕಿವಿಯ ರತ್ನ ಕುಂಡಲಗಳನ್ನೂ ವರುಣನ ಶ್ವೇತಛತ್ರವನ್ನೂ ಮೇರು ಪರ್ವತದ ಭಾಗವಾದ ಮಹಾಮಣಿ (ಚಿಂತಾಮಣಿ) ಎಂಬ ಶಿಖರವನ್ನೂ ವೈಜಯಂತಿ ಮಾಲೆಯನ್ನೂ ಅಪಹರಿಸಿ ಇಟ್ಟುಕೊಂಡಿದ್ದ. ಆತನ ಬಯಕೆ, ಕಾಮ ವಾಂಛೆಗೆ ಮಿತಿಯೇಇರಲಿಲ್ಲ. ಆತನ ಉಪಟಳ ತಾಳಲಾರದ ಇಂದ್ರ, ಕೃಷ್ಣನಿಗೆ ದೂರಿತ್ತ. ನರಕಾಸುರನನ್ನು ಕೊಂದ ಕೃಷ್ಣ ನರಕಾಸುರನನ್ನು ಕೊಂದು ಆತನ ಅಂತಃಪುರದಲ್ಲಿದ್ದ ಹದಿನಾರು ಸಾವಿರ ಸತಿಯರು ತಮ್ಮ ಭವಿಷ್ಯವೇನೆಂದು ಅಳಲು ತೋಡಿಕೊಂಡಾಗ ತಾನೇ ಅವರನ್ನು ವರಿಸಿದ. ಆದರೆ ಇಷ್ಟೆಲ್ಲ ಮೆರೆದ ನರಕಾಸುರ ಸಾಯುವಾಗ ಒಬ್ಬ ಹೆಣ್ಣನ್ನೂ ಒಯ್ದಿಲ್ಲ. ಆತ ಹೋದುದು ಬರಿಗೈಯಲ್ಲಿ ಎಂದು ಪುರಾಣವನ್ನು ನೆನಪಿಸಿದ್ದಾರೆ.

ಎರಡನೆಯ ಚರಣದಲ್ಲಿ ಹರಿವಂಶ ಪುರಾಣ ಹಾಗೂ ಮಹಾಭಾರತ ಕಥೆಯಲ್ಲಿ ಬರುವ ಕಾರ್ತವೀರ್ಯಾರ್ಜುನನ ಕಥೆಯನ್ನು ಉಲ್ಲೇಖಿಸಿದ್ದಾರೆ. ಸಾವಿರ ತೋಳುಗಳ ಆತ ರಾವಣನಂಥ ಪರಾಕ್ರಮಿಯನ್ನು ಸೆರೆ ಇಟ್ಟಂಥವ. ತೋಳ್ಬಲದಲ್ಲಿ ನಂಬಿಕೆ ಇಟ್ಟವ. ಮಹಾಮುನಿ ವಸಿಷ್ಠರ ಆಶ್ರಮದಲ್ಲಿದ್ದ ಕಾಮಧೇನುವನ್ನು ಪಡೆಯುವ ಬಯಕೆಯಿಂದ ಮುನಿಯ ಆಶ್ರಮವನ್ನು ಸುಟ್ಟು ಹಾಕಿ ಅವರಿಂದ ಪರಶುರಾಮನಿಂದ ಮರಣ ಬರುವಂತೆ ಶಾಪ ಪಡೆದ. ಅಂಥ ಪರಾಕ್ರಮಿಕೂಡ ಸಾಯುವಾಗ ಏನನ್ನೂ ತೆಗೆದುಕೊಂಡು ಹೋಗಲಿಲ್ಲ ಎಂದು ಮತ್ತೊಂದು ಕಥೆಯನ್ನು ನೆನಪಿಸಿದ್ದಾರೆ.

ಮೂರನೆಯ ಚರಣದಲ್ಲಿ ಮಹಾಭಾರತದ ಕೌರವ ಪಾಂಡವರ ಕದನದ ಉಲ್ಲೇಖವಿದೆ. ಸೂಜಿ ಮೊನೆಯಷ್ಟೂ ಭೂಮಿ ಕೊಡದೇ ಎಲ್ಲವನ್ನೂ ತಾನೇ ಅನುಭವಿಸುವ ಹಠತೊಟ್ಟ

ಕೌರವ ರಣಮಾರಿಗೆ ಬಲಿಯಾಗುವಾಗ ಒಂದಿನಿತೂ ಭೂಮಿಯನ್ನು ಒಯ್ದಿಲ್ಲದಿರುವುದನ್ನು ನೆನೆಯಿರಿ ಎಂದಿದ್ದಾರೆ.

ನಾಲ್ಕನೆಯ ಚರಣದಲ್ಲಿ ಇಂದ್ರ ಪದವಿಗೇರಿದ ನಹುಷ ಶಚಿಯೊಡನೆ ಕೂಡಲು ಬಯಸಿದ. ಆಕೆ ಸಪ್ತರ್ಷಿಗಳಿಂದ ಪಲ್ಲಕ್ಕಿ ಹೊರಿಸಿಕೊಂಡು ತನ್ನರಮನೆಗೆ ಬಂದರೆ ವಿವಾಹವಾಗುವುದಾಗಿ ಷರತ್ತು ವಿಧಿಸಿದಳು. ಕಾಮದ ಅವಸರದಲ್ಲಿದ್ದ ನಹುಷ ಬೇಗಬೇಗ (ಸರ್ಪ ಸರ್ಪ) ನಡೆಯುವಂತೆ ಅಗಸ್ತ್ಯರ ತಲೆಗೆ ಒದ್ದ. ಮುನಿದ ಮುನಿ 'ಸರ್ಪೋಭವ' ಎಂದು ಶಪಿಸಿಬಿಟ್ಟಿದ್ದರಿಂದ ನಹುಷ ಸರ್ಪವಾಗಿ ಹುಟ್ಟಿದ. ಅಂಥ ನಹುಷ ಕೂಡ ಸುರಲೋಕದೊಳಗೆ ಹೋಗುವಾಗ ಕೊಂಡೊಯ್ದಿದ್ದು ಏನೂ ಇಲ್ಲಎಂದು ಎಚ್ಚರಿಸಿದ್ದಾರೆ.

ಐದನೆಯ ಮತ್ತು ಕೊನೆಯ ಚರಣದಲ್ಲಿ ಮೇಲಿನ ನಾಲ್ಕೂ ಪಾತ್ರಗಳಿಗೆ ವಿರುದ್ಧವಾದ ಮತ್ತೆಅದೇ ಪುರಾಣ, ಕಥೆಗಳ ಆದರ್ಶ ಪಾತ್ರಗಳನ್ನು ನೆನಪಿಸಿ ಅತಿಶಯ ಶ್ರೇಯಸ್ಸು ಪಡೆಯುವ ದಾರಿಯನ್ನು ಕಾಣಿಸಿದ್ದಾರೆ. ಶ್ರೇಷ್ಠ ಗುಣವಂತರಾದ (ತುಂಗಗುಣ) ಧ್ರುವ, ವಿಭೀಷಣ ಮತ್ತು ಹನುಮಾದಿಗಳು ಸಕಲ ಮಂಗಳ ನೀಡುವ ಹರಿಯನ್ನು ಭಜಿಸಿ ಸಕಲ ಭಾಗ್ಯವನ್ನೂ ಪಡೆದರು. ನೀವೂ ಅದೇ ಬಗೆಯಲ್ಲಿ ರಂಗ ವಿಠ್ಠಲನನ್ನು ನೆನೆಯುತ್ತ ಭಾಗ್ಯವಂತರಾಗಿ ಎಂದು ಹೇಳಿದ್ದಾರೆ.

ಇಲ್ಲಿ ಶ್ರೀಪಾದರಾಜರು ನೀಡಿದ ನರಕಾಸುರ, ಕಾರ್ತವೀರ್ಯ, ಕೌರವ ಮತ್ತು ನಹುಷರ ಪಾತ್ರಗಳು ಕಾಮದ ಒಂದೊಂದು ಮಗ್ಗುಲನ್ನೂ ಅದರ ಪರಿಣಾಮವನ್ನೂ ಚಿತ್ರಿಸುತ್ತವೆ. ಈ ಲೋಕ ನಿಂತಿರುವುದೇ ಬಯಕೆಯಲ್ಲಿ. ಕಾಮಿಸುವಂತೆ, ಬಯಸುವಂತೆ ಮಾಡುವುದೇ ಸಂಸಾರದ ಮಾಯೆ. ಹೆಣ್ಣು, ಹೊನ್ನು, ಮಣ್ಣು, ಅಧಿಕಾರ ಇವೆಲ್ಲವೂ ಕಾಮದ ರೂಪಗಳೇ. ಇವುಗಳ ಬೆನ್ನು ಹತ್ತುವುದರಿಂದ ವಿನಾಶವೇ ವಿನಾ ಯಾವುದೇ ಭಾಗ್ಯವಿಲ್ಲ. ಇದನ್ನು ಪುರಾಣ ಕತೆಗಳು ನಿರೂಪಿಸಿವೆ ಎಂಬುದನ್ನು ಸರಳವಾಗಿ ಈ ಕೀರ್ತನೆಯಲ್ಲಿ ತಿಳಿಸಲಾಗಿದೆ.

ಭಾರತೀಯ ಸಂಪ್ರದಾಯದಲ್ಲಿ ಪುರಾಣವಾಗಲಿ, ಕಥೆಯಾಗಲಿ ಅವು ಕೇವಲ ಮನರಂಜನೆಗಾಗಿ ಇರುವಂಥವಲ್ಲ. ತತ್ತ್ವಬೋಧೆ ಅವುಗಳ ಮುಖ್ಯ ಉದ್ದೇಶ. ಅವು ತಲೆಮಾರುಗಳನ್ನು ರೂಪಿಸುವ ಸಂಸ್ಕೃತಿಯ ಧಾರೆಗಳು. ನಿರ್ದಿಷ್ಟ ಸಂಸ್ಕಾರ ನೀಡುವ ಮೂಲಕ ವ್ಯಕ್ತಿತ್ವ ನಿರ್ಮಿಸುವ ಮಾಧ್ಯಮಗಳು. ತನ್ನ ಬದುಕಿನ ಆತ್ಯಂತಿಕ ಫಲ ಏನು ಎಂದು ಜೀವನದ ಅಂತ್ಯದಲ್ಲಿ ಅಥವಾ ಸಾವಿನ ಸನ್ನಿವೇಶದಲ್ಲಿ ವ್ಯಕ್ತಿ ಹಿಂತಿರುಗಿ ನೋಡಿಕೊಂಡಾಗ ಕಾಮ ವಾಂಛೆಯ ಈಡೇರಿಕೆಗೆ ವ್ಯಯಿಸಿದ ಯಾವ ಸಾಹಸವೂ ನೆರವಿಗೆ ಬರುವುದಿಲ್ಲ ಎಂಬುದು ಗಮನಕ್ಕೆ ಬರುತ್ತದೆ. ಕಾಮವನ್ನೇ ಬಯಸುತ್ತ, ಸಕಲ ಶ್ರಮವನ್ನೂ ಅದಕ್ಕೇ ವ್ಯಯಿಸುತ್ತ ಕಾಲ ಕಳೆದರೆ ಏನು ಫಲ? ಈಗಾಗಲೇ ಅಂಥ ಮಹಾ ನಿದರ್ಶನಗಳಿವೆ. ಅದನ್ನು ತಿಳಿದು, ಗ್ರಹಿಸಿ ಅರ್ಥಮಾಡಿಕೊಳ್ಳಿ ಎಂದು ಪುರಾಣ ಕಥೆಗಳು ಸೂಚಿಸುತ್ತವೆ. ಇವುಗಳ ಸೂಚನೆಯನ್ನು ಜನ ಅರಿತು ಬದುಕನ್ನು ಸರಿದಾರಿಯಲ್ಲಿ ನಡೆಸಿಕೊಳ್ಳಲಿ ಎಂಬುದು ಅವುಗಳ ಆಶಯ. ಬದುಕಿನ ಕನಿಷ್ಠ ಅಗತ್ಯ ಪೂರೈಸಿಕೊಂಡು ಸರಳ ಜೀವನ ನಡೆಸಲು ಎಷ್ಟು ಬೇಕೋ ಅಷ್ಟಕ್ಕೇ ಈ ಸಂಸಾರವನ್ನು ನೆಚ್ಚಿಕೊಳ್ಳಬೇಕೇ ವಿನಾ ಅದನ್ನೇ ಆವರಿಸಿಕೊಳ್ಳುವುದರಿಂದ ಖಂಡಿತವಾಗಿಯೂ ಸಂತೋಷ ದೊರಕದು ಎಂಬುದನ್ನು ಈ ಕೀರ್ತನೆ ತೋರಿಸುತ್ತದೆ.

ಶ್ರೀಪಾದರಾಜರು ಇಲ್ಲಿ ಉಲ್ಲೇಖಿಸಿದ ಕಥೆಗಳೆಲ್ಲವೂ ಜನಸಾಮಾನ್ಯರಿಗೆ ಅತ್ಯಂತ ಪರಿಚಿತವಾದವು. ಅವುಗಳನ್ನು ಆಧಾರದಲ್ಲಿಟ್ಟುಕೊಂಡೇ ಸರಳ ಬದುಕಿನ ಘನ ತತ್ತ್ವವನ್ನು

ಈ ಕೀರ್ತನೆಯಲ್ಲಿ ಕಂಡರಿಸಿದ್ದಾರೆ. ದಾಸರ ಕೀರ್ತನೆಗಳು ಹಾಡುವ ಮೂಲಕ ಜನರನ್ನು ತಲಪುವ ಉದ್ದೇಶ ಹೊಂದಿವೆ. ಹಾಡುವುದರಿಂದ ಸಾಹಿತ್ಯ ಮತ್ತು ಸಂಗೀತದ ಪರಿಣಾಮ ಮನದಲ್ಲಿ ಅಚ್ಚೊತ್ತುತ್ತದೆ. ಜೀವನದಲ್ಲಿ ಚಿಂತನ, ಮಂಥನದಂಥ ಕಾರ್ಯದಲ್ಲಿ ಮಗ್ನವಾಗದೇ ಅನ್ಯಾನ್ಯ ಕಾರ್ಯದಲ್ಲಿ ತೊಡಗಿಕೊಂಡ ಜನಸಾಮಾನ್ಯರಿಗೆ ಅವರವರ ಬದುಕಿನ ಸಾಧ್ಯತೆಯಲ್ಲೇ ಆನಂದವನ್ನೂ ಜೀವನ ಸಾರ್ಥಕತೆಯನ್ನೂ ಕಂಡುಕೊಳ್ಳಲು ಇಂಥ ಕೀರ್ತನೆಗಳು ನೆರವಾಗಿವೆ.

✠✠✠

ಸೂರ್ಯನು ತೆರಳಿದ
ಮತ್ತೆ ಮರಳಲೆಂದು
ಕಮಲವು ಮುಗಿಯಿತು
ನಾಳೆ ತೆರೆಯಲೆಂದು

RNI Reg No. : KARKAN /2012/49251

CHINTHANA BAYALU **A Peer Reviewed Journal** **ISSN 2278-2192**
Kannada Quarterly, Volume 8, Issue 1, July - September 2019
Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Printed at
Aakrithi Prints
Light House Hill Road, Mangaluru - 575 001
Pages : 64

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ನಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC : KARB0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.

ಕರ್ನಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com